
# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ ಸಂಚಿಕೆ ೪೩ ಡಿಸೆಂಬರ್ ೨೦೨೨



KARNATAKA CULTURAL ORGANIZATION BRINDAVANA (KCOB) NJ, USA

## ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಈ ಸಂಚಿಕೆಯಲ್ಲಿ


ಸಂಪಾದಕೀಯ...೩

ಅಧ್ಯಕ್ಷರ ನುಡಿ... ೪

ಜ್ಞಾನ ಜ್ಯೋತಿ...೬

ಜೀವದುಸಿರು ಹುಸಿ ಗಾಳಿಯಾದಾಗ...೮

ಬೃಂದಾವನದಲ್ಲಿ... ೧೧

ಅಮೇರಿಕಾದಲ್ಲಿ ಕನ್ನಡ ರಾಜ್ಯೋತ್ಸವ... ೧೭

ಸಂವಾದ... ೧೯

ಬೆಳ್ಳಿತೆರೆಯಲ್ಲಿ ಕನ್ನಡವೇ ತಾರೆ...೨೧

ಬೆಳಕಿನ ಹಬ್ಬ... ೨೪

ದಾಸ ಶ್ರೇಷ್ಠ...೨೬

ಚಳಿ ಚಳಿ ತಾಳೆನು...೨೮

ಸತ್ಸಂಪ್ರದಾಯ... ೨೯

ಆಹಾರ ಪದ್ಧತಿ... ೩೦

ಕವಿ-ಕಗ್ಗ ವಿಚಾರ... ೩೧

ಹಾಸ್ಯ ಪ್ರಸಂಗ...೩೪

ಕಲ್ಯಾಣೋತ್ಸವ...೩೭

ಭಾವ ಲಹರಿ...೩೯

ರುಚಿ ಅಭಿರುಚಿ...೪೨

ಪುಟಾಣಿ ಪ್ರಪಂಚ...೪೬

ಕ್ಯಾಮರಾ ಕಣ್ಣು...೪೯


ಮುಖಪುಟ ಚಿತ್ರ: ಅಮೇರಿಕಾದಲ್ಲಿ ಚಳಿಗಾಲ (ಕೃಪೆ:ಅಂತರ್ಜಾಲ)


ಮೇಲಿನ ಪುಟಗಳಿಗೆ ನೇರವಾಗಿ ಹೋಗಲು, ಆಯಾ ಶೀರ್ಷಿಕೆಗಳನ್ನು ಕ್ಲಿಕ್ ಮಾಡಿ!

ಬೃಂದಾವನ ವಾಣಿಯ ೧೨ ಸಂಚಿಕೆಗಳು

## ಸಂಪಾದಕೀಯ

ಪ್ರಿಯ ಬೃಂದಾವನ ಓದುಗರೇ

ಚಳಿಗಾಲದ ಆಗಮನ! ಅತ್ಯಂತ ತಂಪಾದ ದಿನಗಳ ಚುಮು-ಚುಮು ಆಕ್ರಮಣ! ಬಿಸಿ-ಬಿಸಿಯಾದ ತಿನಿಸುಗಳನ್ನು ಸವಿಯುತ್ತಾ ಬೆಚ್ಚಗಿನ ತೊಡುಗೆಗಳನ್ನು ಧರಿಸುತ್ತಾ ಮುಂದಿನ ಮೂರ್ನಾಲ್ಕು ತಿಂಗಳ ಪಯಣ! ಸಧ್ಯಕ್ಕೆ ಇದು ನಮ್ಮ ಮುಂದಿರುವ ಜೀವನದ ಒಂದು ಸಣ್ಣ ಚಿತ್ರಣ!

ನಯನ ಮನೋಹರವಾದ ಪತ್ರವೃಷ್ಟಿಯಿಂದ ಶರದೃತುವನ್ನು ಸಂತೋಷದಿಂದ ಬೀಳ್ಕೊಟ್ಟು ಹೇಮಂತನನ್ನು ಮತ್ತು ಹೊಸವರ್ಷವನ್ನು ಆಹ್ವಾನಿಸಿ ಆಲಿಂಗಿಸಲೆಂದೇ, ತಮ್ಮ ಮೈಕೊಡವಿಕೊಂಡು, ತೋಳುಗಳನ್ನು ಚಾಚಿ ಕಾಯುತ್ತಿರುವಂತೆ ಭಾಸವಾಗುತ್ತಿದೆ ಈ ಭೂಮಿಯ ವೃಕ್ಷಸಂಪತ್ತು!

ಅಮೆರಿಕಾದ ವಿವಿದೆಡೆಗಳಲ್ಲಿ ಮೊದಲ ಹಿಮವೃಷ್ಠಿಯ ನಿರೀಕ್ಷೆಯಲ್ಲಿ, ಕುಣಿದು ಕುಪ್ಪಳಿಸಿ ಕೇಕೆ ಹಾಕುತ ಹಿಮಮಾನವನ ಸೃಷ್ಠಿಸಲು ಮಕ್ಕಳೆಲ್ಲ ಕಾತರದಿಂದ ಕಾಯುತ್ತಿದ್ದರೆ, ಅದರ ವೈಪರೀತ್ಯದ ಪರಿಣಾಮಗಳನ್ನೆದುರಿಸಲು ತಮ್ಮ ಸಕಲ ಆಯುಧಗಳಿಂದ ಸರ್ವ-ಸನ್ನದ್ಧರಾಗುತ್ತಿದ್ದಾರೆ ದೊಡ್ಡವರು!

ಪ್ರತಿದಿನ 'ಹಗಲು' ತನ್ನ ಪಾಳಿಯನ್ನು ಮುಗಿಸಿ 'ಸಂಜೆ'ಗೆ ಜವಾಬ್ದಾರಿ ವರ್ಗಾಯಿಸುವ ಮುಂಚೆಯೇ, ಬಹಳ ಆತುರದಿಂದ 'ರಾತ್ರಿ' ನಾನೇ ಮುಂದು, ಮುಂದಿನ ಪಾಳಿ ನನ್ನದೇ ಎಂದು ಕಸಿದುಕೊಂಡು, ಕತ್ತಲನ್ನು ಬಹಳ ವೇಗವಾಗಿ ನಮಗೆ ಉಣಬಡಿಸುತ್ತಿದೆ! ಇದು ಕಣ್ಮನಗಳಿಗೆ ಸ್ವಲ್ಪ ಮಂಕೆನಿಸಿದರೂ, ಈ ಸಂಚಿಕೆಯ ಸುಂದರ ಮುಖಪುಟದ ಚಿತ್ರವೇ ಸಾರಿ ಹೇಳುವಂತೆ, ಪ್ರೀತಿಪಾತ್ರ ಬಂಧು ಮಿತ್ರರ ಜೊತೆ ಕಳೆಯುವ ವರ್ಣರಂಜಿತ ಕ್ರಿಸ್ಮಸ್ ರಜಾದಿನಗಳ ಹಾಗು ಹೊಸವರ್ಷದ ಆಗಮನದ, ಮುದನೀಡುವ ಸುಂದರವಾದ ಬೆಳಕು ನಮ್ಮ ಸನಿಹವೇ ಇದೆ! ಅದನ್ನು ಬರಮಾಡಿಕೊಳ್ಳಲು ಎಲ್ಲಾ ರೀತಿಯಲ್ಲೂ ಸಿದ್ಧರಾಗೋಣ!

ಹನ್ನೆರಡು ಒಂದು ವಿಶೇಷವಾದ ಸಂಖ್ಯೆ. ಐತಿಹಾಸಿಕವಾಗಿ, ಪೌರಾಣಿಕವಾಗಿ, ಖಗೋಳಿಕವಾಗಿ ಈ ಸಂಖ್ಯೆಗೆ ತನ್ನದೇ ಆದ ಒಂದು ವೈಶಿಷ್ಟ್ಯತೆ ಇದೆ. ಯಾವುದೇ ಕ್ಯಾಲೆಂಡರ್ ನ ವರ್ಷದಲ್ಲಿ ಬರುವ 12 ತಿಂಗಳುಗಳಾಗಿರಬಹುದು, ಸೃಷ್ಟಿ-ಸಂಕುಲದ ಮೇಲೆ ಪ್ರಭಾವವನ್ನು ಬೀರುತ್ತವೆ ಎಂದು ಪ್ರತೀತಿ ಪಡೆದಿರುವ ಜ್ಯೋತಿಷ್ಯಾಸ್ತ್ರದ 12 ರಾಶಿಗಳಿರಬಹುದು, ಭರತವರ್ಷದ ವಿವಿಧ ಮೂಲೆಗಳಲ್ಲಿರುವ ದ್ವಾದಶ ಜ್ಯೋತಿರ್ಲಿಂಗಗಳಾಗಿರಬಹುದು. ದೈಹಿಕ ಸಧೃಡತೆಗಾಗಿ ಮಾಡುವ ಸೂರ್ಯನಮಸ್ಕಾರದ 12 ಆಸನಗಳಿರಬಹುದು! ಹೀಗೇ ಹುಡುಕುತ್ತಾ ಹೋದರೆ, ಸಂಖ್ಯೆ 12 ಕ್ಕೆ ಅದರ 12 ಪಟ್ಟಿಗಿಂತಲೂ ಹೆಚ್ಚಿರುವ ಮಹತ್ವವನ್ನು ನಾವು ಕಂಡುಕೊಳ್ಳಬಹುದು.

ಈ ವರ್ಷದ 12ನೇ ತಿಂಗಳಂಚಿನಲ್ಲಿ, ಬೃಂದಾವನ "ಪ್ರಗತಿ" ತಂಡದ ಕೊನೆಯ ಹಾಗು 12 ನೇ ಆವೃತ್ತಿಯಾಗಿ, ಬೃಂದಾವನ ವಾಣಿಯ 43ನೇ ಸಂಚಿಕೆಯನ್ನು, ತಮ್ಮ ಮುಂದಿಡುತ್ತಿದ್ದೇವೆ. ವಿವಿಧ ಸಾಹಿತ್ಯಾತ್ಮಕ, ಸಾಂಸ್ಕೃತಿಕ, ಸಾಂಧರ್ಭಿಕ ಲೇಖನ, ಕವನ, ಕಥನ, ಪಾಕ ರಹಸ್ಯ, ಚಿಣ್ಣರ ಕ್ರೀಯಾಶೀಲತೆಯನ್ನು ಪ್ರದರ್ಶಿಸುವ ವಸ್ತುವನ್ನು ಹೊಂದಿರುವ ಈ ಸುಂದರ ಪುರವಣಿಯನ್ನು ತಾವು ಮುಕ್ತವಾಗಿ ಸ್ವೀಕರಿಸಿ, ತಮ್ಮ ಪ್ರತಿಕ್ರಿಯೆಗಳನ್ನು ನಮಗೆ ತಿಳಿಸುವಿರೆಂದು ಅಪೇಕ್ಷಿಸುತ್ತೇವೆ!

ತಮ್ಮೆಲ್ಲರಿಗೂ ಕ್ರಿಸ್ಮಸ್ ಹಾಗು ಹೊಸವರ್ಷದ ಶುಭಾಶಯಗಳನ್ನು ಕೋರುವ

ನಿಮ್ಮ,
ಬೃಂದಾವನ ವಾಣಿ ಸಂಪಾದಕ ತಂಡ

ಸಂಪಾದಕ ಮಂಡಳಿ:

ಶ್ರೀವಿದ್ಯಾ ಪ್ರಶಾಂತ್, ಲಕ್ಷ್ಮಿ ಕೊಲಾಲ್, ಜ್ಯೋತಿ ಚಂದ್ರ, ಸತ್ಯ, ನರಸಿಂಹ ಮೂರ್ತಿ, ವಿದ್ಯಾ ಮೂರ್ತಿ, ಶೈಲಾ ಪಾಟಂಕರ್, ಪ್ರಶಾಂತ್ ಶ್ರೀನಿವಾಸ್





## ಪ್ರಿಯ ಬೃಂದಾವನ ವಾಣಿ ಓದುಗರಿಗೆ ನನ್ನ ಪ್ರೀತಿಯ ನಮಸ್ಕಾರಗಳು

ನಾನು ನನ್ನ ಪ್ರಗತಿ ತಂಡದ ಮೂಲಕ ಬೃಂದಾವನಕ್ಕೆ ಸೇವೆಸಲ್ಲಿಸಲು ಹೆಜ್ಜೆಯಿಟ್ಟ ಎರಡು ವರ್ಷಗಳು ಹೇಗೆ ಸಂದಿಹೋದವು ಎಂಬುದು ನನಗೆ ಅಚ್ಚರಿ ಮೂಡಿಸುತ್ತದೆ.

ದುರ್ಗಮ ಕೋವಿಡ್ ಪರಿಸ್ಥಿತಿಯ ಮಧ್ಯದಲ್ಲಿ ಆರಂಭಗೊಂಡ ನಮ್ಮ ತಂಡವು ಅನೇಕ ಕಡಿದಾದ ದಾರಿಗಳನ್ನು ಹಾದು ವಿಜಯ ಸಾಧಿಸಿತೆನ್ನಲು ಹೆಮ್ಮೆಯಾಗುತ್ತದೆ. ಇಡೀ ವಿಶ್ವವನ್ನೇ ಕಂಪಿಸಿದ ಕೋವಿಡ್ ಮಹಾಮಾರಿ ಜೊತೆಗೆ ಅದರ ಅನೇಕ ಮಾರಕ ರೂಪಾಂತರಗಳು, ನಮ್ಮಲ್ಲಿ ಸುಪ್ತವಾಗಿರುವ ಮಾನವೀಯ ಮೌಲ್ಯಗಳನ್ನು ಬಡಿದೆಬ್ಬಿಸಿ, ಎಲ್ಲರೂ ಇದರ ವಿರುದ್ಧ ಹೋರಾಡುವ ಸಿಪಾಯಿಗಳನ್ನಾಗಿಸಿತು. ಇಂತಹ ದುಸ್ಥಿತಿಯಲ್ಲಿ ನಾವುಗಳೆಲ್ಲರೂ ನಮಗೆ ಸಿಕ್ಕ ಅವಕಾಶಗಳನ್ನು ಉಪಯೋಗಿಸಿಕೊಂಡು, ನಮ್ಮ ನಮ್ಮ ಕೈಲಾದ ಸಹಾಯಗಳನ್ನು ಮಾಡುತ್ತಿದ್ದರೂ, ಒಂದು ಸಮುದಾಯದ ಮೂಲಕ ಹತ್ತಾರು ಜನ ಒಟ್ಟಿಗೇ ಸೇರಿ ಮಾಡುವುದರಲ್ಲಿ ಹೆಚ್ಚು ಶಕ್ತಿ ಅಡಗಿದೆ ಎಂಬುದನ್ನು ನಾವು ಈ ಮೂಲಕ ಮನಗೊಂಡೆವು. ಈ ಮಹಾಮಾರಿಗೆ ತುತ್ತಾದ ನಮ್ಮ ಸಮುದಾಯದಲ್ಲಿದ್ದ ಅನೇಕ ಕುಟುಂಬಗಳು ತಮ್ಮ ನೆಂಟರಿಷ್ಟರನ್ನು ಕಳೆದುಕೊಂಡಾಗ, ಪರಸ್ಪರ ಸಹಾಯ, ಸಹಕಾರ, ಪ್ರಾರ್ಥನೆ, ನೆರವು, ಸಾಂತ್ವನಕ್ಕಾಗಿ ನಮ್ಮ ಇಡೀ ತಂಡ ಸಜ್ಜಾಗಿ ನಿಂತಿತ್ತು. ಇಂತಹ ಒಂದು ಸಮುದಾಯದ ಭಾಗವಾದ ನಾವೆಲ್ಲರೂ ನಿಜಕ್ಕೂ ಅದೃಷ್ಟವಂತರು.

ನಾನು ಅಧ್ಯಕ್ಷಳಾಗಿ ಅಧಿಕಾರ ಸ್ವೀಕರಿಸಿದಾಗ ಕೋವಿಡ್ ಜೊತೆ ಜೊತೆಗೆ ಸಂಸ್ಥೆಯಲ್ಲಿದ್ದ ಅನೇಕ ಗೊಂದಲಗಳ ನಡುವೆಯೂ ಸಮುದಾಯವನ್ನು ಒಂದುಗೂಡಿಸಿ, ಸದಸ್ಯರನ್ನು ಸಂತೋಷದ ಮನಸ್ಥಿತಿಯಲ್ಲಿ ಇರಿಸಲು ನಾವು ನಿರಂತರವಾಗಿ ಹೊಸ ಮಾರ್ಗಗಳನ್ನು ಹುಡುಕುತ್ತಾ ಹೊರಟೆವು.

**ಈ ಎರಡು ವರ್ಷಗಳಲ್ಲಿ ನಡೆದ ಮುಖ್ಯ ಕಾರ್ಯಕಲಾಪಗಳಲ್ಲಿ ಕೆಲವು ಮುಖ್ಯವಾದವು,**

- ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಸಲುವಾಗಿ ಯೋಗ, ಧ್ಯಾನ ಶಿಬಿರ ಮತ್ತು ಪ್ರಕೃತಿ ಬೃಂದಾವನ ಕ್ಲಬ್‌ಗಳ ಆರಂಭ,
- ನಮ್ಮ ಸಂಸ್ಥೆಯನ್ನು ಕಟ್ಟಲು ಬುನಾದಿಯನ್ನು ಹಾಕಿದ ಸಂಸ್ಥಾಪಕ ಸದಸ್ಯರಿಗೆ ವಿಶೇಷ ಆಹ್ವಾನ, ಗೌರವ,
- ಅಂತರರಾಷ್ಟ್ರೀಯ ಮಹಿಳಾ ದಿನದಂದು ಬೃಂದಾವನಕ್ಕೆ ಅಧ್ಯಕ್ಷಿಣಿಯರಾಗಿ ಸೇವೆಸಲ್ಲಿಸಿದ ಎಲ್ಲಾ ಮಹಿಳಾ ಅಧ್ಯಕ್ಷರಿಂದ ನವೀಕರಿಸಿದ ನಮ್ಮ ಸಂಸ್ಥೆಯ ವೆಬ್‌ಸೈಟಿನ ಉದ್ಘಾಟನೆ,
- 2021ರ ಯುಗಾಗಿ ಹಬ್ಬವನ್ನು ಸದಸ್ಯರೊಂದಿಗೆ ಕೊಂಡಾಡುವುದರ ಜೊತೆಗೆ, ಬೃಂದಾವನಕ್ಕೆ ಅತ್ಯಂತ ಆತ್ಮೀಯರಾಗಿ ಅಥವಾ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿ, ನಮ್ಮನ್ನು ಅಗಲಿದ ಅವರ ನೆನಪಿಗಾಗಿ ಅವರ ಕುಟುಂಬಗಳಿಗೆ ಅಡ್ಯಾರ್ ಆನಂದ ಭವನ(A2B)ದಿಂದ ವಿಶೇಷವಾಗಿ ತಯಾರಿಸಿದ ಯುಗಾದಿಯ ಹಬ್ಬದೂಟವನ್ನು ಅವರ ಮನೆಯವರಿಗೆ ತಲುಪಿಸುವುದರ ಮೂಲಕ ಅಗಲಿದ ಗಣ್ಯರಿಗೆ ನಾವು ಸಲ್ಲಿಸಿದ ಗೌರವ,
- ನಮ್ಮ ಸಂಸ್ಥೆಯ ಯುವ ಸದಸ್ಯರ ಶ್ರಮವನ್ನು ಗುರುತಿಸಿ, ಪ್ರೋತ್ಸಾಹಿಸಲು ಅಧ್ಯಕ್ಷೀಯ ಸ್ವಯಂ ಸೇವಾ ಪ್ರಶಸ್ತಿಗೆ(PVSA) ಅರ್ಹತೆಯನ್ನು ಪಡೆದಿರುವ ಸಂಸ್ಥೆಯಾನ್ನಾಗಿ ದಾಖಲಿಸಿದ ಕೀರ್ತಿ,
- 2021 ಮತ್ತು 2022ರ Giving Tuesdayಯ ಸಲುವಾಗಿ Face Bookನಲ್ಲಿ ಮತ್ತು ಕಾರ್ಪೊರೇಟ್ ಪ್ರಾಯೋಜಕತ್ವದ ಮುಖಾಂತರ ನಡೆಸಿದ ನಿಧಿ ಸಂಗ್ರಹಣೆ ನಮ್ಮ ಬೃಂದಾವನದ ಉದಾರ ದಾನಿಗಳಿಂದ ಕಂಡ ದೊಡ್ಡ ಯಶಸ್ಸನು,
- ಬೃಂದಾವನ 5K ಓಟಕ್ಕೆ 400ಕ್ಕೂ ಹೆಚ್ಚು ಮಂದಿ ಆಗಮಿಸಿದ ದಾಖಲಾತಿ,
- ಅನೇಕ ಧರ್ಮ ಕಾರ್ಯಗಳು,
- ಉತ್ತಮ ಮಟ್ಟದ ಹೊರಾಂಗಣ ಮತ್ತು ಒಳಾಂಗಣ ಸ್ಥಳಗಳಲ್ಲಿ ಅನೇಕ ಉತ್ತಮ ಮಟ್ಟದ ಕಲಾವಿದರು, ಗಣ್ಯರಿಂದ ಉತ್ಕೃಷ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು,ಆತಿಥ್ಯ, ಊಟೋಪಚಾರ ಮುಂತಾದುವುಗಳು.

ಒಟ್ಟಿನಲ್ಲಿ ಹೇಳುವುದಾದರೆ, ಇವೆಲ್ಲದಕ್ಕೂ ಕಾರಣ ನನ್ನ ಅತ್ಯಂತ ಸಮರ್ಥ 'ಪ್ರಗತಿ' ತಂಡ. ನನ್ನ ಭುಜಕ್ಕೆ ಭುಜಕೊಟ್ಟು ನಿಂತು ಅತ್ಯಂತ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ ಎಲ್ಲಾ ಸಮಿತಿಯ ಸದಸ್ಯರಿಗೂ, ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನನಗೆ ಸಹಾಯ ಮಾಡಿದ ಪ್ರತಿಯೊಬ್ಬರಿಗೂ ನನ್ನ ಅನಂತಾನಂತ ಧನ್ಯವಾದಗಳು. ಈ ಎಲ್ಲಾ ಸಂಘಟಿತ ಶಕ್ತಿ ಇಲ್ಲದಿದ್ದಲ್ಲಿ, ನಾವು ಸಂಸ್ಥೆಯಲ್ಲಿ ಏನನ್ನೂ ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ.

ನಮ್ಮಲ್ಲಿರುವ ಸಾಮರ್ಥ್ಯವನ್ನು ನಂಬಿ ನಮ್ಮ ಬೆನ್ನು ತಟ್ಟಿ ಪ್ರಶಂಸಿಸಿ, ಪ್ರೋತ್ಸಾಹಿಸಿ, ಬೆಂಬಲಿಸಿ, ಎಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನಮ್ಮ ಸಂಸ್ಥೆಯನ್ನು ಬೆಳೆಸಲು ಕೈಜೋಡಿಸಿದ ಬೃಂದಾವನದ ಸದಸ್ಯರಿಗೆ ನಾನು ಚಿರಋಣಿ. ಈ ಎರಡು ವರ್ಷಗಳ ಎಲ್ಲಾ ಕಾರ್ಯಕ್ರಮಗಳನ್ನು ನಡೆಸಲು ಆರ್ಥಿಕ ನೆರವು ನೀಡಿದ ಎಲ್ಲ ಪ್ರಾಯೋಜಕರಿಗೂ ನನ್ನ ಧನ್ಯವಾದಗಳು.

ಈ ಎರಡು ವರ್ಷಗಳು ನನ್ನನ್ನು ಸಹಿಸಿಕೊಂಡು ನನಗೆ ಸಹಕಾರಿಯಾಗಿದ್ದ ನನ್ನ ಕುಟುಂಬದ ಸಹಿಷ್ಣುತೆಯನ್ನು ನಾನು ಮರೆಯುವಂತೆಯೇ ಇಲ್ಲ. ನನ್ನ ಪತಿ ಹಾಗೂ ನನ್ನ ಮಕ್ಕಳಿಗೆ ನನ್ನ ಧನ್ಯವಾದಗಳು.

ನಡೆವವನು ಎಡಹುವುದು ಸಹಜವೆಂಬಂತೆ, ಯಾವುದೇ ಸಂಸ್ಥೆಯನ್ನು ಬೆಳೆಸುವಾಗ ಅಥವಾ ಕಾರ್ಯಕ್ರಮಗಳನ್ನು ನಡೆಸುವಾಗ ಅರಿವಿಲ್ಲದೇ ಏನಾದರೂ ತಪ್ಪುಗಳಾಗಿದ್ದಲ್ಲಿ ಕ್ಷಮೆಯಿರಲಿ. ಅವುಗಳನ್ನು ಬದಿಗೊತ್ತಿ, ಸಂಸ್ಥೆಯ ಬೆಳವಣಿಗೆಯನ್ನೇ ಧ್ಯೇಯವಾಗಿಟ್ಟುಕೊಂಡು, ಬೃಂದಾವನವನ್ನು ಇನ್ನೂ ಎತ್ತರಕ್ಕೆ ಬೆಳೆಸಲು ಸಹಕಾರಿಯಾಗಿರುವಿರೆಂದು ನಾನು ಆಶಿಸುತ್ತೇನೆ.

ಈ ಎರಡು ವರ್ಷಗಳ ಕಾಲ ಬೃಂದಾವನದ ಮಡಿಲಿನಲ್ಲಿ ಆಡಿ, ಹಾಡಿ, ಸಂಭ್ರಮಿಸಿ, ನನ್ನ ಅಳಿಲ ಸೇವೆಯನ್ನು ಸಲ್ಲಿಸಲು ಶಕ್ತಿಯನ್ನು ಕೊಟ್ಟ ಆ ಭಗವಂತನಿಗೆ ನಾನೆಂದೂ ತಲೆಬಾಗುತ್ತೇನೆ. ಇಂತಹ ಒಂದು ಅವಕಾಶವನ್ನು ಪಡೆದ ನಾನು ನಿಜಕ್ಕೂ ಧನ್ಯೆ.

ಮುಂಬರುವ ತಂಡಕ್ಕೆ ಅಭಿನಂದನೆ, ಶುಭ ಹಾರೈಕೆಗಳನ್ನು ಕೋರುತ್ತಾ, ತನ್ನ ಮಡಿಲಿನಲ್ಲಿ ನಮ್ಮನ್ನೆಲ್ಲಾ ಒಟ್ಟುಗೂಡಿಸಿ, ನಾವು ನಕ್ಕು ನಲಿಯುವುದನ್ನು ನೋಡಿ ಸಂಭ್ರಮಿಸುತ್ತಿರುವ ನಮ್ಮ ಬೃಂದಾವನವೆಂಬ ತೋಟ ಎಂದೆಂದೂ ಹಸಿರಾಗಿರಲಿ ಎಂದು ಹಾರೈಸುತ್ತಾ, ಈ ನನ್ನ ಪ್ರೀತಿಯ ಸಹಿಯನ್ನು ಹಾಕುತ್ತಿದ್ದೇನೆ.

**ಇಂತಿ**
**ನಿಮ್ಮೆಲರ ಪ್ರೀತಿಯ**
**ಪದ್ಮಿನಿ ಹೇಮಂತ್**


**ಪ್ರಕಾಶಕರು:**
**ಬೃಂದಾವನ ಕನ್ನಡ ಕೂಟ**
501(3)(c) ಪಡೆದ ಚಾರಿಟಿ ಸಂಸ್ಥೆ
Karnataka Cultural Organization (KCO) Brindavana
New Jersy, USA

www.Brindavana.org



© 2022 All right reserved. No part of this newsletter may be reproduced, photocopied, or reused without prior permission from the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು. ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ "ಬೃಂದಾವನ ವಾಣಿ" ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ. ಚಿತ್ರ ಕೃಪೆ ಅಂತರ್ಜಾಲ/ಲೇಖಕರು


ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vani@brindavana.org

**ಸದಸ್ಯತ್ವ ಮಾಹಿತಿ**

ಬೃಂದಾವನ ಕನ್ನಡ ಸಂಸ್ಥೆ, ನ್ಯೂ ಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಚಾರಿಟೆಬಲ್ ಸಂಸ್ಥೆ. ನ್ಯೂ ಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡತನವನ್ನು ಬೆಳೆಸಿ, ಪೋಷಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನೀವು ಈಗಾಗಲೇ ಸದಸ್ಯರಾಗಿ ನೋಂದಾಯಿತರಾಗಿರದಿದ್ದಲ್ಲಿ ದಯವಿಟ್ಟು ಸದಸ್ಯರಾಗುವಂತೆ ಈ ಮೂಲಕ ಕೋರುತ್ತಿದ್ದೇವೆ. ವಾರ್ಷಿಕ, ದ್ವೈವಾರ್ಷಿಕ, ಅಜೀವ ಮತ್ತು ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

www.brindavana.org ಗೆ ಭೇಟಿ ಕೊಟ್ಟು, ನಿಮ್ಮ ವಿವರಗಳನ್ನು ನೀಡಿ, ಸದಸ್ಯತ್ವ ಪಡೆಯಿರಿ. ನಿಮ್ಮ ದೇಣಿಗೆ ಟ್ಯಾಕ್ಸ್ ರಹಿತ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: info@brindavana.org



# ತಪ್ಪು

ಶ್ರೀ ಯೋಗೀಂದ್ರ ಭಟ್ ಉಳಿ. ಶ್ರೀ ಕೃಷ್ಣವೃಂದಾವನ, ನ್ಯೂಜೆರ್ಸಿ.

ಇದ್ದಕ್ಕಿದ್ದಂತೆ ನಾವು ನಡೆಯಲು ಶುರುಮಾಡಿದ್ದಲ್ಲ. ಮೊದಮೊದಲು ನಡೆಯಲು ಕಲಿಯುವಾಗ ನಾವೆಲ್ಲರೂ ಸ್ವಲ್ಪ ಕಷ್ಟಪಟ್ಟಿದ್ದೇವೆ. ತಪ್ಪು ತಪ್ಪು ಹೆಜ್ಜೆಗಳನ್ನಿಟ್ಟಿದ್ದೇವೆ. ಮಾತನಾಡಲು ಕಲಿತದ್ದೂ ಹಾಗೆಯೇ ತಾನೇ? ನಮ್ಮ ಮೊದಲ ಮಾತುಗಳು ಶುರುವಾಗಿದ್ದೇ ತೊದಲು ನುಡಿಗಳಿಂದ. ಊಟ , ಆಟ, ಪಾಠ, ನಿದ್ದೆ ಇತ್ಯಾದಿ ನಮ್ಮ ನಿತ್ಯ ವಿಧಿಗಳು ಮೊದಲುಗೊಂಡಾಗಲೆಲ್ಲಾ ನಾವು ಎಡವಿದ್ದೇವೆ. ಅವುಗಳಲ್ಲಿ ಹಿಡಿತವನ್ನು ಸಾಧಿಸಿಕೊಳ್ಳಲು, ಶಿಸ್ತನ್ನು ಸಂಪಾದಿಸಲು ಹೆಣಗಾಡಿದ್ದೇವೆ. ಹೀಗೆ ನಮ್ಮೆಲ್ಲರ ಜೀವನಯಾನವೂ ಆರಂಭಗೊಂಡದ್ದು ತಪ್ಪುಗಳಿಂದಲೇ!

ಆದರೆ ಅಂತಹ ನಮ್ಮ ನೂರಾರು ತಪ್ಪುಗಳನ್ನು ಪ್ರೀತಿಯಿಂದ ಮನ್ನಿಸಿ, ಸರಿಮಾಡಿಕೊಂಡು ಮುನ್ನಡೆಯಲು ಸಹಕರಿಸಿದ ನಮ್ಮ ಹೆತ್ತವರ, ಶಿಕ್ಷಕರ, ಒಡನಾಡಿಗಳ ತಾಳ್ಮೆ ಮತ್ತು ಔದಾರ್ಯದಿಂದಾಗಿ ನಾವಿಂದು ಸರಿದಾರಿಯಲ್ಲಿದ್ದೇವೆ. ಸುಸಂಸ್ಕೃತರಾಗಿದ್ದೇವೆ. ನಾಗರೀಕರೆನಿಸಿಕೊಂಡಿದ್ದೇವೆ. ನೆಮ್ಮದಿಯಿಂದಿದ್ದೇವೆ.

ಜೀವನದಲ್ಲಿ ತಪ್ಪುಗಳನ್ನು ಮಾಡದವರು ಯಾರೂ ಇಲ್ಲ. ಬಹುಶಃ ತಪ್ಪುಗಳಿಲ್ಲದೇ ಯಾರಿಗೂ ಯಾವುದನ್ನೂ ಕಲಿಯುವುದು ಸಾಧ್ಯವಿಲ್ಲ.

ನಾವಿಂದು ಎಷ್ಟೋ ವಿಷಯಗಳಲ್ಲಿ ಪ್ರಾವೀಣ್ಯವನ್ನೋ ಪಾಂಡಿತ್ಯವನ್ನೋ ಪಡೆದಿರಬಹುದು. ಆದರೆ ಆ ನಮ್ಮ ಆರಂಭದ ದಿನಗಳಲ್ಲಿ ಮಾಡಿಕೊಂಡ ಎಡವಟ್ಟುಗಳನ್ನು ಯಾವತ್ತಿಗೂ ಮರೆಯುವಂತಿಲ್ಲ. ಇಂದು ನಾವು ಹತ್ತಾರು ಪತ್ರಿಕೆಗಳನ್ನೋ , ಪುಸ್ತಕಗಳನ್ನೋ ಒಂದೇ ಉಸಿರಿನಲ್ಲಿ ಓದಿ ಬದಿಗಿಡಬಲ್ಲೆವು.



ಆದರೆ ಆರಂಭದಲ್ಲಿ ಒಂದೊಂದೇ ಅಕ್ಷರಗಳನ್ನು ಗುರುತಿಸಿ ಕಲಿತು ಓದಲು ಬರೆಯಲು ವಾಕ್ಯಗಳನ್ನು ರಚಿಸಲು ಒದ್ದಾಡಿದವರು ನಾವು.

ಹಾಡುಗಾರರೂ ಹಾಗೆಯೇ. ಒಂದೊಂದೇ ಸ್ವರಗಳನ್ನು ಪರಿಚಯಿಸಿಕೊಂಡು ರಾಗಗಳನ್ನು ಕಲಿತು ಅಭ್ಯಾಸ ಆರಂಭಿಸಿ ಎಷ್ಟೋ ವರ್ಷಗಳ ಸಾಧನೆಯ ನಂತರ ತಪ್ಪಿಲ್ಲದೆ ನಿರರ್ಗಳವಾಗಿ ಹಾಡಲು ಸಮರ್ಥರಾಗುತ್ತಾರೆ. ಚಿತ್ರಕಾರನು ಕುಂಚದಲ್ಲಿ ಉತ್ತಮ ಹಿಡಿತ ಸಾಧಿಸ ಬೇಕಾದರೆ ಅದೆಷ್ಟೋ ಕಾಗದದ ಹಾಳೆಗಳನ್ನು ಚಿತ್ತುಮಾಡಿ ಬಿಸಾಡಿರುತ್ತಾನೆ. ಒಳ್ಳೆಯ ಬರಹಗಾರನೂ ಅಷ್ಟೇ. ಮೊದಮೊದಲು ಹಲವಾರು ಬಾರಿ ಬರೆದು ಬದಲಿಸಿ ತಿದ್ದಿ ತೀಡಿ ಒದ್ದಾಡಿಯೇ ಬರೆಯುವ ಕಲೆಯನ್ನು ಕರಗತಗೊಳಿಸಿಕೊಂಡದ್ದು.

ನಮ್ಮ ಈ ಜೀವನವೊಂದು ಕಲಿತು ಮುಗಿಯದ ವಿಶ್ವ ವಿದ್ಯಾಲಯ. ಬದುಕಿನುದ್ದಕ್ಕೂ ನಾವು ವಿದ್ಯಾರ್ಥಿಗಳು. ನಮ್ಮ ತಪ್ಪುಗಳೇ ನಮಗೆ ಪಾಠಕಲಿಸುವ ಗುರುಗಳು. ನಾವು ತಪ್ಪೆಸಗಿ, ಸರಿಪಡಿಸಿಕೊಂಡು ಕಲಿತು ಬೆಳೆದಂತಹ ಬದುಕನ್ನು ನಮ್ಮ ಮುಂದಿನವರೂ ಮುಂದುವರಿಸುತ್ತಿದ್ದಾರೆ. ಅವರಿಗೂ ತಮ್ಮ ತಮ್ಮ ತಪ್ಪುಗಳಿಂದ ಕಲಿಯಲು ಮತ್ತು ಬೆಳೆಯಲು ಅವಕಾಶಗಳಿವೆ.

ಇತರರು ಮಾಡಿದ ಯಾವುದೋ ಒಂದು ತಪ್ಪನ್ನು ಮತ್ತೆ ಮತ್ತೆ ನೆನಪಿಸಿ ಹೀಯಾಳಿಸುವ ಚಾಳಿ ಕೆಲವರದ್ದು. ತಮ್ಮ ಪೂರ್ವಾವಸ್ಥೆಯನ್ನು ಮರೆತ ದುರುಳರ ದಾರ್ಷ್ಟ್ಯವದು. ಅಂಥವರ ಹೀಯಾಳಿಕೆಗಳಿಂದ ಕುತ್ಸಿತರಾದ ಕೆಲವೊಂದು ಸಾತ್ವಿಕರ ನಿರ್ಮಲ ಮನಸ್ಸು ಮತ್ತಷ್ಟು ಕುಗ್ಗಿಹೋಗಬಹುದು. ಅವರ ಜೀವನೋತ್ಸಾಹವನ್ನೇ ಕಸಿದುಕೊಳ್ಳಬಹುದು.

ಹಿಂದಿನ ತಮ್ಮ ತಪ್ಪುಗಳನ್ನು ಮರೆತ ಮತ್ತು ತಮ್ಮ ಬೆನ್ನಿಗಂಟಿಕೊಂಡಿರುವ ದೋಷಗಳನ್ನು ಗಮನಿಸದ ಕೆಲವರು, ಈಗ ತಮ್ಮ ಪಾಡಿಗೆ ತಾವಿರುವ ಮುಗ್ಧರ ಕೆಲವೊಂದು ತಪ್ಪುಗಳನ್ನು ಸುಮ್ಮನೆ ಕಂಡು ಹುಡುಕಿ ಹಂಗಿಸುತ್ತಾರೆ. ಎಮ್ಮೆಯೊಂದು ತನ್ನ ಮುಂದೆ ಸಾಗುತ್ತಿರುವ ಎಮ್ಮೆ ಬತ್ತಲಾಗಿರುವುದನ್ನು ಕಂಡು ಮುಸಿಮುಸಿ ನಗುವಂತೆ. ಅಂಥವರು ನಮ್ಮ ಬದುಕಿನಲ್ಲೂ ಕಾಣಸಿಗಬಹುದು. ಅವರನ್ನು ತಿದ್ದುವುದು ಸಾಧ್ಯವಿಲ್ಲ. ಎದುರಿಸಿ ನಮ್ಮನ್ನು ಸಮರ್ಥಿಸಿಕೊಳ್ಳುವುದೂ ಅಗತ್ಯವಲ್ಲ. ಅಂಥವರ ಟೀಕೆಗಳಲ್ಲಿರುವ ಒಳ್ಳೆಯದನ್ನು ಮಾತ್ರ ಸ್ವೀಕರಿಸಿ ಉಳಿದದ್ದನ್ನು ನಿರ್ಲಕ್ಷಿಸುತ್ತಾ ನಮ್ಮ ಪಾಡಿಗೆ ನಾವು ಮುಂದುವರಿಯಬೇಕು.

ಇನ್ನೂ ಕೆಲವರಿದ್ದಾರೆ. ತಮ್ಮ ತಪ್ಪುಗಳನ್ನು ಯಾವತ್ತೂ ಒಪ್ಪಿಕೊಳ್ಳದವರು. ಹೇಗಾದರೂ ಮಾಡಿ ಮಾಡಿ ತಮ್ಮನ್ನು ತಾವು ಸಮರ್ಥಿಸಿಕೊಳ್ಳುವವರು. ತಮ್ಮ ತಪ್ಪುಗಳು ಕಣ್ಣಿಗೆ ರಾಚುವಂತಿದ್ದರೂ ಒಪ್ಪಿಕೊಳ್ಳಲು ನಿರಾಕರಿಸುವವರು. ಹೆಂಡದ ದುರ್ವಾಸನೆ ಬರುತ್ತಿರುತ್ತದ್ದರೂ ನಾನು ಕುಡಿದೇ ಇಲ್ಲವೆಂದು ವಾದಿಸುವ ಕುಡುಕರ ಹಾಗೆ.

ಆದರದು ಬಹುಕಾಲ ನಡೆಯುವುದಿಲ್ಲ. ಮಾಡಿದ ತಪ್ಪುಗಳನ್ನು ಮರೆಮಾಚಲು ಯತ್ನಿಸುವುದೆಂದರೆ ಸುಡುವ ಬೆಂಕಿಯನ್ನು ತರಗೆಲೆಗಳಿಂದ ಮುಚ್ಚಿಡುವಂತೆ. ಇಂದಲ್ಲ ನಾಳೆ ಅದು ಹೊರಗೆ ಬಂದೇ ಬರುತ್ತದೆ. ತಮ್ಮ ತಪ್ಪುಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡವರಿಗೆ ಇಷ್ಟೆಲ್ಲಾ ಕಷ್ಟಗಳಿಲ್ಲ. ವಿಶ್ವಾಸವೂ ಉಳಿಯುತ್ತದೆ. ಆತ್ಮೀಯತೆಯೂ ಬೆಳೆಯುತ್ತದೆ.

ಆದರೆ ನಮ್ಮ ಜೀವನದ ಕೆಲವೊಂದು ತಪ್ಪುಗಳಿಗೆ ಮತ್ತೆ ಸರಿಪಡಿಸಿಕೊಳ್ಳುವ ಅವಕಾಶಗಳೇ ಇರುವುದಿಲ್ಲ. ವೇಗದ ರಸ್ತೆಯಲ್ಲಿ ವಾಹನ ಚಲಾಯಿಸುವಂತೆ. ಸಾರ್ವಜನಿಕರೆದುರು ಮಾಡುವ ಮಾರಣಾಂತಿಕ ಸರ್ಕಸ್ ಪ್ರದರ್ಶನದಂತೆ. ಒಂದು ಸಣ್ಣ ತಪ್ಪು ಬದುಕನ್ನೇ ಬಲಿತೆಗೆದುಕೊಂಡು ಬಿಡಬಹುದು. ಅಂತಹ ಸೂಕ್ಷ್ಮ ಸಂದರ್ಭಗಳನ್ನು ನಾವೂ ಎದುರಿಸಬೇಕಾಗಬಹುದು. ಆಗ ಸಾಕಷ್ಟು ಚಿಂತನೆ ಮತ್ತು ಪೂರ್ವ ಸಿದ್ಧತೆಗಳೊಂದಿಗ ಜಾಗ್ರತೆಯಿಂದ ಮುಂದುವರಿಯಬೇಕು. ಮೈಯ್ಯೆಲ್ಲಾ ಕಣ್ಣಾಗಿರಬೇಕು.

ಆಗ ತಾನೇ ಮದುವೆಯಾಗಿ ನವಜೀವನ ಯಾನ ಪ್ರಾರಂಭಿಸಿದ ಹೊಸ ಜೋಡಿಗಳಿಗೆ ವೈವಾಹಿಕ ಬದುಕಿನಲ್ಲಿ ವೈಯ್ಯಕ್ತಿಕವಾಗಿ ಎದುರಾಗುವ ಸವಾಲೆಂದರೆ, ತಪ್ಪು ಒಪ್ಪುಗಳ ಪರೀಕ್ಷೆ. ತಮ್ಮ ತಪ್ಪುಗಳನ್ನು ಒಪ್ಪಿಕೊಂಡು ಇತರರದ್ದನ್ನು ಪ್ರೀತಿಯಿಂದ ಕ್ಷಮಿಸುವ ಮುಕ್ತ ಮನಸ್ಸುಗಳು ಬೇಗನೆ ಹೊಂದಿಕೊಳ್ಳುತ್ತವೆ. ಬಹುಕಾಲ ಬದುಕಿ ಚೆನ್ನಾಗಿ ಬಾಳುತ್ತವೆ. ತಪ್ಪುಗಳನ್ನು ತಿದ್ದಿಕೊಳ್ಳಲು ಪರಸ್ಪರ ಸಹಕರಿಸಿಕೊಂಡು ಬದುಕುವುದೇ ದಾಂಪತ್ಯ . ಕೌಟುಂಬಿಕ ಸಾಮರಸ್ಯದ ಪರಮ ರಹಸ್ಯ. ಮನೆಯವರ ಭಾವನೆಗಳನ್ನು ಪರಸ್ಪರ ಅರ್ಥೈಸಿಕೊಂಡವರ ಬದುಕು ಬಹಳ ಸುಂದರ. ಇಲ್ಲವಾದರೆ ಜೀವನವೆನ್ನುವುದು ನಿತ್ಯ ನರಕ. ಏಕೆಂದರೆ ದಾಂಪತ್ಯ ಕಲಹಗಳು ಮೊದಲುಗೊಳ್ಳುವುದೇ ಪರಸ್ಪರ ದೋಷಾರೋಪಗಳಿಂದ!

ಸಾಧ್ಯವಾದಷ್ಟು ನಮ್ಮ ತಪ್ಪುಗಳನ್ನು ನಾವೇ ಗುರುತಿಸಿಕೊಳ್ಳಬೇಕು. ನಿರ್ಲಕ್ಷಿಸಬಾರದು. ತಪ್ಪಾಗಿದೆಯೆಂದು ಗೊತ್ತಾದ ನಂತರವೂ ಹಾಗೆಯೇ ಮುಂದುವರಿಸಿಕೊಂಡು ಹೋಗುವುದು ಮಹಾ ತಪ್ಪು. ಅನರ್ಥಗಳಿಗೆ ಆಹ್ವಾನ. ತಪ್ಪುಗಳ ಕಡೆಗೆ ಸ್ವಲ್ಪ ವಿಶೇಷ ಗಮನ ಕೊಟ್ಟರೆ ಮತ್ತೆ ಅದು ಮರುಕಳಿಸುವುದಿಲ್ಲ. ತಪ್ಪುಗಳನ್ನು ನಿಯಂತ್ರಿಸಲು, ಸರಿಪಡಿಸಿಕೊಳ್ಳಲು ನಮಗೆ ಮುಖ್ಯವಾಗಿ ಬೇಕಾಗಿರುವುದು ಮುಕ್ತ ಮನಸ್ಸು. ಜೊತೆಗೆ ಏಕಾಗ್ರತೆ, ಸಹನೆ ಮತ್ತು ಸಂಯಮ.



# ಚಾಕಲೇಟ್ ಕಲಿಸುವ ಜೀವನ ಪಾಠ

***ಹೇಮಂತ್ ಚಿನ್ನು***, *ಹಾಸನ*

ಎಲ್ಲೋ ಹೊರ ದೇಶಕ್ಕೆ ಹೋಗಿ ಬರುವಾಗ ಒಂದಿಷ್ಟು ಚಾಕೋಲೇಟ್ ತಂದಿರ್ತೀರಿ ಅಂತ ಇಟ್ಕೊಳ್ಳಿ...ತಂದಿರೋ ಚಾಕಲೇಟ್ ಬೇಕಾಬಿಟ್ಟೆ ಯಾರಿಗೂ ಹಂಚೋದಿಲ್ಲ. ಎಲ್ಲೆಂದರಲ್ಲಿ ಇಟ್ಟು ನಿರ್ಲಕ್ಷ್ಯ ಮಾಡೋದಿಲ್ಲ. ಒಂದೇ ಸಲ ಜಾಸ್ತಿ ತಿನ್ನಬೇಕು ಅನ್ನಿಸಿದ್ರೂ, ಆ ಒಂದು ವಿಶೇಷ ಸವಿಯನ್ನು ಇನ್ನೂ ಜಾಸ್ತಿ ದಿನ ಅನುಭವಿಸಬೇಕು ಅಂತ ಅಷ್ಟಷ್ಟೇ ತೆಗ್ದು ತಿಂತೀರಿ. ಇಲ್ಲೆಲ್ಲೂ ಸಿಗದ ಚಾಕಲೇಟ್ ಅಲ್ಲಿಂದ ತಂದಿದ್ದೀನಿ ಅನ್ನೋ ಸುಪೀರಿಯರ್ ಫೀಲ್ ನಲ್ಲಿ ಇರ್ತೀರಿ.

***ಯಾಕೆ ಹೇಳಿ..?***

ಅದು ಇಲ್ಲಿ ಎಲ್ಲೂ ಸಿಗೋಲ್ಲ, ಮತ್ತೆ ಅದೇ ಚಾಕೋಲೇಟ್ ಗೋಸ್ಕರ ಅಷ್ಟು ದೂರ ಹೋಗೋಕೆ ಆಗೋಲ್ಲ, ಅದನ್ನು ಪಡೆಯೋಕೆ ಯಾವುದೋ ಒಂದು ರೀತಿಯಲ್ಲಿ ನಾವು ಎಫರ್ಟ್ ಹಾಕ್ಬೇಕು.. ಜಾಸ್ತಿ ಹಣ ಕೊಡ್ಬೇಕು, ತುಂಬಾ ಕಷ್ಟ ಪಡಬೇಕು. ಈಜೀಯಾಗಿ ಸಿಗೋದಿಲ್ಲ.

ಅದೇ ನಮ್ಮ ಪಕ್ಕದ ಮಾರ್ಟ್ ಲ್ಲೋ, ಅಂಗಡಿಯಲ್ಲೋ ಎಷ್ಟೊಂದೆಲ್ಲ ಚಾಕಲೇಟ್ ಈಜಿಯಾಗಿ ಸಿಗುತ್ತೆ, ಅದ್ಕಿಂತನೂ ರುಚಿಯಾಗೇ ಇರುತ್ತೆ. ಕಡಿಮೆ ಖರ್ಚಿನಲ್ಲೇ ಸಿಗುತ್ತೆ. ಆದ್ರೂ ನಾವು ವಿದೇಶದಿಂದ ತಂದ ಚಾಕಲೇಟ್ ಗೆ ಕೊಟ್ಟ ಮಹತ್ವ ಇಲ್ಲಿಯೇ ಸುಲಭವಾಗಿ ಸಿಗುವ ಚಾಕೋಲೇಟ್ ಗೆ ಕೊಡೋದೆ ಇಲ್ಲ. ಇಲ್ಲೆ ಇರುತ್ತಲ್ಲ, ಸಿಗುತ್ತೆ. ಬೇಕಾದಾಗೆಲ್ಲ ಹೋಗಿ ತಂದ್ರೆ ಆಯ್ತು.. ಅದಿಲ್ಲದಿದ್ರೆ ಇನ್ನೊಂದು, ಅನ್ನೋ ಉಡಾಫೆಯ ಭಾವ ಇರುತ್ತೆ. ...



***ಕಾರಣ ಇಷ್ಟೇ...***

ಸುಲಭವಾಗಿ ಸಿಗುವದಕ್ಕೆ ಕಡಿಮೆ ಅಂದಾಜು ಮಾಡುವದು ಮತ್ತು, ಸುಲಭವಾಗಿ ಸಿಗದೇ ಇರುವದಕ್ಕೆ ಜಾಸ್ತಿ ಮಹತ್ವ ಕೊಡುವದು ಮನುಷ್ಯನ ಪ್ರವೃತ್ತಿ...
ಹಾಗೆಯೇ ಸುಲಭವಾಗಿ ಹೆಚ್ಚು ಹೆಚ್ಚು ಸಿಗೋದಕ್ಕೆ ಬೆಲೆ ಇರಲ್ಲ.
ಅದು ಯಾವುದೇ ವಸ್ತು ಇರಲಿ, ಚಾಕೋಲೇಟ್ ಇರಲಿ, ಸ್ನೇಹ ಇರಲಿ, ಅಥವಾ ಪ್ರೀತಿ ಇರಲಿ......

ಹಾಗಾಗಿ ಯಾವುದೇ ಆದರೂ ಬಹಳ ಕಷ್ಟದಿಂದ ನಮಗೆ ಸಿಕ್ಕಿದ್ದು ಬಹಳ ಅಮೂಲ್ಯವಾದದ್ದು. ಹಾಗಾಗಿ ಕಷ್ಟದಿಂದ ಸಿಕ್ಕಿದ್ದನ್ನು ಸಾಧ್ಯವಾದಷ್ಟು ಬಹಳ ದಿನಗಳವರೆಗೆ ನಮ್ಮ ಜೊತೆ ಇಟ್ಟುಕೊಳ್ಳುವುದೇ ಬದುಕು.



# ಅಧ್ಯಾಯ-1: ಪರಿಪೂರ್ಣ ಆರೋಗ್ಯದೊಂದಿಗೆ ನಾನು ಆರಂಭಿಸುತ್ತೇನೆ

ಅನುವಾದ: ದಾಶರಥಿ ಫಟ್ಟು   ಮೂಲ: ಪಾಲ್ ಕಲಾನಿಧಿ (When Breath Becomes Air)

ನನ್ನ ವೈದ್ಯಕೀಯ ಶಾಲೆಯ ಆರಂಭಿಕ ದಿನಗಳಲ್ಲಿ ವೈದ್ಯ ಪದವಿಯ ನೈತಿಕ ಉದ್ದೇಶದ ಅಗಾಧತೆಯು ತೀವ್ರ ಗುರುತ್ವದಿಂದ ನನ್ನನ್ನು ಸೆಳೆಯಿತು. ಮನುಷ್ಯನ ದೇಹದ ಅನಾಟಮಿಯನ್ನು ಮಾಡಲು ನಮಗೆ ದೇಹಗಳನ್ನು ನೀಡುವ ಒಂದು ದಿನದ ಮೊದಲು CPR ತರಬೇತಿ ಇತ್ತು. ನಾನು ಕಾಲೇಜಿನಲ್ಲಿದ್ದಾಗಲೂ ಒಂದು ಸಲ CPR ತರಬೇತಿ ಆಗಿತ್ತು. ಆದರೆ ಆ ತರಬೇತಿಯನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳದೇ, ನಗೆ ಚಾಟಿಕೆ ಹಾರಿಸುತ್ತಾ, ಹಾಸ್ಯಾಸ್ಪದವಾಗಿಸಿದ್ದರು. ಕೆಟ್ಟದಾಗಿ ತಯಾರಿಸಿದ ವೀಡಿಯೋ ಮತ್ತು ಕೈಕಾಲುಗಳಿಲ್ಲದ ಪ್ಲಾಸ್ಟಿಕ್ ಮ್ಯಾನಿಕೆನ್ ಉಪಯೋಗಿಸಿಕೊಂಡು ಮಾಡಿದ ಆ ತರಬೇತಿ ತುಂಬಾ ಕೃತಕವಾಗಿತ್ತು. ಆದರೆ ಈಗ, ಮುಂದೊಂದು ದಿನ ನಾವು ಈ ಕೌಶಲ್ಯಗಳನ್ನು ಬಳಸಿಕೊಳ್ಳುವ ಸುಪ್ತ ಸಾಧ್ಯತೆಯು ಎಲ್ಲವನ್ನೂ ಲೇವಡಿ ಮತ್ತು ನಗುವಿನ ಜೊತೆಗೆ, ಮಗುವಿನ ಪಕ್ಕೆಲುಬುಗಳು ಬಿರಿಯುವ ಸದ್ದೂ ಕೇಳಿಸುತ್ತಿದೆ ಎಂದೆನಿಸಿತು.

ಅನಾಟಮಿಯಲ್ಲಿನ ಶವಗಳು ಮನಸ್ಸಿನಲ್ಲಿ ಮೂಡುವ ಅಭಿಪ್ರಾಯವನ್ನು ತಿರುಗು ಮರುಗು ಮಾಡುತ್ತದೆ. ಮ್ಯಾನಿಕೆನ್‌ಗಳನ್ನು ಅಸಲಿ ಮಾನವ ದೇಹ ಎಂದು ನೀವು ನಟಿಸಿದರೆ, ಶವಗಳು ನಕಲಿ ಎಂದು ಸೋಗು ಹಾಕುತ್ತೀರಿ. ನನಗೆ ಕೊಟ್ಟ, ಸಣ್ಣ ಪ್ರಮಾಣದಲ್ಲಿ ನೀಲಿಗಟ್ಟಿದ, ಸ್ವಲ್ಪ ಊದಿಕೊಂಡ, ಶವದ ಜೊತೆ ನಾನು ಮುಖಾಮುಖಿಯಾದಾಗ, ಅವನ ಸಂಪೂರ್ಣ ಸತ್ತಿರುವಿಕೆ ಮತ್ತು ಸಂಪೂರ್ಣ ಮಾನವತ್ವಗಳನ್ನು ನಿರಾಕರಿಸಲು ಸಾಧ್ಯವಿರಲಿಲ್ಲ. ಇನ್ನು ನಾಲ್ಕು ತಿಂಗಳಲ್ಲಿ ನಾನು ಈ ಮನುಷ್ಯನ ತಲೆ ಬುರುಡೆಯನ್ನು ಗರಗಸದಿಂದ ಸೀಳಿ ಭಾಗ ಮಾಡುತ್ತೇನೆ ಎಂಬ ವಿಷಯವನ್ನು ಒಪ್ಪಿಕೊಳ್ಳಲೂ ಆಗಲಿಲ್ಲ.



ಜೀವಂತಗೊಳಿಸಿತ್ತು. ಈ ತರಬೇತಿಯಲ್ಲಿ, ನಾನು ಪ್ಲಾಸ್ಟಿಕ್ ನಲ್ಲಿ ಮಾಡಿದ ಪುಟ್ಟ ಮಗುವಿನ ಬೊಂಬೆಯ ಎದೆಯನ್ನು ಪದೇ ಪದೇ ಒತ್ತುವಾಗ, ನನ್ನ ಸಹಪಾಠಿಗಳ

ಮೊದಲಿಗೆ ನಮ್ಮ ಅನಾಟಮಿ ಅಧ್ಯಾಪಕರು ಕೊಡುವ ಉಪದೇಶವೆಂದರೆ, "ನಿಮಗೆ ಕೊಟ್ಟ ಶವದ ಮುಖವನ್ನು ಒಂದು ಸಲ ಚೆನ್ನಾಗಿ ನೋಡಿ, ಅದನ್ನು

ಮುಚ್ಚಿ ಬಿಡಿ. ಇದರಿಂದ ನೀವು ಮಾಡಬೇಕಾದ ಕೆಲಸ ಸುಲಭವಾಗುತ್ತದೆ." ಶವದ ಮುಖದ ಮೇಲೆ ಹೊದಿಸಿದ ವಸ್ತ್ರವನ್ನು ಸರಿಸಲು, ಧೀರ್ಘವಾಗಿ ಉಸಿರಾಡುತ್ತ, ತೀವ್ರ ಶ್ರದ್ಧೆಯಿಂದ ನಾವು ತಯಾರಾಗುತ್ತಿದ್ದ ಸಮಯದಲ್ಲಿ, ಒಬ್ಬ ಸರ್ಜನ್ ಬಂದು, ತನ್ನ ಮೊಳಕೈಗಳನ್ನು ಆ ಶವದ ಮುಖದ ಮೇಲೆ ಆನಿಸಿ, ನಮ್ಮ ಜೊತೆ ಮಾತಾಡಲು ಪ್ರಾರಂಭಿಸಿದ. ಆ ದೇಹದ ಒಡಲ ಮೇಲಿನ ಕಲೆಗಳನ್ನೂ, ಗಾಯದ ಗುರುತುಗಳನ್ನೂ ತೋರಿಸುತ್ತಾ ಆ ಮನುಷ್ಯನ ರೋಗಗಳ ಇತಿಹಾಸವನ್ನು ಬಿಚ್ಚಿಡತೊಡಗಿದ. "ಈ ಕಲೆ ಇಂಜೈನಲ್ ಹರ್ನಿಯಾ ಶಸ್ತ್ರಕ್ರಿಯೆಯಿಂದ ಆಗಿದ್ದು, ಇದು ಕ್ಯಾರೋಟಿಡ್ ಎಂಡಾರ್ ಟೆರೆಕ್ಟಮಿ; ಇಲ್ಲಿರುವ ಈ ಗುರುತುಗಳು ಕೆರೆದುಕೊಂಡಿದ್ದರಿಂದ ಆಗಿವೆ. ಬಹಶಃ ಜಾಂಡೀಸ್ ಮತ್ತು ಅತಿ ಹೆಚ್ಚು ಬಿಲಿರುಬಿನ್ ಇರಬಹುದು. ಇವನು ಬಹುಶಃ ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್‌ನಿಂದ ಸತ್ತಿರಬಹುದು. ಶಸ್ತ್ರಕ್ರಿಯೆಯ ಗುರುತಿಲ್ಲದಿರುವುದರಿಂದ, ಸಾವು ಅತ್ಯಂತ ಕ್ಷಿಪ್ರವಾಗಿ ಸಂಭವಿಸಿತು ಎನಿಸುತ್ತದೆ." ಈ ಮಧ್ಯೆ, ಆ ಸರ್ಜನ್ನಿನ, ಪ್ರತಿ ವೈದ್ಯಕೀಯ ಊಹೆ ಮತ್ತು ಶಬ್ದಕೋಶದ ಪಾಠದೊಂದಿಗೆ, ಶವದ ಮುಚ್ಚಿದ ಮುಖದ ಮೇಲೆ ಉರುಳಾಡುತ್ತಿದ್ದ ಅವನ ಮೊಣಕೈಗಳ ಮೇಲಿಂದ ನನ್ನ ದೃಷ್ಟಿಯನ್ನು ಬದಲಾಯಿಸಲು ನನಗೆ ಸಾಧ್ಯವಾಗಲಿಲ್ಲ. ಆಗ, ಪ್ರೋಸೋ ಪೆಗ್ನೋಸಿಯಾ ಎಂಬುದು ಮುಖಗಳನ್ನು ನೋಡುವ ಸಾಮರ್ಥ್ಯವನ್ನು ಕಳೆದುಕೊಳ್ಳುವ ಒಂದು ನರ ಸಂಬಂಧಿ ಅಸ್ವಸ್ಥತೆ ಎಂದು ನಾನು ಅಂದುಕೊಂಡೆ. ಬಹಳ ಬೇಗ, ನನಗೂ ಅದು ಆಗುವುದಿತ್ತು, ಕೈಯಲ್ಲಿ ಹಿಡಿದ ಗರಗಸದ ಜೊತೆಗೆ!

ಕೆಲವು ವಾರಗಳಲ್ಲಿ ಇಂತಹ ನಾಟಕಗಳೆಲ್ಲ ಕಣ್ಮರೆಯಾದವು. ನಾನ್-ಮೆಡಿಕಲ್ ವಿದ್ಯಾರ್ಥಿಗಳ ಜೊತೆ ಹರಟುವಾಗ, ಅನಾಟಮಿಯ ಶವಗಳ ಕಥೆಗಳನ್ನು ಹೇಳುತ್ತಾ, ನಾನು ಅವುಗಳ ವಿಕಾರ ಮತ್ತು ಕರಾಳತೆಗಳನ್ನೇ ವೈಭವೀಕರಿಸುತ್ತಾ ಅರ್ಥಹೀನ ಸಂಭಾಷಣೆ ನಡೆಸುತ್ತಿದ್ದೆ. ಆ ಶವಗಳ ಜೊತೆ ದಿನದ ಆರೇಳು ತಾಸುಗಳನ್ನು ಕಳೆಯುತ್ತಿದ್ದರೂ, ನಾನು ಎಲ್ಲ ಸಾಮಾನ್ಯ ಮನುಷ್ಯರಂತೆ, ಸಹಜವಾಗಿಯೇ ಇದ್ದೇನೆ ಎಂಬುದನ್ನು, ಅಂತಹ ಕಥೆಗಳಿಂದ, ದೃಢೀಕರಿಸಲು ಪ್ರಯತ್ನಿಸುತ್ತಿದ್ದೆ. ಒಮ್ಮೊಮ್ಮೆ ನಾನು ನನ್ನ ಸಹಪಾಠಿ ಯಾವುದೋ ಹೆಂಗಸಿನ ಶವದ ಬೆನ್ನು ಮೂಳೆಯನ್ನು ಉಳಿಯಿಂದ ಕತ್ತರಿಸುವಾಗ ನಡೆದ ಕಥೆಯನ್ನು ಹೇಳುತ್ತಿದ್ದೆ. ತನ್ನ ಕಾಫಿ ಮಗ್ಗನ್ನು ಸುಂದರವಾಗಿ ಅಲಂಕರಿಸಿಟ್ಟುಕೊಳ್ಳುವ ಇವಳು ಒಂದು ದಿನ, ಸ್ಟೂಲೊಂದರ ಮೇಲೆ ನಿಂತು, ಶವದ ಬೆನ್ನು ಮೂಳೆಯನ್ನು ಉಳಿಯಿಂದ ಕೆತ್ತುತ್ತಿದ್ದಾಗ ಮೂಳೆಯ ಪುಟ್ಟ ಚಕ್ಕೆಗಳು ಸುತ್ತಲೂ ಸಿಡಿಯುತ್ತಿದ್ದವು. ಅಂತಹ ಕ್ರಿಯೆಯಿಂದ ನಾನು ದೂರ ಉಳಿದಿದ್ದೇನೆ ಎಂದು ನನ್ನನ್ನೇ ನಂಬಿಸಿಕೊಳ್ಳಲು ನಾನು ಇಂತಹ ಕಥೆಗಳನ್ನು ಹೇಳುತ್ತಿದ್ದೆ. ಆದರೆ ಇಂತಹ ಸಂಗತಿಗಳ ಜೊತೆಗಿನ ನನ್ನ ಬಾಂಧವ್ಯ ನಿರಾಕರಿಸಲು ಸಾಧ್ಯವಿಲ್ಲ. ಹಾಗೆ ನೋಡಿದರೆ, ನಾನು ಕೂಡಾ ಅಷ್ಟೇ ಉತ್ಸಾಹದಿಂದ, ಒಬ್ಬ ಗಂಡಸಿನ ಶವದ ಎದೆ ಗೂಡನ್ನು ಬೋಲ್ಟ್ ಕಟರ್ ಉಪಯೋಗಿಸಿ ಛಿದ್ರಗೊಳಿಸಲಿಲ್ಲವೇ?

ಮುಖ ಮುಚ್ಚಿಟ್ಟ, ಹೆಸರೇ ಗೊತ್ತಿಲ್ಲದ ಅನಾಮಿಕ ಶವಗಳ ಮೇಲೆ ಕೆಲಸ ಮಾಡುವಾಗಲೂ, ಒಮ್ಮೊಮ್ಮೆ ಅವುಗಳ ಮಾನವತ್ವ ನಿಮ್ಮ ಕಣ್ಣುಗಳ ಮುಂದೆ ಧುತ್ತನೆ ಪ್ರಕಟವಾಗುತ್ತವೆ. ನಾನು ಅನಾಟಮಿ ಮಾಡುತ್ತಿದ್ದ ಶವದ ಹೊಟ್ಟೆಯನ್ನು ಕತ್ತರಿಸಿದಾಗ, ಇನ್ನೂ ಕರಗದೇ ಇಡಿಯಾಗೇ ಉಳಿದಿದ್ದ ಎರಡು ಮಾರ್ಫಿನ್ ಗುಳಿಗೆಗಳು ಹೊಟ್ಟೆಯಲ್ಲಿ ಸಿಕ್ಕವು. ಅರ್ಥಾತ್ ಆ ಮನುಷ್ಯ ತಡೆಯಲಾರದ ನೋವಿನಿಂದ ತೀವ್ರ ಸಂಕಟ ಪಡುತ್ತಾ ಸತ್ತಿರಬೇಕು, ಬಹುಶಃ ಅವನು ಏಕಾಂಗಿಯಾಗಿದ್ದಿರಬಹುದು, ಕೊನೆಯ ಕ್ಷಣಗಳಲ್ಲಿ ಗುಳಿಗೆ ಡಬ್ಬಿಯ ಮುಚ್ಚಳವನ್ನು ಹಾಕಲು ತಡಕಾಡುತ್ತಿದ್ದಿರಬಹುದು.

ಹಾಗೆ ನೋಡಿದರೆ, ಈ ಶವಗಳು, ಜೀವಂತವಾಗಿದ್ದಾಗ, ತಮ್ಮನ್ನು ತಾವೇ ಈ ವಿಧಿಗಾಗಿ ಕೊಡುಗೆ ಕೊಟ್ಟುಕೊಂಡವುಗಳು. ಇದು ಬಹಳ ಬೇಗ ನಮಗೆ ವ್ಯಕ್ತವಾಯಿತು. ಅವುಗಳನ್ನು "ಶವ"ಗಳೆಂದು ಕರೆಯಕೂಡದೆಂದು ನಮಗೆ ಸೂಚಿಸಲಾಯಿತು; ಅವರ ಆದೇಶದಂತೆ "ದಾನಿ"ಗಳು ಎಂಬುದು ಹೆಚ್ಚು ಸೂಕ್ತವಾದ ಪದ.

ಡೈಸೆಕ್ಷನ್‌ನ ಪ್ರಕ್ರಿಯೆ ಮುಂಚೆಗಿಂತಾ ಎಷ್ಟೋ ಸುಧಾರಿಸಿರುವುದು ನಿಜ. 19ನೆಯ ಶತಮಾನದಲ್ಲಿ ಪ್ರಚಲಿತವಿದ್ದಂತೆ ವೈದ್ಯಕೀಯ ವಿದ್ಯಾರ್ಥಿಗಳು ಸ್ವತಃ ಶವಗಳನ್ನು ಈಗ ತರಬೇಕಾಗಿಲ್ಲ. ವೈದ್ಯಕೀಯ ಕಾಲೇಜುಗಳು ಕೂಡ ಶವಗಳ ಸರಬರಾಜಿಗಾಗಿ ನಡೆಯುತ್ತಿದ್ದ, ಹಸಿ ಗೋರಿಗಳ ದರೋಡೆಯ ಬೆಂಬಲವನ್ನು ನಿಲ್ಲಸಿದೆ. ಈ ದರೋಡೆಯ ನಿಲುಗಡೆ ಎಷ್ಟೋ ಕೊಲೆಗಳನ್ನು ತಪ್ಪಿಸಿರಬಹುದು. ಒಂದು ಕಾಲದಲ್ಲಿ ಇದೇ ಕ್ರಿಯೆ ನಿಘಂಟಿನಲ್ಲಿ ಒಂದು ಕ್ರಿಯಾ ಪದವಾಗಿತ್ತು. burke ಎಂಬ ಪದಕ್ಕೆ ಆಕ್ಸ್ಫರ್ಡ್ ಇಂಗ್ಲಿಷ್ ನಿಘಂಟಿನಲ್ಲಿ "ಉಸಿರು ಕಟ್ಟಿಸಿ ಅಥವಾ ಕತ್ತು ಹಿಚುಕಿ ರಹಸ್ಯವಾಗಿ ಸಾಯಿಸುವುದು. ಡೈಸೆಕ್ಷನ್‌ಗಾಗಿ ಬಲಿಪಶುವಿನ ದೇಹವನ್ನು ಮಾರುವ ಉದ್ದಿಶ್ಯಕ್ಕಾಗಿ ಸಾಯಿಸುವುದು", ಎಂಬ ಅರ್ಥವಿದೆ. ಆದರೆ ಈ ಡೈಸೆಕ್ಷನ್ ಬಗ್ಗೆ ಅತಿ ಹೆಚ್ಚು ತಿಳುವಳಿಕೆ ಇರುವ- ವೈದ್ಯರುಗಳಂತಹ ಜನಗಳ್ಯಾರೂ ತಮ್ಮ ದೇಹಗಳನ್ನು ದಾನ ಮಾಡಿಲ್ಲ. ಹಾಗಾದರೆ, ತಮ್ಮನ್ನು ತಾವೇ ದಾನ ಮಾಡಿಕೊಂಡ ಈ "ದಾನಿ"ಗಳು ಎಷ್ಟು ಮಟ್ಟಿಗೆ "ತಮ್ಮ ದೇಹ ಹೇಗೆ ಉಪಯೋಗಿಸಲ್ಪಡುತ್ತದೆಂದು" ತಿಳಿದುಕೊಂಡಿದ್ದರು? "ಶಸ್ತ್ರಚಿಕಿತ್ಸೆಯ ರಕ್ತಸಿಕ್ತ ವಿವರಗಳನ್ನು ರೋಗಿಗೆ ಹೇಳಬೇಡಿ. ಅವರು ಅದನ್ನು ಕೇಳಿದರೆ ಶಸ್ತ್ರಚಿಕಿತ್ಸೆಗೆ ಒಪ್ಪುವುದೇ ಇಲ್ಲ" ಎಂದು ಒಬ್ಬ ಅನಾಟಮಿ ಪ್ರಾಧ್ಯಾಪಕರು ನನಗೆ ಹೇಳಿದ್ದರು. ಅದು ಇವರ ಮಟ್ಟಿಗೂ ನಿಜವಿರಬಹುದೇ?

ದಾನಿಗಳಿಗೆ ಇವುಗಳ ಬಗ್ಗೆ ಸಾಕಷ್ಟು ತಿಳುವಳಿಕೆ ಕೊಟ್ಟಿದ್ದೆವು ಎಂದುಕೊಂಡರೂ ಕೂಡಾ, ಅಥವಾ ಅವರು ಅನಾಟಮಿಯಲ್ಲಿ ತಮ್ಮ ದೇಹದ ಸ್ಥಿತಿ ಏನಾಗುತ್ತದೆ ಎಂದು ಚೆನ್ನಾಗಿಯೇ ತಿಳಿದುಕೊಂಡಿದ್ದರೂ - ಒಬ್ಬ ಅನಾಟಮಿ ಪ್ರಾಧ್ಯಾಪಕರು ಹೇಳಿದಂತೆ, "ದೇಹವನ್ನು ಛಿದ್ರ ಮಾಡುವುದರ ಬಗ್ಗೆ ಯಾರಿಗೂ ಅಷ್ಟೇನೂ ಬೇಗುದಿಯಾಗುವುದಿಲ್ಲ. ಆದರೆ ತನ್ನ ತಂದೆ, ತಾಯಿ ಅಥವಾ ಅಜ್ಜ ಅಜ್ಜಿಯರನ್ನು ಇಪ್ಪತ್ತೆರಡು ವರ್ಷ ವಯಸ್ಸಿನ ವೈದ್ಯಕೀಯ ವಿದ್ಯಾರ್ಥಿಗಳು ನಗೆಚಾಟಿಕೆಗಳನ್ನು ಹಾರಿಸುತ್ತಾ ಚೂರು ಚೂರಾಗಿ ಕಡಿಯುವ ವಿಚಾರ ಮನಸ್ಸಿಗೆ ತೀವ್ರ ಬೇಗುದಿಯಾಗುತ್ತದೆ." ಪ್ರತಿ ಸಲ ನಾನು ಅನಾಟಮಿ ಲ್ಯಾಬಿನ ಅಂದಿನ ಪೂರ್ವ ತಯಾರಿಯ ವಿವರಗಳನ್ನು ಪರಿಶೀಲಿಸುವಾಗ "ಮೂಳೆ ಗರಗಸ (bone saw) ಎಂಬ ಪದ ಓದಿದಾಗಲೆಲ್ಲ, ಈ ತರಗತಿಯಲ್ಲಿ ನಾನು ವಾಂತಿ ಮಾಡಿಕೊಳ್ಳಬಹುದೇನೋ ಎಂದುಕೊಳ್ಳುತ್ತೇನೆ. ಹೀಗಿದ್ದೂ, ಲ್ಯಾಬಿನಲ್ಲಿ ನನಗೆ ಎಂದೂ ಹೆಚ್ಚು ಅಸ್ವಸ್ಥತೆಯಾಗಿಲ್ಲ. "ಬೋನ್ ಸಾ" ಎಂಬ ಉಪಕರಣ ನಾವು ಸಾಮಾನ್ಯವಾಗಿ ಉಪಯೋಗಿಸುವ ಕಿಲುಬು ಹಿಡಿದ ಮರಗೆಲಸದ ಗರಗಸಕ್ಕಿಂತ ಬೇರೆಯಾಗಿರಲಿಲ್ಲ ಎಂಬುದನ್ನು ನೋಡಿದಾಗ ಕೂಡಾ...

ನನಗೆ ವಾಂತಿ ಬಂದೇಬಿಟ್ಟಿದ್ದು ಅನಾಟಮಿ ಲ್ಯಾಬಿನಲ್ಲಲ್ಲ, ಬದಲಿಗೆ ನನ್ನ ಅಜ್ಜಿ ಸ್ವರ್ಗಸ್ಥಳಾದ 20ನೆಯ ವರ್ಷದಂದು ನ್ಯೂ ಯಾರ್ಕಿನಲ್ಲಿ ಅವಳ ಸಮಾಧಿಗೆ ಭೇಟಿ ಕೊಟ್ಟಾಗ. ಮಾನಸಿಕ ಬಾಧೆಯಿಂದ, ನನಗೆ ಅಳುವೇ ಬಂದುಬಿಟ್ಟಿತ್ತು. ನಾನು ನನ್ನ ಅನಾಟಮಿ ಶವದ ಕ್ಷಮಾಪಣೆ ಕೇಳುತ್ತಿರಲಿಲ್ಲ, ಬದಲಿಗೆ ಆ ಶವದ ಮೊಮ್ಮಕ್ಕಳಲ್ಲಿ ಕ್ಷಮೆ ಯಾಚಿಸುತ್ತಿದ್ದೆ. ನಮ್ಮ ಅನಾಟಮಿ ವರ್ಷದ ನಡುವೆ, ಶವದಾನಿಯೊಂದರ ಮಗ ತನ್ನ ತಾಯಿಯ ಅರೆ ಛಿದ್ರಗೊಂಡ ದೇಹವನ್ನು ಹಿಂತಿರುಗಿಸಲು ಕೇಳಿಕೊಂಡ. ಅವಳು ತಾನೇ ಒಪ್ಪಿಕೊಂಡು ತನ್ನ ದೇಹವನ್ನು ದಾನಮಾಡಿದ್ದು ನಿಜ. ಆದರೆ ಮಗನಿಗೆ ಆ ವಸ್ತುಸ್ಥಿತಿಯನ್ನು ಒಪ್ಪಿಕೊಳ್ಳಲು ಆಗಲಿಲ್ಲ. ನಾನಾಗಿದ್ದರೂ ಅದನ್ನೇ ಮಾಡುತ್ತಿದ್ದೆ. ಆ ತಾಯಿಯ ದೇಹದ ಅವಶೇಷಗಳನ್ನು ಮಗನಿಗೆ ಹಿಂತಿರುಗಿಸಿದೆವು.

ಅನಾಟಮಿ ಲ್ಯಾಬಿನಲ್ಲಿ ನಾವು ಮೃತರನ್ನು ಯಾವುದೋ ವಸ್ತುವನ್ನು ನೋಡುವಂತೆ ನೋಡುತ್ತೇವೆ. ಮೃತ ವ್ಯಕ್ತಿ ನಮಗೆ ಬರೀ ಅಂಗಗಳ, ಮಾಂಸ ಖಂಡಗಳ, ನರ ನಾಡಿಗಳ, ಅಂಗಾಂಶಗಳ ಒಂದು ಮೂಟೆ. ಲ್ಯಾಬಿನ ಮೊತ್ತ ಮೊದಲ ದಿನ, ಶವದ ಮಾನವತ್ವವನ್ನು ನೀವು ನಿರಾಕರಿಸಲಾಗುವುದಿಲ್ಲ. ಆದರೆ ನೀವು ಕೈಕಾಲುಗಳ ಚರ್ಮ ಸುಲಿದು, ಮಾಂಸ ಖಂಡಗಳ ಸಣ್ಣ ಹೋಳುಗಳನ್ನು ಮಾಡಿ, ಶ್ವಾಸ ಕೋಶಗಳನ್ನು ಎದೆ ಗೂಡಿನಿಂದ ಹೊರಗೆಳೆದು, ಹೃದಯವನ್ನು ಬಿಚ್ಚಿ, ಯಕೃತ್ತಿನ ಭಾಗವೊಂದನ್ನು ಹೊರ ತೆಗೆದು, ಆ ದೇಹವನ್ನು ಛಿದ್ರಗೊಳಿಸುವಷ್ಟರಲ್ಲಿ, ಆ ಅಂಗಾಂಶಗಳ ರಾಶಿಯನ್ನು "ಮಾನವ" ಎಂದು ಗುರುತಿಸುವುದು ಕಷ್ಟವಾಗುತ್ತದೆ. ಅಂತಿಮವಾಗಿ, ಅನಾಟಮಿ ಲ್ಯಾಬು, ಪವಿತ್ರವಾದ ಏನನ್ನೋ ಅತಿಕ್ರಮಿಸುತ್ತಿದೆ ಎಂಬ ಭಾವನೆಯನ್ನು ಹುಟ್ಟಿಸುವ ಬದಲಾಗಿ, ಹ್ಯಾಪಿ ಅವರ್ ತಪ್ಪಿಸುತ್ತಿದೆ ಎನ್ನುವಷ್ಟಕ್ಕೆ ನಿಂತು, ನಮ್ಮನ್ನು ಕಸಿವಿಸಿಗೊಳಿಸುತ್ತದೆ. ಮಾನಸಿಕವಾಗಿ ನಾವು ಪರ್ಯಾಲೋಚಿಸುವ ಅಪರೂಪದ ಸಮಯಗಳಲ್ಲಿ, ನಾವೆಲ್ಲಾ ಕ್ಷಮೆ ಯಾಚಿಸುತ್ತಿದ್ದುದು, ಆ ಮೃತ ದೇಹಗಳ ಪವಿತ್ರತೆಯನ್ನು ಉಲ್ಲಂಘಿಸಿದ್ದನ್ನು ಗುರುತಿಸಿದ್ದಕ್ಕಾಗಿ ಅಲ್ಲ, ಅದನ್ನು ಗುರುತಿಸಲಾಗದ ನಮ್ಮ ಅಸಾಮರ್ಥ್ಯಕ್ಕಾಗಿ..

ಅದೇನೂ ಸಣ್ಣ ಅನ್ಯಾಯವಲ್ಲ. ಶವಗಳ ಡೈಸೆಕ್ಷನ್ನಿನಲ್ಲಷ್ಟೇ ಅಲ್ಲ, ವೈದ್ಯಕೀಯ ರಂಗದ ಪೂರ್ತ, ಮಾನವ ದೇಹದ ತೀರಾ ರಹಸ್ಯ ಮತ್ತು ಖಾಸಗಿ ಕ್ಷೇತ್ರಗಳ ಉಲ್ಲಂಘನೆ ಆಗುತ್ತಲೇ ಇರುತ್ತದೆ. ವೈದ್ಯರು ರೋಗಿಗಳ ದೇಹಗಳನ್ನು ಎಲ್ಲ ರೀತಿಯಿಂದಲೂ ಅತಿಕ್ರಮಿಸುತ್ತಿರುತ್ತಾರೆ. ತುಂಬಾ ದುರ್ಬಲ, ತುಂಬಾ ಹೆದರಿದ ಸಮಯಗಳಲ್ಲಿ ಅವರು ಜನರನ್ನು ನೋಡುತ್ತಾರೆ. ಜನರ ದೇಹದ ತೀರಾ ಖಾಸಗಿ ವಿವರಗಳನ್ನು ತಿಳಿದುಕೊಳ್ಳುತ್ತಾರೆ. ವೈದ್ಯರು ರೋಗಿಗಳನ್ನು ಬೇರೆಯದೇ ಪ್ರಪಂಚಕ್ಕೆ ಕರೆದೊಯ್ಯುತ್ತಾರೆ.

ಮಾನವ ದೇಹವನ್ನು ಒಂದು ಸಂಕೀರ್ಣ ಭೌತ ವಸ್ತು ಮತ್ತು ಯಾಂತ್ರಿಕ ರಚನೆ ಎಂದು ನೋಡುವುದರಲ್ಲಿ, ಎಷ್ಟೋ ತೀವ್ರತರ ನೋವುಗಳಿಗೆ ಪರಿಹಾರ ನೀಡಲು ಸಾಧ್ಯವಾಗುತ್ತಿರುವುದೇನೋ ನಿಜ. ಹಾಗೆಯೇ, ಮಾನವ ಜೀವಿಯ ತೀವ್ರ ನೋವು-ನರಳಿಕೆಗಳು ಶಾಸ್ತ್ರೀಯ ಶಿಕ್ಷಣದ ಬರೀ ಉಪಕರಣಗಳಾಗುವುದೂ ಒಂದು ವಿಪರ್ಯಾಸ. ಈ ಪ್ರಕ್ರಿಯೆಯ ಏಣಿಯ ತುತ್ತ ತುದಿಯಲ್ಲಿ ಅನಾಟಮಿ ಪ್ರಾಧ್ಯಾಪಕರುಗಳು ನಿಲ್ಲುತ್ತಾರೆ, ಅದರೂ ಶವಗಳ ಜೊತೆಗಿನ ಅವರ ಮಾನಸಿಕ ಸಂಬಂಧ ತೀವ್ರವಾಗಿ ಉಳಿದಿರುತ್ತದೆ. ಅನಾಟಮಿ ಪ್ರಾರಂಭದ ದಿನಗಳೊಂದರ ಪರೀಕ್ಷೆಯಲ್ಲಿ, ಸ್ಪ್ಲೆನಿಕ್ ಆರ್ಟರಿಯನ್ನು ಸುಲಭವಾಗಿ ಹೊರ ತೆರೆಯಲು ನಾನು ನನ್ನ 'ದಾನಿ'ಯ ಡಯಾಫ್ರಾಮನ್ನು ಉದ್ದಕ್ಕೆ ಸೀಳಿದೆ. ಅಲ್ಲಿದ್ದ ಪರೀಕ್ಷಕ ಬಹಳ ಗಾಬರಿಗೊಂಡದ್ದಷ್ಟೇ ಅಲ್ಲ ಕೆರಳಿ ಕೋಪಾವಿಷ್ಟನಾದನು. ನಾನು ಯಾವ ಅಂಗವನ್ನೂ ಊನ ಮಾಡಿರಲಿಲ್ಲ, ಲಿಖಿತ ನಿಯಮಗಳನ್ನು ಉಲ್ಲಂಘಿಸಿರಲಿಲ್ಲ, ಅಥವಾ ಡೈಸೆಕ್ಷನ್ನಿನ ಮುಂದಿನ ಹಂತಗಳನ್ನು ಹಾಳು ಮಾಡಿರಲಿಲ್ಲ. ಬದಲಿಗೆ ತೊಗಲನ್ನು ತುಂಬಾ ಅಸಡ್ಡೆಯಿಂದ ನಾನು ಸೀಳಿದೆ ಎಂದು ತೋರಿ, ಅವನನ್ನು ಕೆರಳಿಸಿತ್ತು. ಆ ಪರೀಕ್ಷಕನ ಮುಖದ ಮೇಲಿನ ಭಾವನೆ, ಅವನು ನೀಡಿದ ನೋಟ, ಮಡುಗಟ್ಟಿದ ದುಃಖವನ್ನು ಪದಗಳಲ್ಲಿ ಹೇಳಲಾಗದ ಅವನ ಅಸಹಾಯಕತೆ, ನನಗೆ ಯಾವುದೇ ತರಗತಿಯ ಪಾಠ ಅಥವಾ ಪುಸ್ತಕಕ್ಕಿಂತ ಹೆಚ್ಚು ಮೆಡಿಸಿನ್ ಬಗ್ಗೆ ಕಲಿಸಿತು. ನನ್ನ ಅನಾಟಮಿ ಪ್ರಾಧ್ಯಾಪಕರು ಈ ರೀತಿ ಸೀಳಬೇಕೆಂದು ನನಗೆ ಹೇಳಿಕೊಟ್ಟಿದ್ದಾರೆ ಎಂದು ಹೇಳಿದಾಗ, ಅವನ ದುಃಖ ತಡೆಯಲಾಗದ ಕೋಪಕ್ಕೆ ತಿರುಗಿ, ರೊಚ್ಚಿನಿಂದ ಅವನು ಪ್ರಾಧ್ಯಾಪಕರುಗಳನ್ನು ಅಂಗಳಕ್ಕೆ ಕರೆಸಿ, ಅವರ ಮುಖಗಳು ಕೆಂಪಾಗುವಂತೆ, ಅವರನ್ನು ಬಲಿ ಹಾಕಿಬಿಟ್ಟ.

ಕೆಲವು ಸಮಯಗಳಲ್ಲಿ ಈ ಸಂಬಂಧ ತುಂಬಾ ಸರಳವಾಗಿರುತ್ತದೆ. ಲ್ಯಾಬಿನ ಒಂದು ತರಗತಿಯಲ್ಲಿ, ಒಬ್ಬ ದಾನಿಯ ಪಿತ್ತಕೋಶ ಕ್ಯಾನ್ಸರಿನ ಅವಶೇಷಗಳನ್ನು ನಮಗೆ ತೋರಿಸುತ್ತ, ಅಧ್ಯಾಪಕರು ಕೇಳಿದರು, "ಇವನಿಗೆ ಎಷ್ಟು ವಯಸ್ಸಾಗಿತ್ತು?" "74 ವರ್ಷ", ಎಂದು ನಾವು ಉತ್ತರಿಸಿದೆವು. "ನನ್ನ ವಯಸ್ಸು." ಎಂದು ಹೇಳಿ, ನಮ್ಮನ್ನು ಅಭ್ಯಾಸ ಮಾಡಲು ಬಿಟ್ಟು, ಅವರು ಅಲ್ಲಿಂದ ನಿರ್ಗಮಿಸಿದರು.

(... ಮುಂದುವರೆಯುವುದು)



# ಮಕ್ಕಳೋತ್ಸವ - ವಾರ್ಷಿಕೋತ್ಸವ

ಅಶೋಕ್ ಬಿ. ಆರ್. ನ್ಯೂ ಜೆರ್ಸಿ

**ಕರ್ನಾಟಕ ಬರೀ ನಾಡಲ್ಲ , ನಮ್ಮ ಸಂಸ್ಕೃತಿಯ ಧಾತು.**

**ಕನ್ನಡ ಕೇವಲ ನುಡಿಯಲ್ಲ , ನಮ್ಮಂತರಂಗದ ಮಾತು.**

**-ಕುವೆಂಪು .**

**********

ಡಿಸೆಂಬರ್ 3 ನೇ ತಾರೀಕು ಶನಿವಾರ - ಮುಂಜಾನೆ ಚಿರಿ ಚಿರಿ ಮಳೆ ಮೋಡ ಕವಿದ ವಾತಾವರಣ ನಮ್ಮ ಕನ್ನಡಿಗರ ಉತ್ಸಾಹಕ್ಕೆ ತಣ್ಣೀರು ಎರಚಲು ಪ್ರಯತ್ನಿಸುವಂತಿತ್ತು.

ಆದರೆ, ಬೃಂದಾವನ ಪ್ರಗತಿ ತಂಡದ ಕಮಿಟಿಯ ಸದಸ್ಯರ ಮತ್ತು ಸ್ವಯಂಸೇವಕರ ಹುಮ್ಮಸ್ಸಿನ ಮುಂದೆ ಇದಾವುದೂ ಅಡಚಣೆ ಆಗುವುದುಂಟೇ...?

ಬೆಳಗ್ಗೆ 9:30 ಗೆ, ಎಲ್ಲಾ ಸ್ವಯಂಸೇವಕರು ಮೆಲ್ವಿನ್ ಕ್ರೆಪ್ಸ್ ಮಿಡ್ಲ್ ಸ್ಕೂಲಿನ ಸಭಾಂಗಣದಲ್ಲಿ ಒಡಗೂಡಿದರು. ಅಲಂಕಾರ ಮಾಡುವ ತಂಡವು, ಸಭಾಂಗಣವನ್ನು ತಯ್ಯಾರಿಸತೊಡಗಿದರು. Registration Desk ನಲ್ಲಿ ಅತಿಥಿಗಳನ್ನು ಆಹ್ವಾನಿಸಲು ಸಿದ್ಧರಾದರು.

ಬೆಳಿಗ್ಗಿನ ಸ್ಪರ್ಧೆ ಗಳಲ್ಲಿ ಭಾಗವಹಿಸುವ ಮಕ್ಕಳು ಒಬ್ಬೊಬ್ಬರಾಗಿ ಬರತೊಡಗಿದರು.

ಇವೆಲ್ಲದರ ಮಧ್ಯೆ ಹೊಟ್ಟೆ ಪೂಜೆಯನ್ನು ಮರೆಯಲಾಗುವುದುಂಟೇ.? ಶ್ರೀ ದೋಸೆ ಪ್ಲೇಸ್ (ಎಡಿಸನ್ ) ಅವರಿಂದ ಎಲ್ಲರಿಗೂ, ಬಿಸಿ ಬಿಸಿ ಇಡ್ಲಿ, ವಡ ಸೇವೆ ಆಯಿತು.

ಒಂದು ಕಡೆ General body meeting ನಡೆದರೆ, ಇನ್ನೊಂದು Hallನಲ್ಲಿ, ಮಕ್ಕಳ ಸ್ಪರ್ದೆಗಳು ನಡೆದವು.



ಬೃಂದಾವನ ಸರ್ವ ಸದಸ್ಯರ ಸಭೆ

ಈ ಬಿಡುವಿನ ಸಮಯದಲ್ಲಿ, ಮಕ್ಕಳ ಪೋಷಕರು ಮತ್ತು ಅತಿಥಿಗಳು - ಸ್ಕೂಲಿನಲ್ಲಿ ವ್ಯವಸ್ಥೆ ಮಾಡಲಾಗಿದ್ದ ಸಣ್ಣ ಮಾರಾಟಗಾರರ ಅಂಗಡಿಗಳಲ್ಲಿ ಬಟ್ಟೆ ಮತ್ತು ಆಭರಣಗಳನ್ನು ಖರೀದಿಸ ತೊಡಗಿದರು..

ಮಧ್ಯಾಹ್ನ ಒಂದು ಗಂಟೆಯ ಸಮಯಕ್ಕೆ ಸರಿಯಾಗಿ ರುಚಿ ರುಚಿಯಾದ ಊಟ ಬಡಿಸಲಾಯ್ತು.

ಊಟ ಮುಗಿಸಿ, 2 ಗಂಟೆಗೆ ಎಲ್ಲರೂ ಸಭಾಂಗಣದಲ್ಲಿ ಒಳ ಸೇರಿದ ಮೇಲೆ, ಕೃಷ್ಣ ಮಠದ ಆಚಾರ್ಯ- ಯೋಗೀಂದ್ರ ಭಟ್ಟ ರು ಹಿತವಚನವನ್ನು ನೀಡಿದರು.





ಇದಾದ ನಂತರ, ಎಲ್ಲಾ ಕನ್ನಡ ಶಾಲೆಗಳ (ಹಿಲ್ಸ್ ಬರೊ ಶಾಲೆ, ಸೌತ್ ಬ್ರೌನ್ಸಿಕ್ ಶಾಲೆ, ಮಾರ್ಲ್ಬ್ ಬೊರೊ ಶಾಲೆ, ಎಡಿಸನ್ ಶಾಲೆ ಮತ್ತು ಈಸ್ಟ್ ವಿನ್ಸರ್ ಶಾಲೆ) ಮಕ್ಕಳಿಂದ ವೈವಿಧ್ಯಮಯ ಕಾರ್ಯಕ್ರಮಗಳು ನಡೆದವು.

ಈಸ್ಟ್ ವಿನ್ಸರ್ ಶಾಲೆಯ ನಾಟಕ "ಅಪ್ಪಯ್ಯ್ ಕಳೆದು ಹೋಗಿದ್ದಾರೆ" ಮತ್ತು ಸೌತ್ ಬ್ರೌನ್ಸಿಕ್ ಶಾಲೆಯ "ತೆನಾಲಿ ರಾಮಕೃಷ್ಣ" ಬಹಳ ಚೆನ್ನಾಗಿ ಮೂಡಿ ಬಂತು.





*ಎಡಿಸನ್ ಕನ್ನಡ ಶಾಲೆಯ ಮಕ್ಕಳಿಂದ ನೃತ್ಯ ರೂಪಕ*



*ಮಾಲ್ಬೋರೋ ಕನ್ನಡ ಶಾಲೆಯ ಮಕ್ಕಳಿಂದ ಕವಿ ಗೋಷ್ಠಿ*



*ಸೌತ್ ಬ್ರಾನ್ಸ್ವಿಕ್ ಕನ್ನಡ ಶಾಲೆಯ ಮಕ್ಕಳಿಂದ "ವಿಕಟಕವಿ ತೆನಾಲಿ ರಾಮಕೃಷ್ಣ"*




ಹಿಲ್ಸ್ಬ್ರೊ ಕನ್ನಡ ಶಾಲೆಯ ಮಕ್ಕಳಿಂದ ಮನರಂಜನೆ




ಬೃಂದಾವನ ಮಕ್ಕಳಿಂದ - ಪುನೀತ ನಮನ




ಹಿಲ್ಸ್ಬ್ರೊ ಕನ್ನಡ ಶಾಲೆಯ ಮಕ್ಕಳು




ನೃತ್ಯ ಕಲಾವಿದರು ಮನೋಜ್ಞವಾಗಿ ಕಾಂತಾರ ಚಿತ್ರದ "ವರಾಹ ರೂಪಂ" ಗೀತೆಗೆ ನರ್ತಿಸಿ ಪ್ರೇಕ್ಷಕರ ಮನಸೂರೆಗೊಂಡರು .




ನಂತರ, ಕನ್ನಡ ಪತ್ರಿಕೆ “ವನವಾಣಿ” ಸಂಚಿಕಯ ಮುಖಪುಟವನ್ನು ಅಧ್ಯಕ್ಷರು ಬಿಡುಗಡೆ ಮಾಡಿದರು





ರಾಕಿ ಮತ್ತು ರಂಜು

ಹಿರಿಯ ಕನ್ನಡ ಕಲಾವಿದರ ತಂಡವು ಮನೋರಂಜಿತ ನಗೆ ನಾಟಕ " ರಾಕಿ ಮತ್ತು ರಂಜು " ಅದ್ಭುತ ರೀತಿಯಿಂದ ಪ್ರದರ್ಶಿಸಿದರು. ಹೊಸ committee ಸದಸ್ಯರ ಘೋಶಣೆ ಮಾಡಲಾಯಿತು. ಶ್ರೀಮತಿ ಅರ್ಚನಾ ಆಚಾರ್ಯ ಅವರನ್ನು ಅಧ್ಯಕ್ಷ ಹುದ್ದೆಗೆ ಸರ್ವಾನುಮತದಿಂದ ಚುನಾಯಿಸಲಾಯ್ತು.



ಅರ್ಚನಾ ಆಚಾರ್ಯ ಅವರಿಗೆ ಅಧಿಕಾರ ಹಸ್ತಾಂತರ



ಚಂದನ್ ಶೆಟ್ಟಿಯವರಿಂದ ಸಂಗೀತ ಸಂಜೆ

ಕೊನೆಯಲ್ಲಿ ವಿಶ್ವ ಪ್ರಸಿದ್ಧ ಕನ್ನಡ ರಾಪ್ ಗಾಯಕ ಚಂದನ್ ಶೆಟ್ಟಿ ಅವರು ಮೈ ನವಿರೇಳಿಸುವ ಪ್ರದರ್ಶನ ಕೊಟ್ಟರು. ಶೆಟ್ಟರ ತಾಳಕ್ಕೆ, ಎಲ್ಲಾ ಪ್ರೇಕ್ಷಕರು ತಮ್ಮ ತಮ್ಮ ಆಸನದಿಂದ ಎದ್ದು ಕುಣಿಯತೊಡಗಿದರು.



ಯುವ ಬೃಂದಾವನದೊಂದಿಗೆ ಚಂದನ್ ಶೆಟ್ಟಿ

**ಒಟ್ಟಿನಲ್ಲಿ, ಸಂಪೂರ್ಣ ದಿನ ಹೇಗೆ ಕಳೆಯಿತು ಎಂದು ಗೊತ್ತೇ ಆಗಲಿಲ್ಲ. ನಿಜವಾಗಲೂ "ಕನ್ನಡವೇ ಸತ್ಯ ಕನ್ನಡವೇ ನಿತ್ಯ" ಎಂಬ ಮಾತು ಆವತ್ತಿನ ದಿನಕ್ಕೆ ನೂರು ಪ್ರತಿಶತ ಅನ್ವಯ ಆಗಿತ್ತು.**



# ೬೭ನೇ ಕನ್ನಡ ರಾಜ್ಯೋತ್ಸವ

ಶಾಮಸುಂದರ್ ಹಲ್ಲೇಗೆರೆ , ನ್ಯೂ ಜೆರ್ಸಿ

ನ್ಯೂ ಜೆರ್ಸಿಯ ಬೃಂದಾವನ ಕನ್ನಡ ಬಳಗವು ಅಂತರ್ಜಾಲ ಮುಖೇನ ೬೭ನೇ ಕನ್ನಡ ರಾಜ್ಯೋತ್ಸವವನ್ನು ನವೆಂಬರ್ ಒಂದರಂದು ವಿಜೃಂಭಣೆಯಿಂದ ಆಚರಿಸಿತು. ಸಾಗರದಾಚೆ ನೆಲೆಸಿರುವ ಕನ್ನಡಿಗರಿಗೆ ನಾಡು ಮತ್ತು ನುಡಿಯ ಕಂಪನ್ನು ಪ್ರಸರಿಸಲು ಕನ್ನಡ ಭುವನೇಶ್ವರಿಯ ಹೆಮ್ಮೆಯ ಪುತ್ರರಾದ "ಮುಖ್ಯ ಮಂತ್ರಿ" ಮತ್ತು "ಸಿಹಿ ಕಹಿ" ಚಂದ್ರು ದ್ವಯರನ್ನು ಆಹ್ವಾನಿಸಲಾಗಿತ್ತು.

ಬೃಂದಾವನ ಶಾಲೆಯ ಮಕ್ಕಳಿಂದ ಭಾರತ ಮತ್ತು ಅಮೇರಿಕಾ ರಾಷ್ಟ್ರಗೀತೆಗಳ ಇಂಪಾದ ನಮನಗಳ ಆವಾಹನೆಯ ಆಮಂತ್ರಣದ ನಂತರ ವಿನುತಾ ಅವರ ಕೊರಳಿನಿಂದ ಬೃಂದಾವನ ಸಂಕೇತ ಗೀತೆ "ಕನ್ನಡದ ಕುಲದೇವಿ" ಅದ್ಭುತವಾಗಿ ಮೂಡಿ ಬಂದಿತ್ತು. ಈಸ್ಟ್ ವಿಂಡ್ಸರ್ ಶಾಲೆಯ ಕನ್ನಡ ಶಿಕ್ಷಕಿ ಹಾಗೂ ನಾಟಕರಂಗದ ಕಲಾವಿದೆ ಉಮಾ ಮೂರ್ತಿಯವರ ಆತಿಥೇಯ ಉಲ್ಲಾಸಭರಿತ ಸಂಭಾಷಣೆ ಕಾರ್ಯಕ್ರಮಕ್ಕೆ ಮೆರಗು ಮೂಡಿಸಿತ್ತು. ಬೃಂದಾವನ ಸಂಘದ ಅಧ್ಯಕ್ಷೆ ಪದ್ಮಿನಿ ಹೇಮಂತ್ ಸರ್ವರಿಗೂ ಸ್ವಾಗತವನ್ನು ಕೋರಿದರು.




"ಈ ರಂಗಮಂಚಪ್ರಪಂಚದ ನವರಸ ನಾಟಕದಲ್ಲಿ ಪಾತ್ರವರಿತು ನಟಿಸಿದರೆ ಜೀವನ ಸಾರ್ಥವಾಗುತ್ತದೆ" ಎಂಬ ಸಾಲುಗಳನ್ನು ನೆನಪಿಸಿಕೊಂಡ ಉಮಾ ಅವರು, ಆ ಸಾಲುಗಳಿಗೆ ಅನ್ವಯಿಸಿದಂತೆ ಬಾಳುತ್ತಿರುವ ವ್ಯಕ್ತಿ ಮುಖ್ಯಮಂತ್ರಿ ಚಂದ್ರು ಅವರನ್ನು ಗೌರವಾನ್ವಿತವಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಸಿನಿಮಾ, ಕಿರುತೆರೆ, ಮತ್ತು ನಾಟಕರಂಗದಲ್ಲಿ ಅಪಾರ ಸೇವೆ ಸಲ್ಲಿಸಿರಿವ "ರಮಣ ಮೂರ್ತಿ" ಎಂದೇ ಖ್ಯಾತರಾಗಿರುವ ಚಂದ್ರು ಅವರನ್ನು ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಗಳ ಬಗ್ಗೆ ನಾಲ್ಕು ಮಾತನಾಡಲು ಕಳಕಳಿಯಿಂದ ವಿನಂತಿಸಿದರು.

ಮುಖ್ಯಮಂತ್ರಿ ಚಂದ್ರು ಅವರು ತಮ್ಮ ಮತ್ತು ಬೃಂದಾವನ ಸಂಘದ ನಿಕಟ ಬಾಂಧವ್ಯವನ್ನು ಮೆಲುಕು ಹಾಕುತ್ತಾ, ಕರ್ನಾಟಕದ ಗಡಿಯಾಚೆ ಮತ್ತು ಸಮುದ್ರದಾಚೆ ಕನ್ನಡಕ್ಕಾಗಿ ಕೆಲಸ ಮಾಡುತ್ತಿರುವ ಸಂಘಗಳು, ಸ್ವಯಂಪ್ರೇರಿತ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಕೊಡುಗೆಯಿಂದ ಕುವೆಂಪು ಅವರ "ಬಾರಿಸು ಕನ್ನಡ ಡಿಂಡಿಮವಾ" ಈಗ ಚಿಗುರಾಗುತ್ತಿದೆಯೆಂದು ಭಾವಿಸಿದರು. ವಿವಿಧತೆಯಲ್ಲಿ ಏಕತೆ ಮತ್ತು ಸೌಹಾರ್ದತೆಯನ್ನು ಎತ್ತಿ ಹಿಡಿಯುದರಲ್ಲಿ ಭಾಷೆಯ ಸ್ಥಾನ ಅತಿ ದೊಡ್ಡದು ಎಂದು ಹೇಳಿದ ಚಂದ್ರು, ಕನ್ನಡಕ್ಕೆ ೨೫೦೦ ವರ್ಷಗಳ ಇತಿಹಾಸವಿದ್ದರೂ ಇಂದಿಗೂ ಸಹ ಕನ್ನಡಕ್ಕಾಗಿ ಹೋರಾಟ ನಡೆಯುತ್ತಿರುವುದು ಖಂಡನೀಯ ಎಂದು ಉಲ್ಲೇಖಿಸಿದರು. ಕನ್ನಡದ ಏಳಿಗೆಗಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದಲ್ಲಿ ಶಿಕ್ಷಣ ಕನ್ನಡದಲ್ಲೇ ಆದರೆ ನಮ್ಮತನವನ್ನು ಉಳಿಸಿಕೊಳ್ಳಬಹುದು ಮತ್ತು ಕಲಿಕೆಯ ಭಾಷೆ ಕನ್ನಡವೇ ಆಗಬೇಕು ಎಂದು ಘೋಷಿಸಿದರು. ಈ ನಿಟ್ಟಿನಲ್ಲಿ

ಸಾಗರದಾಚೆ ನೆಲೆಸಿರುವ ಕನ್ನಡಿಗರ ಪ್ರಯತ್ನಗಳು ಶ್ಲಾಘನೀಯ. ಕನ್ನಡವನ್ನು ಉಳಿಸುವ ವಾತಾವರಣವನ್ನು ಕಲ್ಪಿಸಬೇಕು ಹಾಗೂ "ಎಲ್ಲಾದರು ಇರು, ಎಂತಾದರು ಇರು, ಎಂದೆದಿಗು ನೀ ಕನ್ನಡವಾಗಿರು" ಅನ್ನೋ ಭಾವನೆ ಪ್ರತಿಯೊಬ್ಬ ಕನ್ನಡಿಗನಲ್ಲಿ ಬಂದರೆ ಮಾತ್ರ ಕನ್ನಡದ ಏಳಿಗೆ ಸಾಧ್ಯವೆಂದು ಅಭಿಪ್ರಾಯ ಪಟ್ಟರು. ನಮ್ಮ ರಾಜ್ಯಕ್ಕೆ ಯಾರು ಬಂದರೂ ಅವರನ್ನು ಉದಾರದಿಂದ ಬರಮಾಡಿಕೊಳ್ಳುವ ವಿಶಾಲ ಹೃದಯವಂತರು ಕನ್ನಡಿಗರು ಮತ್ತು ಕನ್ನಡಿಗರ ಮೇಲೆ ದಬ್ಬಾಳಿಕೆ ಸಲ್ಲದು ಎಂದರು. ಆಡಳಿತ, ಶಿಕ್ಷಣ ಮತ್ತು ವ್ಯಾಪಾರ ಕನ್ನಡದಲ್ಲೇ ಆಗಬೇಕು. ಜ್ಞಾನವರ್ಧನೆ ಮಾತೃಭಾಷೆಯಲ್ಲಿ ಮಾತ್ರ ಸಾಧ್ಯ ಎಂದು ಅಭಿಪ್ರಾಯ ಪಟ್ಟರು. ಕನ್ನಡದ ನಿತ್ಯ ಬಳಕೆ ಆದರೆ ಮಾತ್ರ ರಾಜ್ಯೋತ್ಸವ ನಿತ್ಯೋತ್ಸವವಾಗುತ್ತದೆ ಎಂದು ಉಲ್ಲೇಖಿಸಿದರು.

ಬೃಂದಾವನದ ಹಲವು ವೀಕ್ಷಕರ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಸಾಹಿತ್ಯ ಸಾಯೋದಿಲ್ಲ, ಸೃಜನಶೀಲತೆ ಸಾಯೋದಿಲ್ಲ, ತಾತ್ಕಾಲಿಕ ಹೊಡತೆಗಳು ಸಹಜ ಆದರೆ ಕಾಲಚಕ್ರದಲ್ಲಿ ಬರವಣಿಗೆಯ ಉದ್ಧಾರ ಕುಂಠಿತವಾಗುವುದಿಲ್ಲ ಎಂದರು. ತಮಗೆ ಹಾಸ್ಯ ಪ್ರಧಾನ ಪಾತ್ರಗಳು ಹೆಚ್ಚಿನ ಸಂತೋಷ ಕೊಡುತ್ತವೆ, ಹಾಸ್ಯ ಅಶ್ಲೀಲವಾಗಿ ಇರಬಾರದು ಎಂದ ಮುಖ್ಯಮಂತ್ರಿ ಚಂದ್ರು ಅವರು ತಮ್ಮ ವಾಕ್ಚಾತುರ್ಯದಿಂದ ಎಲ್ಲರ ಮನಸ್ಸನ್ನು ಸೂರೆಗೊಂಡರು.

ಮುಖ್ಯಮಂತ್ರಿ ಚಂದ್ರು ಅವರ ಕಾರ್ಯಕ್ರಮದ ನಂತರ ಬೃಂದಾವನ ಸದಸ್ಯರಿಂದ ಲಕ್ಷಕಂಠ ಗಾಯನದ ಧ್ವನಿ ಮುದ್ರಿಕೆಯನ್ನು ಬಿತ್ತರಿಸಲಾಗಿತು. ಹಿರಿಯ ಸದಸ್ಯರು ಹಾಡಿದ ಬಾರಿಸು ಕನ್ನಡ ಡಿಂಡಿಮವಾ, ನಿತ್ಯೋತ್ಸವ ಮುಂತಾದ ಹಾಡುಗಳು ಕೇಳುವವರನ್ನು ಮಂತ್ರ ಮುಗ್ದರನ್ನಾಗಿ ಮಾಡಿದ್ದವು.

ಬೃಂದಾವನದ ಸದಸ್ಯರ ಪ್ರಶ್ನೆಗಳಿಗೆ ಹಾಸ್ಯಮಯ ರೀತಿಯಲ್ಲಿ ಉತ್ತರಿಸಿದ ಚಂದ್ರು "ಸೀತಾಪತಿ ಅಂತೋರು ನಿಜಜೀವನದಲ್ಲಿ ಸಿಕ್ಕಿದ್ರೆ ಏನ್ ಮಾಡ್ತಾ ಇದ್ರಿ" ಎಂಬ ಪ್ರಶ್ನೆಗೆ "ಊರು ಖಾಲಿ ಮಾಡಿ ಅಮೆರಿಕಾಗೆ ಬಂದು ಸೆಟ್ಲ್ ಆಗತ್ತಾ ಇದ್ದೆ. ಇಂಟರ್ನ್ಯಾಷನಲ್ ಕಾಲ್ ಮಾಡಕ್ಕೆ ಆಗಲ್ಲ" ಅಂತ ಹಾಸ್ಯ ಚಟಾಕಿ ಹಾರಿಸಿದರು. ಪಾಕಶಾಸ್ತ್ರ ಪ್ರವೀಣ ಚಂದ್ರು ಅವರನ್ನು "ಅಡುಗೆ ಮತ್ತು ನಟನೆಗಳಲ್ಲಿ ಯಾವುದು ಆತ್ಮೀಯ" ವೆಂಬ ಸಂದೇಹಕ್ಕೆ "ನಾನು ಮೂಲತಃ ನಟ. ಅದು ಫಸ್ಟ್ ಲವ್. ಉಳಿದದ್ದು ಹವ್ಯಾಸ" ಅನ್ನುತ್ತಾ ನಟನೆಯ ಬಗ್ಗೆ ಅವರಲ್ಲಿರುವ ಅಭಿಮಾನವನ್ನು ಬಹಿರಂಗಪಡಿಸಿದರು. ನನ್ನ ಅಡುಗೆ ಕಾರ್ಯಕ್ರಮಗಳನ್ನು ನೋಡಿ ಜನ ನಾನು ನಟ ಅನ್ನೋದನ್ನೇ ಮರೆತಿದ್ದಾರೆ ಅಂತ ತಮಾಷೆಯಾಗಿ ಉತ್ತರಿಸಿದರು. ಕೋವಿಡ್ ಸಮಯದಲ್ಲಿ ಪುರುಷರು ಮಾಡೋ ಅಡಿಗೆಯನ್ನು ತಿನ್ನೋ ಹೆಂಗಸರಿಗೆ ಏನು ಹಿತವಚನ ನೀಡ್ತೀರಾ " ಅನ್ನುವ ಪ್ರಶ್ನೆಗೆ ", "ಗಂಡಸ್ರು ಅಡುಗೆ ಮಾಡಿದ್ರೆ ಇಷ್ಟ ಪಟ್ ತಿನ್ನಿ. ಇಲ್ಲಾಂದ್ರೆ ಅದೂ ಸಿಗಲ್ಲ" ಅಂತ ಹೆಂಗಸರಿಗೆ ಹಾಸ್ಯಮಯ ಬುದ್ಧಿವಾದ ಹೇಳಿದರು. ರಂಗಭೂಮಿಯ ಬಗ್ಗೆ ಮಾತನಾಡುತ್ತಾ "ನಟರಿಗೆ ಕಲೆಯನ್ನು ಶಾರ್ಪ್ ಮಾಡೋದಕ್ಕೆ ರಂಗಭೂಮಿ ಒಂದು ಒಳ್ಳೆಯ ಮಾಧ್ಯಮ. ಅದು ನಟರನ್ನು ಜೀವಂತ ಇಡುತ್ತೆ" ಅಂತ ತಮ್ಮ ಹೃದಯವನ್ನು ಬಿಚ್ಚಿಕೊಂಡರು.

ಬೃಂದಾವನ ಪಾಟ್ಲಕ್ಗೆ ಏನು ಮಾಡ್ಕೊಂಡ್ ಬರ್ತೀರಾ ಅನ್ನುವುದಕ್ಕೆ "ನಾನು ಪಾನಿ ಪುಚ್ಕೆ ಮಾಡಿಕೊಂಡು ಬರ್ತೀನಿ" ಅನ್ನುವ ರಹಸ್ಯ ಬಯಲುಮಾಡಿದರು. "ಪೂರಿ ತರ ಪುಚ್ಕೆ ನೆನೆಯಕ್ಕೆ ಬಿಟ್ರೆ ಸಾಫ್ಟ್ ಆಗಿ ಇರತ್ತೆ. ಬೊಂಬಾಟ್ ಭೋಜನ ಕಾರ್ಯಕ್ರದಮಲ್ಲಿ ಮಾಡಿದ್ದೆ. ಅಮೆರಿಕಾಗೆ ಕರೆಸಿ. ನಿಮಗೂ ಮಾಡಿಕೊಡ್ತೀನಿ" ಅಂತ ಜನರ ಬಾಯಲ್ಲಿ ನೀರೂಡಿಸಿದರು. "ಇಷ್ಟೆಲ್ಲಾ ಹೇಗೆ



ನಿಭಾಯಿಸ್ತೀರಾ " ಅನ್ನೋ ಪ್ರಶ್ನೆಗೆ "ನಾನು ದಿನಕ್ಕೆ ಮೂರು ಘಂಟೆ ಮಾತ್ರ ನಿದ್ದೆ ಮಾಡ್ತೀನಿ. ನಿಮಗೆಲ್ಲ ತಿಂಗಳಿಗೆ "೩೦ ದಿವಸ ಇದ್ರೆ ನನಗೆ ೩೫ ದಿವಸಗಳು ಇರುತ್ತವೆ. ಯಾವುದೂ ಬ್ರಹ್ಮವಿದ್ಯೆ ಅಲ್ಲ " ಅನ್ನುತ್ತಾ ತಮ್ಮ ಕಾರ್ಯಶೀಲ ವ್ಯಕ್ತಿತ್ವವನ್ನು ಪರಿಚಯಿಸಿದರು. "ಕನ್ನಡವನ್ನು ಬಳಸಿ, ಕನ್ನಡದಲ್ಲಿ ಮಾತನಾಡಿ, ಅದು ತನ್ನ ಹಾಗೆಯೇ ಬೆಳೆಯುತ್ತದೆ" ಅನ್ನುವ ಸಂದೇಶವನ್ನು ಸಾರುತ್ತಾ ಎಲ್ಲಾರ ಹೃದಯನ್ನೂ ಗೆದ್ದ "ಸಿಹಿ ಕಹಿ" ಚಂದ್ರು ಅವರು ಶೂಟಿಂಗ್ ಗೆ ನಿರ್ಗಮಿಸಿದರು.

ಚಿತ್ರೀಕರಣದ ಬಿರುಸಿನ ಮಧ್ಯೆ ಕಾಲಾವಕಾಶ ಕಲ್ಪಿಸಿಕೊಂಡು ತಮ್ಮ ಅಮೂಲ್ಯ ಸಮಯವನ್ನು ಬೃಂದಾವನದ ಸದಸ್ಯರೊಡನೆ ಕಳೆದ ಮತ್ತೊಬ್ಬ ದಿಗ್ಗಜ "ಸಿಹಿ ಕಹಿ" ಚಂದ್ರು ಅವರು. ಉಮಾರವರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ "ಸಿಹಿ ಕಹಿ" ಚಂದ್ರು ಅವರನ್ನು ಅಭಿನಂದಿಸುತ್ತಾ ಅವರಿಗೆ ಬೃಂದಾವನದ ಪರವಾಗಿ ತುಂಬುಹೃದಯದ ಸ್ವಾಗತವನ್ನು ಕೋರಿದರು. ಚಂದ್ರು "ಅಮೆರಿಕಾಗೆ ಕಾಲಿಟ್ಟ ಘಳಿಗೆ ಚನ್ನಾಗಿತ್ತು. ಅಲ್ಲಿ ನನ್ನ ಪ್ರಶಸ್ತಿಯ ಘೋಷಣೆ ಆಯಿತು" ಎಂದು ಈ ವಿಶಿಷ್ಟ ಸಮಯದಲ್ಲಿ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡರು.

ಬೃಂದಾವನ ಅಧ್ಯಕ್ಷೆಯಾದ ಪದ್ಮಿನಿ ಹೇಮಂತ್ ಅವರು ಗಣ್ಯರಿಗೆ ಬೀಳ್ಕೊಟ್ಟು, ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕಾರ್ಯನಿರತರಾದ ಸರ್ವರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು.



# ಸಂತನಲ್ಲದ ಸಂತನ ಸ್ವಗತ–ಭಾಗ ೨

ನರಸಿಂಹ ಮೂರ್ತಿ, ನ್ಯೂ ಜೆರ್ಸಿ

### ನನ್ನ ಅಕ್ಕ

ತಂದೆ ತಾಯಿಗೆ ನಾವು ಮೂರು ಜನ ಮಕ್ಕಳು. ನನ್ನ ಅಕ್ಕ, ನಾನು ಮತ್ತು ನನ್ನ ತಂಗಿ. ತಂದೆಯವರದು ಸರ್ಕಾರಿ ಕೆಲಸ. ವರ್ಗವಾಗುವ ಪ್ರಕ್ರಿಯೆಂದ ಹಲವು ಊರುಗಳಲ್ಲಿ ಕೆಲಸ ಮಾಡಬೇಕಿತ್ತು. ಹಾಗಾಗಿ ನನ್ನ ಮತ್ತು ಅಕ್ಕನ ವಿದ್ಯಾಭ್ಯಾಸದ ಸಲುವಾಗಿ ಧಾರಾವಾಡದಲ್ಲೊಂದು ಮನೆ ಮಾಡಿದರು. ಅಜ್ಜ, ಅಜ್ಜಿ, ಅಕ್ಕ ಮತ್ತು ನಾನು ಧಾರವಾಡದಲ್ಲಿ ನೆಲೆಸಿದೆವು. ಅಕ್ಕ ಲತಾ ತುಂಬಾ ಬುದ್ಧಿವಂತೆ. ಸದಾ ಮೊದಲ rank ನಲ್ಲಿಯೇ ತೇರ್ಗಡೆಯಾಗುತ್ತಿದಳು. ನನ್ನನ್ನು ತುಂಬಾ ಪ್ರೀತಿಯಿಂದ ಕಾಣುತ್ತಿದಳು. ತಮ್ಮ ಎಂದು ಎಣಿಸದೆ ನನ್ನನ್ನು ಮಗುವಿನಂತೆಯೇ ಕಂಡವಳು. ಅಜ್ಜನಷ್ಟೇ ನನ್ನ ಮೇಲೆ ಪ್ರಭಾವ ಬೀರಿದವಳು. ಅಜ್ಜ ನನಗೆ ಜೀವನದ ಮೌಲ್ಯಗಳನ್ನು ಕಲಿಸಿದರೆ, ಅಂತಃಕರಣವನ್ನು ಕಲಿಸಿಕೊಟ್ಟವಳು ನನ್ನ ಅಕ್ಕ.




### ವಿದ್ಯಾಭ್ಯಾಸ ಮತ್ತು ವೃತ್ತಿ ಜೀವನ

ಹತ್ತನೆಯ ತರಗತಿಯವರೆಗೆ ಧಾರವಾಡದಲ್ಲಿ ಓದಿದ ನಂತರ, ಮುಂದಿನ ಮೂರು ವರ್ಷದ ವಿದ್ಯಾಭ್ಯಾಸ ಜಮಖಂಡಿಯಲ್ಲಿ ನಡಯಿತು. ನಂತರ ಮತ್ತೆ ಧಾರವಾಡಕ್ಕೆ ಮರಳಿ ಬಂದೆ. ಪದವಿ, ಸ್ನಾತಕೋತ್ತರ ಪದವಿ(M.Sc) ಹಾಗು Ph.D ಪದವಿಗಳನ್ನು ಧಾರಾವಾಡದ್ದಲಿಯೇ ಮುಗಿಸಿದೆ. ವೃತ್ತಿ ಜೀವನಕ್ಕಾಗಿ ಬೆಂಗಳೂರಿಗೆ ಬಂದೆ. ರಾಜಾಜಿನಗರದ ವಿದ್ಯಾವರ್ಧಕ ಸಂಘ ಕಾಲೇಜು ಸೇರಿ, ಮುಂದಿನ 25 ವರ್ಷಗಳನ್ನು ರಸಾಯನ ಶಾಸ್ತ್ರ ಪಾಠ ಮಾಡುತ್ತಾ ಈ ಸಂಸ್ಥೆಯಲ್ಲಿಯೇ ಕಳೆದೆ.

### ರಾಜರತ್ನಂ ಪರಿಚಯಿಸಿದ ಬೇಂದ್ರೆ

ಧಾರಾವಾಡಧಾಲ್ಲಿಯೇ ಹೆಚ್ಚು ಸಮಯ ಕಳೆದಿದ್ದ ನನಗೆ ಬೆಂಗಳೂರು ತೀರಾ ಹೊಸದು. ಯಾರ ಪರಿಚಯವೂ ಇರಲಿಲ್ಲ. ಅನಾಥ ಪ್ರಜ್ಞೆ ಕಾಡುತ್ತಿತ್ತು. ಹಾಗಾಗಿ ಬೆಂಗಳೂರಿನಲ್ಲಿ ಕೆಲಸ ಸಿಕ್ಕಾಗ, ಸಹಾಯಕ್ಕಾಗಿ ಬೇಂದ್ರೆಯವರಲ್ಲಿ ಹೋದೆ. ಚಿಕ್ಕಂದಿನಿಂದ ನನಗೆ ಬೇಂದ್ರೆಯವರ ಜೊತೆ ಒಡನಾಟ ಇತ್ತು (ಅವರು ನಮ್ಮ ಮನೆಗೆ ಬರುತ್ತಿದ್ದರು). "ಏನೋ, ನೀನೂ ಕೆಟ್ಟು ಪಟ್ಟಣ ಸೇರುತ್ತೀಯಾ?" ಎಂದರು. "ಇಲ್ಲ. ಕೆಟ್ಟೇನೂ ಹೋಗಲ್ಲ. ನೌಕರಿಗಾಗಿ ಹೋಗುತ್ತಿದ್ದೇನೆ. ಆದರೆ ನನಗೆ ಅಲ್ಲಿ ಯಾರ ಪರಿಚಯವೂ ಇಲ್ಲ" ಎಂದೆ. "ಚಿಂತಿ ಮಾಡಬ್ಯಾಡ. ಒಂದು ಪತ್ರ ಕೊಡುತ್ತೇನೆ. ನಾಳೆ ಬಂದು ತೆಗೆದುಕೊಂಡು ಹೋಗು" ಎಂದರು. ಮರುದಿನ ಬೇಂದ್ರೆಯವರ ಮನೆಗೆ ಹೋದಾಗ ಸೀಲ್ ಮಾಡಿದ ಲಕೋಟೆಯೊಂದನ್ನು ಕೊಟ್ಟರು. ಅದರ ಮೇಲೆ "ಜಿ. ಪಿ. ರಾಜರತ್ನಂ" ಎಂದು ಬರೆದಿತ್ತು!

ಬೆಂಗಳೂರಿಗೆ ಬಂದು ಸುಮಾರು ಒಂದು ತಿಂಗಳ ನಂತರ, ನಮ್ಮ ಸಂಸ್ಥೆಯ ಕಾರ್ಯದರ್ಶಿಯಾಗಿದ್ದ ಶ್ರೀ ಹರಿ ಅವರ ಮುಖಾಂತರ ರಾಜರತ್ನಂ ಅವರ ಸಂಪರ್ಕ ಸಾಧ್ಯವಾಯಿತು. ಒಂದು ಭಾನುವಾರ ಶ್ರೀ ಹರಿಯವರು ಮಲ್ಲೇಶ್ವರಂ ನಲ್ಲಿದ್ದ ರಾಜರತ್ನಂರವರ ಮನೆಗೆ ಕರೆದುಕೊಂಡು ಹೋದರು. ಕಂಚಿನ ಕಂಠದ ರಾಜರತ್ನಂರವರಿಗೆ ಅಂಜುತ್ತಲೇ, ಬೇಂದ್ರೆಯವರ ಪತ್ರ ಕೊಟ್ಟೆ. "ಏನು, ದೊಡ್ಡವರಿಂದಲೇ ರೆಕಮೆಂಡೇಷನ್ ತಂದಿದ್ದೀರೋ", ಎಂದು ಹೇಳುತ್ತಾ ಪತ್ರ ಓದಿದರು. "ವರಕವಿಗಳು ನಿಮ್ಮ ಬಗ್ಗೆ ತುಂಬಾ ಪ್ರಶಂಸೆಯಿಂದ ಬರೆದಿದ್ದಾರೆ. ಇಲ್ಲಿ ನಿಮಗೆ ಯಾರ ಪರಿಚಯವಿಲ್ಲ ಎಂದಿದ್ದಾರೆ. ಒಂದು ಕೆಲಸ ಮಾಡಿ. ಪ್ರತಿ ದಿನ ಸಂಜೆ ಇಲ್ಲಿ ಬಂದುಬಿಡಿ. ಕೆಲಸ ಇರುತ್ತದೆ" ಎಂದರು.

ಪ್ರತಿದಿನ ಸಂಜೆ ಬಾಡಿಗೆ ಸೈಕಲ್ ನಲ್ಲಿ ರಾಜಾಜಿ ನಗರದಿಂದ ಮಲ್ಲೇಶ್ವರಂ 17 ನೆಯ ಕ್ರಾಸ್ ನಲ್ಲಿದ್ದ ರಾಜರತ್ನಂರವರ "ವಿದೇಹ" ಮನೆ ತಲುಪುತ್ತಿದ್ದೆ. ಏನಾದರೂ ಒಂದು ಕೆಲಸ ನನಗೆ ಹಚ್ಚುತ್ತಿದ್ದರು. ರಾಜರತ್ನಂರವರ ಪುಸ್ತಕಗಳು ಪ್ರಕಟವಾಗುತ್ತಿದ್ದವು. ಮುದ್ರಣಕ್ಕೂ ಮೊದಲು ನಡೆಯುವ ಕರಡು ಪರಿಷ್ಕರಿಸುವುದನ್ನು(proof reading) ರಾಜರತ್ನಂ ನನಗೆ ಕಲಿಸಿಕೊಟ್ಟರು. ಮುದ್ರಣಕ್ಕೆ ಬೇಕಾಗುವ ಕಾಗದಗಳನ್ನು ಲೆಕ್ಕ ಮಾಡುವ ಬಗೆಯನ್ನು ತಿಳಿಸಿಕೊಟ್ಟರು. ಯಾವುದೇ ವಿಶ್ವವಿದ್ಯಾನಿಲಯದಲ್ಲಿಯೂ ದೊರೆಯದ ಪಾಠಗಳನ್ನು ನಾನು ರಾಜರತ್ನಂ ಅವರಿಂದ ಕಲಿತೆ. ಇಷ್ಟೇ ಅಲ್ಲದೆ, ಕನ್ನಡ ಸಾಹಿತ್ಯ ಲೋಕದ ಜ್ಞಾನದ ಬಾಗಿಲನ್ನು ನನಗೆ ತೆರೆದವರು ರಾಜರತ್ನಂ. ಅವರನ್ನು ನಾನು ತಂಪು ಹೊತ್ತಿನಲ್ಲಿ ನೆನೆಸಿಕೊಳ್ಳುತ್ತೇನೆ.

**ಕನ್ನಡ ಸಾಹಿತ್ಯ ಲೋಕದ ದಿಗ್ಗಜಗಳ ಮುಂದೆ**

ನನಗೆ ಮಾರ್ಗದರ್ಶನ ಮಾಡುತ್ತಿದ್ದ ರಾಜರತ್ನಂ, ಮುಂದೆ ನನಗೆ ಪಾಳಿ ಭಾಷೆಯನ್ನು ಕಲಿಸಿಕೊಟ್ಟರು. ಪಾಳಿ ಭಾಷೆಯಲ್ಲಿದ್ದ ಬುದ್ಧನ ಕಥೆಗಳನ್ನು ನನ್ನ ಮುಂದೆ ತಂದಿಟ್ಟು, ಕನ್ನಡಕ್ಕೆ ಅನುವಾದಿಸಲು ಹೇಳಿದರು. ಒಂದು ಇಪ್ಪತ್ತು ಕಥೆಗಳ ಅನುವಾದ ಮುಗಿದಿತ್ತು. ಅಷ್ಟರಲ್ಲಿ ರಾಜರತ್ನಂ, "ನೀವೇಕೆ ಈ ಕಥೆಗಳ ಬಗ್ಗೆ ಒಂದು ಉಪನ್ಯಾಸ ಕೊಡಬಾರದು?" ಎಂದರು. ಎಲ್ಲಿ ಉಪನ್ಯಾಸ ನೀಡಬೇಕು ಎಂದು ಕೇಳಿದೆ. "ಇಲ್ಲೇ ಎನ್ ಆರ್ ಕಾಲೋನಿಯಲ್ಲಿ. ಒಂದು ಹತ್ತಿಪ್ಪತ್ತು ಜನ ಸೇರುತ್ತಾರೆ. ಹೆಚ್ಚು ಜನ ಇರುವುದಿಲ್ಲ" ಎಂದರು ರಾಜರತ್ನಂ. ನನಗೆ ಕಾಲೇಜಿನಲ್ಲಿ ಪಾಠ ಮಾಡಿ ಗೊತ್ತಿತ್ತೇ ಹೊರತು, ಸಾರ್ವಜನಿಕವಾಗಿ ಮಾತನಾಡಿ ಅಭ್ಯಾಸ ಇರಲಿಲ್ಲ(ಹಿಂದೆ ವಿದ್ಯಾರ್ಥಿ ದಿನಗಳಲ್ಲಿ ಭಾಷಣ ಸ್ಪರ್ಧೆಗಳಲ್ಲಿ ಚೆನ್ನಾಗಿಯೇ ಮಾತನಾಡುತ್ತಿದ್ದೆ). ಅವರು ಹೇಳಿದ ರೀತಿ ಕೇಳಿ, "ಹದಿನೈದು ಇಪ್ಪತ್ತು ಜನ ಆದರೆ ಪರವಾಗಿಲ್ಲ. ಮಾಡುತ್ತೇನೆ" ಎಂದು ಒಪ್ಪಿದೆ (ನನ್ನ ಮನಸ್ಸಿನಲ್ಲಿ ಆ ಹದಿನೈದು ಇಪ್ಪತ್ತು ಜನ ವಿದ್ಯಾರ್ಥಿಗಳೇ ಇರಬೇಕು ಎಂಬ ಭಾವನೆ).

ಒಂದು ಭಾನುವಾರ ಬೆಳಿಗ್ಗೆ ರಾಜರತ್ನಂ ಮತ್ತು ನಾನು ರಿಕ್ಷಾದಲ್ಲಿ ಹೊರಟೆವು. ಬಂದು ತಲುಪಿದ್ದು ಎನ್ ಆರ್ ಕಾಲೋನಿಯಲ್ಲಿದ್ದ ಗೋಖಲೆ ಇನ್ಸ್ಟಿಟ್ಯೂಟ್ ಮುಂದೆ. ಅದು ಅಂದಿನ ದಿನಗಳಲ್ಲಿ ಒಂದು ಸಣ್ಣ ಕಟ್ಟಡವಾಗಿತ್ತು. ಕಟ್ಟೆಯ ಮೇಲೆ ಗುಂಡಪ್ಪ (ಡಿ ವಿ ಜಿ ) ಕುಳಿತಿದ್ದರು. ಅವರನ್ನು ನೋಡಿ ನನಗೆ ಎದೆ ಒಡೆದು ಹೋಯ್ತು. "ಡಿ ವಿ ಜಿ ಯವರು ಯಾಕೆ ಇಲ್ಲಿದ್ದಾರೆ ಸಾರ್?" ಎಂದು ರಾಜರತ್ನಂ ಅವರನ್ನು ಪ್ರಶ್ನಿಸಿದೆ. "ಅವರೇ ಅಲ್ಲವೇನ್ರೀ ಈ ಸಮಾರಂಭಕ್ಕೆ ಅಧ್ಯಕ್ಷರು?" ಎಂದರು ರಾಜರತ್ನಂ. ಅಯ್ಯೋ ಕಥೆಯೇ? ಅಂದುಕೊಂಡೆ. ಒಳಗೆ ಹೋದೆವು. ಅಂದು ಯಾವುದೊ ಒಂದು ವಿಶೇಷ ಸಮಾರಂಭ ಅಲ್ಲಿ ಏರ್ಪಟ್ಟಿತ್ತು. ಸ್ವಲ್ಪ ಹೊತ್ತಿನಲ್ಲಿ ವಿ. ಸೀ ಬಂದರು. ಎಂ. ವಿ. ಸೀತಾರಾಮಯ್ಯ ಬಂದರು. ಗೋಕಾಕ್ ಬಂದರು. ಆಮೇಲೆ ಮಾಸ್ತಿ ಬಂದರು! ಒಬ್ಬೊಬ್ಬರನ್ನು ನೋಡುತ್ತಿರುವಂತೆಯೇ ನನಗೆ ಮೈಯಲ್ಲಿ ಚಳಿ ಜ್ವರ ಬರತೊಡಗಿತು.

ರಾಜರತ್ನಂ ಅವರನ್ನು ಕೊಠಡಿಯ ಒಂದು ಮೂಲೆಗೆ ಕರೆದುಕೊಂಡು ಹೋಗಿ ಕೇಳಿದೆ, "ನನ್ನನ್ನು ಕೊಲ್ಲೋಕೆ ಇಲ್ಲಿಗೆ ಯಾಕೆ ಕರೆದುಕೊಂಡು ಬಂದಿರಿ? ರಾಜಾಜಿ ನಗರವೇ ಚೆನ್ನಾಗಿತ್ತಲ್ಲ?".

ರಾಜರತ್ನಂ ನುಡಿದರು, "ನೋಡಿ ಮೇಷ್ಟ್ರೇ , ಏನೋ ತಯಾರಾಗಿ ಬಂದಿದ್ದೀರಿ. ಮುಂದೆ ಕುಳಿತವರೆಲ್ಲ ಕತ್ತೆಗಳು ಎಂದುಕೊಂಡು ಶುರುಮಾಡಿ.. ದೊಡ್ಡವರು ಅಂದುಕೊಂಡರೆ ಮಾತನಾಡಲು ಆಗಲ್ಲ. ಧೈರ್ಯವಾಗಿ ಮಾತನಾಡಿ!".

ಮೊದಲು ಐದು ನಿಮಿಷ ಮಾತನಾಡಲು ಚಳಿ ಆಯ್ತು. ನಂತರ ಕಥೆಗಳ ಓಘದಲ್ಲಿ ಸೇರಿಕೊಂಡು ಮಾತಾನಾಡಿದೆ. ಸುಮಾರು ಮೂವತ್ತರಿಂದ ನಲವತ್ತು ನಿಮಿಷಗಳಷ್ಟು ಮಾತನಾಡಿದೆ. ಮುಗಿಯುವ ಹೊತ್ತಿನಲ್ಲಿ ಮತ್ತೆ ಭಯ ಶುರುವಾಯ್ತು. ಇವರೆಲ್ಲ ಏನು ಹೇಳುತ್ತಾರೋ ಎಂಬ ಆತಂಕ!

ಡಿ ವಿ ಜಿ ಯವರು ಬಂದು, ಬೆನ್ನು ಮೇಲೊಂದು ಗುದ್ದಿ, "ಭೇಷ್. ಚೆನ್ನಾಗಿ ಮಾತನಾಡಿದಿರಿ" ಎಂದರು.



ಮಾಸ್ತಿಯವರಿಗೆ ಆಗ ಹೆಚ್ಚು ಕಡಿಮೆ ಎಂಭತ್ತು ವರ್ಷ ವಯಸ್ಸಿರಬೇಕು. ಪುಟ ಪುಟ ಹೆಜ್ಜೆ ಹಾಕುತ್ತ ಬಂದು ನನ್ನ ಭುಜ ಹಿಡಿದು ಹೇಳಿದರು, "ನೋಡಿ ಮೇಷ್ಟ್ರೇ, ಈ ಅಂಗುಲಿಮಾಲಾ ಕಥೆ ಎಷ್ಟು ಚೆನ್ನಾಗಿದೆ. ನಾವು ಇದನ್ನುಕನ್ನಡದಲ್ಲಿ ಕೆಡಿಸಿಬಿಟ್ಟಿದ್ದೇವೆ. ನನಗೆ ಬರೆದು ಕಳುಹಿಸಿ. ಜೀವನ ಪತ್ರಿಕೆಯಲ್ಲಿ ಪ್ರಕಟಿಸುತ್ತೇನೆ". ನನಗೆ ಆಕಾಶ ಮುಟ್ಟಿದಷ್ಟು ಸಂತೋಷವಾಯ್ತು. ಮಾಸ್ತಿಯಂತಹ ಕಥೆಗಾರ ಬಂದು ಹೇಳುತ್ತಾರೆ ಎಂದರೆ? ಆಗ ನನಗೆ ಅನಿಸಿತು,"ನಾನು ಚೆನ್ನಾಗಿ ಮಾತನಾಡಿದೆ ಎಂದು ಅಹಂಕಾರ ಪಡಬೇಕಾಗಿಲ್ಲ ನನ್ನದು ಬಾಲ ಭಾಷೆ. ಆದರೆ, ನಾನು ಹೇಳಿದ್ದರಲ್ಲಿ ಒಳ್ಳೆಯದನ್ನು ಕಾಣುವ ದೊಡ್ಡ ಗುಣ ಮಾಸ್ತಿಯವರಲ್ಲಿದೆ".

ಒಬ್ಬ ಡಿ ವಿ ಜಿ, ಒಬ್ಬ ಮಾಸ್ತಿ ಹೇಳಿದರೆ ಸಾಕಲ್ಲವೇ? ಜೀವನಕ್ಕೆ ಧನ್ಯತೆ ಬಂದ ಹಾಗೆಯೇ!!!

(ಮುಂದುವರೆಯುವುದು ....)



# ಕನ್ನಡ ಚಲನಚಿತ್ರಗಳ ಚೈತ್ರ ಕಾಲ

ಮಲ್ಲಿಕ್ ಪ್ರಸಾದ್, ನ್ಯೂ ಜರ್ಸಿ

ಕನ್ನಡ ಚಲನಚಿತ್ರಗಳ ಚೈತ್ರ ಕಾಲ ಬಂದಿದೆ ಎಂದರೆ ತಪ್ಪಾಗದು, ೨೦೨೨ ಕನ್ನಡ ಚಿತ್ರಗಳು ಕೆ. ಜಿ. ಎಫ್ - ೨, ಜೇಮ್ಸ್ , ಚಾರ್ಲಿ ೭೭೭, ವಿಕ್ರಾಂತ್ ರೋಣ ಮತ್ತು ಕಾಂತಾರ ಪ್ಯಾನ್ ಇಂಡಿಯಾ ಚಿತ್ರಗಳಾಗಿ ಬಾಕ್ಸ್ ಆಫೀಸ್ ನಲ್ಲಿ ಭರ್ಜರಿಯಾಗಿ ಗೆದ್ದಿದೆ. ಅಂಡರ್ ಡಾಗ್ ಆಗಿದ್ದ ಕನ್ನಡ ಚಿತ್ರೋದ್ಯಮ ೨೦೨೨ರಲ್ಲಿ ಬಾಲಿ, ಕೋಲಿ, ಟಾಲಿ, ಮಲ್ಲು ವುಡ್ ಗಳು ತಿರುಗಿ ನೋಡುವಂತೆ ಮಾಡಿದೆ; ೨೦೨೩ರಲ್ಲಿ ಇನ್ನು ಹೆಚ್ಚು ಯಶಸ್ವೀ ಕನ್ನಡ ಚಿತ್ರಗಳನ್ನ ನೀಡುವ ಭರವಸೆ ಕೂಡ ಇದೆ...




**ಕಾಂತಾರ - ಒಂದು ದಂತ ಕಥೆ!**

ಕಾಂತಾರ ಒಂದು ದೈವೀ ಬ್ಲಾಕ್ ಬಸ್ಟರ್ - Divine Block Buster !
ಕನ್ನಡ ಚಿತ್ರ ರಂಗವನ್ನು ಒಂದು ದೊಡ್ಡ ಮಜಲಿಗೆ ಕೊಂಡೊಯ್ದ ಚಿತ್ರ ಎಂದರೆ ತಪ್ಪಾಗಲಾರದು. ರಿಷಬ್ ಶೆಟ್ಟಿ  ಅವರೇ ಕಥೆ ಬರೆದು, ನಟಿಸಿ, ನಿರ್ದೇಶಿಸಿ, ಹೊಂಬಾಳೆ ಫಿಲಂಸ್ ನಿರ್ಮಾತ ಒಂದು ಉತ್ತಮ ಕಥಾ ವಸ್ತು ಹೊಂದಿದೆ, ನಮ್ಮ ಕರಾವಳಿ ಕರ್ನಾಟಕದ ಭವ್ಯ ಪರಂಪರೆ, ಸ್ಥಳೀಯ ದೇವ, ದೈವಾರಾಧನೆ  ಪದ್ದತಿಗಳನ್ನು ಉತ್ಕೃಷ್ಟ ಮಟ್ಟದಲ್ಲಿ ನಾಜೂಕಾಗಿ ಕಥೆ ಹೆಣೆದು ಪ್ರತಿ ಪಾತ್ರಕ್ಕೂ ಜೀವ ತುಂಬಿಸಿ ದೈವ, ಭೂತ ಕೋಲದ ಬಗ್ಗೆ  ಜನರಿಗೆ ಅರಿವನ್ನು ಮೂಡಿಸಿ ಮತ್ತು ಬೆರಗಾಗುವಂತೆ ಚಿತ್ರಿಸಲಾಗಿದೆ ! ಕರಾವಳಿಯ ಸ್ಥಳೀಯತೆ ಮೇಲೆ ಅಪಾರವಾಗಿ ಆಸ್ಥೆ ಇಟ್ಟು  ಉಡುಗೆ ತೊಡುಗೆ, ವಿಶಿಷ್ಟ ಎಮ್ಮೆಗಳ ಓಟ - ಕಂಬಳ, ದೈವಾರಾಧನೆ, ಆಚಾರ ವಿಚಾರಗಳ ಸೂಕ್ಷ್ಮತೆ ಕಾಪಾಡಿಕೊಂಡಿದೆ. ಶಿವನ (ರಿಷಬ್) ಗೆಳತಿ ಲೀಲಾ (ಸಪ್ತಮಿ ಗೌಡ)  ಶಾಲೆಗೆ ಹೋಗಿ ಕಾಡಿನ ಸಂರಕ್ಷಣೆ ಜವಾಬ್ದಾರಿಯೊಂದಿಗೆ ಪ್ರಿಯತಮನ ಹಿತದ ತೊಳಲಾಟ ಪಾತ್ರವನ್ನು ತುಂಬಾ ಚೆನ್ನಾಗಿ ನಿಭಾಯಿಸಿದ್ದಾರೆ; ಶಿವ ಮತ್ತು ಅವನ ಮಿತ್ರರ ಗುಂಪಿನ ಹಾಸ್ಯ ಸನ್ನಿವೇಶಗಳೊಂದಿಗೆ ಕಾಡು ನಾಡು ಜೊತೆ ಸಹ ಜೀವನದ ಕಥಾ ವಸ್ತುವನ್ನು ಅಮೋಘವಾಗಿ ತೆರೆ ಮೇಲೆ ತಂದಿದ್ದಾರೆ. ಅಜನೀಶ್ ಲೋಕನಾಥ್ ಅವರ ಸಾಹಿತ್ಯ, ಸಂಗೀತ ಸಂಯೋಜನೆ ಮತ್ತು ಹಿಮ್ಮೇಳ ಶ್ಲಾಘನೀಯ ! ವರಾಹ ರೂಪಂ, ಸಿಂಗಾರ ಸಿರಿಯೆ ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡಿದೆ. ಅರವಿಂದ್ ಕಶ್ಯಪ್ ಅವರ ಉತ್ತಮ ಛಾಯಾಗ್ರಹಣ ಹಾಲಿವುಡ್ ಚಿತ್ರಗಳಿಗೆ ಹೋಲಿಸಬಹುದು. ಒಟ್ಟಿನಲ್ಲಿ ಕಾಂತಾರ ದೊಡ್ಡ ಪರದೆಯಲ್ಲೇ ಹಿಮ್ಮೇಳದೊಂದಿಗೆ ಅನುಭವಿಸಲೇ ಬೇಕಾದ ಚಮತ್ಕಾರ ಎನ್ನುವುದೇ ಸರಿ.



ಕಾಂತಾರ ಚಿತ್ರ ರಿಷಬ್ ಶೆಟ್ಟಿ ಯವರ ಇಷ್ಟದಂತೆ ಕನ್ನಡ ಚಿತ್ರವಾಗಿ ಕರ್ನಾಟಕವಲ್ಲದೇ ಭಾರತ, ವಿಶ್ವದಾದ್ಯಂತ ಬಿಡುಗಡೆಯಾಯಿತು.  ಮೊದಲ ದಿನದಿಂದಲೇ ರಸಿಕರು ಚಿತ್ರಮಂದಿರ ತುಂಬಿ; ಚಿತ್ರ ನೋಡಿ ಪ್ರತಿಯೊಬ್ಬರು ಮಿತ್ರರನ್ನು ನೋಡಲೇ ಬೇಕಾದ ಚಿತ್ರ ಎಂದು ಮಾತು ಕಾಡ್ಗಿಚ್ಚಾಗಿ ಹರಡಿತು, ವಿಶ್ವದಾದ್ಯಂತ ಬನ್ನಿ ನಮ್ಮ ಕನ್ನಡ ಚಿತ್ರ ತೋರಿಸ್ತೇನೆ ಎಂದು ಹೆಮ್ಮೆಯಿಂದ

ತಮ್ಮ ಮಿತ್ರರನ್ನು ಕರೆದುಕೊಂಡು ತೋರಿಸಿ ಸಂತೋಷಪಟ್ಟರು. ಹೀಗೆ ಶುರುವಾದ ಕಾಂತಾರ ಚಿತ್ರದ ಬಾಕ್ಸ್ ಆಫೀಸ್ ಓಟ ೫೦ ದಿನದ ನಂತರವೂ ನಾಗಾಲೋಟ ಮುಂದುವರೆದಿದೆ, ಕಾಂತಾರ ೨೦೨೨ರ ದೊಡ್ಡ ವೈರಲ್ ಆಗಿ ಹಿಟ್ ಆದ ಚಿತ್ರ ಎಂದರೆ ತಪ್ಪಾಗಲಾರದು. ೩೦ ಸೆಪ್ಟೆಂಬರ್ ೨೦೨೨ರಂದು ಕನ್ನಡದಲ್ಲಿ ಮಾತ್ರ ಬಿಡುಗಡೆಯಾದ ಕಾಂತಾರ ಶೀಘ್ರವೇ ಭಾರತದಾದ್ಯಂತ ಹೆಚ್ಚು ಬೇಡಿಕೆ ಬಂದು ತೆಲುಗು , ತಮಿಳು, ಮಲಯಾಳಂ ಮತ್ತು ಹಿಂದಿ ಭಾಷೆಗಳಲ್ಲಿ ೨ ವಾರದ ನಂತರ ಬಿಡುಗಡೆ ಕಂಡಿತು, ಎಲ್ಲಾ ಭಾಷೆ ಪ್ರೇಕ್ಷಕರು ಬಹಳ ಪ್ರೀತಿಯಿಂದ ನೋಡಿ ಆನಂದ ಪಟ್ಟರು, ಎಲ್ಲಾ ಭಾಷೆಗಳಲ್ಲೂ ಗಲ್ಲಾ ಪೆಟ್ಟಿಗೆಗಳ ದಾಖಲೆ ಕಾಂತಾರ ಬರೆಯಿತು !

**ಕಾಂತಾರ ಚಿತ್ರದ ಬಗ್ಗೆ ಕುತೂಹಲಕಾರಿಯಾದ ಕೆಲವು ಮಾಹಿತಿಗಳನ್ನು ನಿಮ್ಮ ಮುಂದೆ ಇಡುತ್ತೇನೆ...**

- ಕಾಂತಾರ - ಒಂದು ದಂತ ಕಥೆ ಚಿತ್ರದ ಹೆಸರನ್ನು ಸೂಚಿಸದವರು ರಕ್ಷಿತ್ ಶೆಟ್ಟಿ; ಕಾಂತಾರ' ದ ಅರ್ಥ ಮಾಯಾ ಕಾಡು - A Mysterious Forest; ವರಾಹ ರೂಪಂ ಹಾಡಿನ ಚಿತ್ರೀಕರಣಕ್ಕೆ ರಾಜ್ ಬಿ ಶೆಟ್ಟಿ ಅವರು ನೆರವಾಗಿದ್ದರು
- ರಿಷಬ್ ಶೆಟ್ಟಿ ಅವರು ಧರ್ಮಸ್ಥಳ ಮಂಜುನಾಥನ ದರ್ಶನ ಪಡೆದು, ದೈವ ಅಣ್ಣಪ್ಪ ಸ್ವಾಮೀ ಆಶೀರ್ವಾದದೊಡನೆ, ಧರ್ಮಾಧಿಕಾರಿ ವೀರೇಂದ್ರ ಅವರ ಆಶೀರ್ವಚನದೊಂದಿಗೆ ಕಾಂತಾರ ಚಿತ್ರ ಬಿಡುಗಡೆಗೆ ಸಿದ್ಧರಾದರು
- ಕಾಂತಾರ ಬಾಕ್ಸ್ ಆಫೀಸ್ ನಲ್ಲಿ ಅದ್ವಿತೀಯವಾಗಿ ಓಡುತ್ತಲೇ ಇದೆ; ಹಲವು ದಾಖಲೆಗಳನ್ನೂ ದಾಖಲಿಸಿದೆ, ಕಾಂತಾರ ತುಳು ಸೇರಿ ಇನ್ನೂ ಹಲವು ಭಾಷೆಗಳಲ್ಲಿ ಸಿದ್ಧ ವಾಗುತ್ತಿದೆ




- ಅಮೆರಿಕಾದಲ್ಲಿ ೫೦ದಿನದ ಮೇಲೆ ಓಡಿ, ೨ ಮಿಲಿಯನ್ ಡಾಲರ್ ಗಿಂತ ಹೆಚ್ಚು ವಹಿವಾಟು ಮಾಡಿದ ೨ನೇ ಚಿತ್ರ ವಾಗಿದೆ, ಕರ್ನಾಟಕದಲ್ಲಿ ೧ ಕೋಟಿಗಿಂತ ಹೆಚ್ಚು ಮಂದಿ ಕಾಂತಾರ ಚಿತ್ರವನ್ನು ವೀಕ್ಷಿಸಿದ್ದಾರೆ;
- ಮುಂಬೈನ ಮರಾಠ ಮಂದಿರದಲ್ಲಿ ಮೊದಲನೇ ಭಾರಿ ಕನ್ನಡ ಚಿತ್ರ ಬಿಡುಗಡೆ ಮಾಡಾಲಾಗಿದ್ದು ಅತಿ ಹೆಚ್ಚು ಹೌಸ್ ಫುಲ್ ಪ್ರದರ್ಶನ ಕಂಡ ಏಕೈಕ ಕನ್ನಡ ಚಿತ್ರ - ಕಾಂತಾರ; ಈಗ ಮರಾಠ ಮಂದಿರದಲ್ಲೇ ಕಾಂತಾರ-ಹಿಂದಿ ಯಶಸ್ವಿಯಾಗಿ ಓಡುತ್ತಿದೆ
- ಈ OTT ಯುಗದಲ್ಲಿ ೫೦ನೇ ದಿನ ಪ್ರದರ್ಶನದ ನಂತರವೂ ೧೦೦೦ಕ್ಕೂ ಹೆಚ್ಚು ಚಿತ್ರ ಮಂದಿರಗಳಲ್ಲಿ ಪ್ರದರ್ಶನ ಕಾಣುತ್ತಿರುವ ಕಾಂತಾರ ೪೦೦ ಕೋಟಿ ರೂಪಾಯಿ ಕಲೆಕ್ಷನ್ ಅತ್ತ ದಾಪುಗಾಲು ಇಡುತ್ತಿದೆ
- ಕಾಂತಾರ ದಕ್ಷಿಣ ಭಾರತ ಭಾಷೆಗಳಲ್ಲಿ ನವೆಂಬರ್ ೨೪ರಂದು ಅಮೆಜಾನ್ ಪ್ರೈಮ್ ನಲ್ಲಿ ಪ್ರೀಮಿಯರ್ ಕಾಣಲಿದೆ (ಅಮೆಜಾನ್ ದಾಖಲೆ ಮೊತ್ತಕ್ಕೆ ಕೊಂಡಿದೆ ) ಕಾಂತಾರ ಹಿಂದಿ ಇನ್ನು ೩೦೦ಕ್ಕೂ ಹೆಚ್ಚು ಚಿತ್ರ ಮಂದಿರದಲ್ಲಿ ಓಡುತ್ತಿದೆ ಹಾಗಾಗಿ OTT ಯಲ್ಲಿ ನಂತರ ಬಿಡುಗಡೆ
- ಪ್ರಚಾರಕ್ಕಾಗಿ ರಿಷಬ್ ಶೆಟ್ಟಿ ಮತ್ತು ಸಪ್ತಮಿ ಗೌಡ ಇಂಟರ್ವ್ಯೂ ನೀಡುತ್ತಾ ಹಲವಾರು ಭಾಷೆಗಳಲ್ಲಿ ಮಾತಾಡಿ ; ನ್ಯಾಷನಲ್ ಚಾನೆಲ್ ಗಳಲ್ಲಿ ಕನ್ನಡಲ್ಲೂ ಕೂಡ ಮಾತಾಡಿ, ಮುಂದೆ ಕನ್ನಡ ಚಿತ್ರಗಳನ್ನೇ ಮಾಡುತ್ತೇನೆ ಎಂದು ಹೇಳಿ ಕನ್ನಡಿಗರಿಗೆ ಖುಷಿ ಕೊಟ್ಟಿದ್ದಾರೆ
- ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಬೆಂಗಳೂರಿನ ಬಂಡವಾಳ ಹೂಡಿಕೆದಾರರ ಸಮಾವೇಷದಲ್ಲಿ ಮಾತಾಡಿ ಕಡಿಮೆ ಬಜೆಟ್ಟಿನ (೧೬ ಕೋಟಿ ) ಕಾಂತಾರ ೩೫೦ಕ್ಕೊ ಹೆಚ್ಚಿಗೆ ಗಳಿಸುವ ಗುಟ್ಟು ತಿಳಿಯಲು ಕರ್ನಾಟಕದಲ್ಲಿ ಉದ್ಯಮಿಗಳು ಹೂಡಿಕೆ ಮಾಡಲು ಪ್ರೇರಣೆ ತಂದಿದೆ ಎಂದು ವಿಶ್ಲೇಷಿಸಿದರು

**ಗಂಧದ ಗುಡಿ - GG2 - Journey of Gandhada Gudi !**

ಚಿರ ನಗುವಿನ ಪುನೀತ ರಾಜಕುಮಾರನ ಒಂದು ವರ್ಷದ ಸ್ಮರಣೆ ಸಮಯಕ್ಕೆ ಅವರ ಆತ್ಮೀಯ ಪ್ರಾಜೆಕ್ಟ್ - ಗಂಧದ ಗುಡಿ ಚಿತ್ರ ಅಕ್ಟೋಬರ್ ೨೯ರಂದು




ಎಲ್ಲಾ ಕಡೆಯಂತೆ ಅಮೆರಿಕಾದಲ್ಲಿ ಕೂಡ ಬಿಡುಗಡೆಗೆ ಸಿದ್ಧವಾಗಿತ್ತು. ನ್ಯೂ ಜರ್ಸಿ ಪುನೀತ್ ರಾಜ ಕುಮಾರ ಅಭಿಮಾನಿಗಳು ಒಂದು ವರುಷದ ಸವಿ ನೆನಪಿನ ಕಾರ್ಯಕ್ರಮ ಹಮ್ಮಿ ಕೊಂಡೆವು, ನ್ಯೂ ಜರ್ಸಿಯ ರೀಗಲ್ ನಾರ್ಥ್ ಬ್ರುನ್ಸ್ವಿಕ್ ಸಿನೆಮಾ ಒಳಾಂಗಣದಲ್ಲೇ ವೇದಿಕೆ ಸಿದ್ಧವಾಯಿತು. ಹಿರಿಯರು, ಕಿರಿಯರೆಲ್ಲರೂ ಸೇರಿ ಅವರಿಗೆ ನುಡಿ ನಮನ ಸಲ್ಲಿಸಿ ಪುನೀತರ ಅಚ್ಚು ಮೆಚ್ಚಿನ ಸಿಹಿ ತಿನಿಸು 'ಬಾದುಷಾ' ಹಂಚಿ ಎಲ್ಲರೂ ಪುನೀತರ ಚಿತ್ರ ಪಟ ದೊಂದಿಗೆ ಪುನೀತ್ ಜೈ ಹೇಳಿ, ಫೋಟೋ ಕ್ಲಿಕ್ಕಿಸಿ, ಗಂಧದ ಗುಡಿಯ ನೋಡಲು ಹೆಜ್ಜೆ ಹಾಕಿದೆವು.

ಅಮೋಘವರ್ಷ'ರ ನೇತೃತ್ವದಲ್ಲಿ ನಿಜವಾಗಲೂ ಗಂಧದ ಗುಡಿ - ೨೦೨೨ ಒಂದು ಸುಮಧುರ ಅನುಭವ,ತುಂಬು ಹೃದಯದ ಪುನೀತ ಕರ್ನಾಟಕದ ನಿಸರ್ಗ ಸವಿಯುತ್ತಾ, ಕಾಡಿನಲ್ಲಿ ಆನೆ, ಹುಲಿಗಳನ್ನ ಅರಸುತ್ತಾ ಬಂಡೀಪುರ, ಬಿಳಿಗಿರಿ ರಂಗನ ಬೆಟ್ಟಗಳ ಸುತ್ತುತ್ತಾ ರಾಜಣ್ಣ'ರ ಹುಟ್ಟೂರು ಗಾಜನೂರು ಓಡಾಡಿ ಮುಂದೆ ನಾಗರ ಹೊಳೆ ತೆರಳುವಾಗ ವನ, ವನ್ಯ ಜೀವಿಗಳ ಜೊತೆ ಬಾಳ್ವಿಕೆಯ ಸಂದೇಶ ಸಾರುತ್ತಾರೆ. ಕರ್ನಾಟಕದ ಕರಾವಳಿ, ಸುಂದರ ಕಡಲು ತೀರಗಳು, ನದಿಗಳು ಮತ್ತು ನೇತ್ರಾಣಿ ದ್ವೀಪಲೋಕ ನೋಡುತ್ತಾ ಪ್ಲಾಸ್ಟಿಕ್ ಮಿತಬಳಕೆ ಹಾಗು ಸಂರಕ್ಷಣೆಯ ಸಂದೇಶ ನೀಡುತ್ತಾರೆ. ಮಲೆನಾಡು, ವಿಜಯನಗರದಲ್ಲಿ ಕರಡಿ ಅರಸುತ್ತಾ ಉತ್ತರ ಕರ್ನಾಟಕದ ವಿಶಾಲ ನದಿ ಕಾಳಿ'ಯಲ್ಲಿ ಮಿಂದು, ಈಜಿ, ನಕ್ಕು ನಲಿದು ಹಳ್ಳಿ ಜನರ ಜೊತೆ ಬೆರೆತು ಕಾಳಿ



ನದಿಯ ಉದ್ಭವ ಸ್ಥಳದಲ್ಲಿ ಪೂಜೆ ಸಲ್ಲಿಸುತ್ತಾ ವಿಶ್ವ ಮಾನವನ ಸಂದೇಶ ಪುನೀತ ಸಾರುತ್ತಾರೆ. ಇಡೀ ಚಿತ್ರದಲ್ಲಿ ಮಾತುಗಳು ಕಡಿಮೆ ಇದ್ದರೂ ಅಜನೀಶ್ ಲೋಕನಾಥ್ ಅವರ ಅಮೋಘ ಸಂಗೀತ, ಅರ್ಥವತ್ತಾದ ಸುಶ್ರಾವ್ಯ ಹಾಡುಗಳು ಹಾಗು ಸಂಗೀತ ಹಿಮ್ಮೇಳ ಚಿತ್ರದ ಉದ್ದಕ್ಕೂ ಚಮತ್ಕಾರಿಯಾಗಿ ಜೊತೆ ಕೊಟ್ಟಿದೆ ಇದೇ ಕನ್ನಡ ರಾಜ್ಯೋತ್ಸವದಂದು ೨೦೨೨ ಕರ್ನಾಟಕ ರತ್ನ ಎಂದು ಪುನೀತ ರಾಜ ಕುಮಾರ್'ಗೆ ಕರ್ನಾಟಕ ಸರ್ಕಾರ ಪುರಸ್ಕರಿಸಿದೆ, ಕರ್ನಾಟಕದಾದ್ಯಂತ




ಶಾಲೆ ಮಕ್ಕಳಿಗೆ ಟ್ಯಾಕ್ಸ್ ರಹಿತ ಪ್ರದರ್ಶನಕ್ಕೆ ಅವಕಾಶ ಮಾಡಿ ಕೊಡಲಾಗುತ್ತಿದೆ, ವನ್ಯ ಸಂರಕ್ಷಣೆ ಮತ್ತು ಸಹಬಾಳ್ವೆಯ ವಿಶ್ವ ಮಾನವ ಸಂದೇಶ ಈ ಡಾಕ್ಯೂ-ಡ್ರಾಮ, ಜರ್ನಿ ಒಫ್ ಗಂಧದ ಗುಡಿ - ಜಿ.ಜಿ 2 ಚಿತ್ರದಲ್ಲಿ ಬಹು ಸೊಗಸಾಗಿ ಮೂಡಿ ಬಂದಿದೆ. ನಾನು ಚಿಕ್ಕವನಿದ್ದಾಗ ನೋಡಿದ ಚಿತ್ರ ೧೯೭೩ರ "ಗಂಧದ ಗುಡಿ"ಗೆ ಒಂದು ನಮನ ಎಂದು ಖಂಡಿತ ಹೇಳ ಬಹುದು. ಕರ್ನಾಟಕದ ಭವ್ಯ ಅರಣ್ಯ ಸಂಪತ್ತನ್ನು ಸುಂದರವಾಗಿ ಚಿತ್ರಿಸಿ ಕನ್ನಡ ಚಿತ್ರ ರಸಿಕರಿಗೆ ರಸದೌತಣ ಬಡಿಸಿದ್ದಾರೆ. ಗಂಧದ ಗುಡಿ - ಜಿ.ಜಿ ಬಾಕ್ಸ್ ಆಫೀಸಿನಲ್ಲಿ ಒಳ್ಳೆ ಗಳಿಕೆಯಾಗಿದೆ, ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಇನ್ನೂ ಹೆಚ್ಚು ಪಸರಿಸಲಿದೆ, OTT ರಿಲೀಸ್ ಜೊತೆ ವಿಶ್ವಕ್ಕೆ ತಲುಪಿಸುವ ಕಾರ್ಯಕ್ರಮ ನಡೆಯುತ್ತಿದೆ



# ದೀಪಾವಳಿ ಇನ್ ಮಾಯಾ ಲೋಕ

ರೋಹಿಣಿ ಅನಂತರಾಮ್, ನ್ಯೂ ಜರ್ಸಿ

ಬೆಳಕಿನ ಹಬ್ಬ ದೀಪಾವಳಿಯನ್ನು ಬೃಂದಾವನ ಪ್ರಗತಿ ತಂಡ ಈ ಬಾರಿ ವಿಭಿನ್ನವಾಗಿ ಆಚರಿಸಿತು.

ದೀಪಾವಳಿ on cruise ಎಂದು ನೋಡಿದಾಗ ಸ್ನೇಹಿತರೊಡನೆ ಹಡಗಿನಲ್ಲಿ ಕಾಲ ಕಳೆಯಬಹುದು ಎಂದು ಸಂತೋಷವಾಯಿತು.




ಆ ದಿನ ಸುಮಾರು 7ಗಂಟೆಗೆ ಹಡಗು ಹತ್ತಿದೆವು. ಹಡಗನ್ನು ದೀಪಾವಳಿ ವಿಶೇಷವೆಂದು ಪ್ಲ್ಯಾಸ್ಟಿಕ್ ಚೆಂಡುಹೂವಿನಿಂದ ಅಲಂಕರಿಸಿದ್ದರು.

ಒಂದು ಕಡೆ New York ಮತ್ತೊಂದು ಕಡೆ New Jersey ಮಧ್ಯದಲ್ಲಿ Hudson ನದಿಯ ಮೇಲೆ ಹಡಗಿನಲ್ಲಿ ಕೂತು ರಾತ್ರಿ ಜಗಜಗಿಸುವ, ಮಾಯಾ ಲೋಕದಂತಿರುವ ನಗರಗಳನ್ನು ನೋಡುತ್ತಾ ಸಾಗಿದೆವು.

ಅಂದು ನಮ್ಮ ಅದೃಷ್ಟಕ್ಕೆ ಬಹಳ ಚಳಿ ಇರಲಿಲ್ಲ. ಮೂರು ಮಹಡಿಯ ಹಡಗಿನಲ್ಲಿ ಸುಮಾರು 200ಕ್ಕೂ ಹೆಚ್ಚು ಜನ ಇದ್ದರು. ಮೊದಲ ಮಹಡಿ ದೊಡ್ಡವರಿಗೆ, ಎರಡನೆಯ ಮಹಡಿ ಮಕ್ಕಳಿಗೆಂದು ವ್ಯವಸ್ಥೆಯಾಗಿತ್ತು. ಸ್ವಲ್ಪ ಸಮಯದ ನಂತರ ಎಲ್ಲರೂ ಎಲ್ಲ ಕಡೆಗೆ ಹೋಗತೊಡಗಿದರು. ಮೂರನೇ ಮಹಡಿಯಲ್ಲಿ ನಿಂತು Titanic ತರ ಚಿತ್ರ ತೆಗೆಸಿಕೊಳ್ಳಬಹುದಿತ್ತು.

ಕೆಳಗೆ Dance floorನಲ್ಲಿ ಹಿಂದಿ ಚಿತ್ರ ಗೀತೆಗಳನ್ನು ಹಾಕಿದ್ದರು, ಬಹಳ ಮಂದಿ ಸಂತೋಷದಿಂದ ಕುಣಿಯುತ್ತಿದ್ದರು. ಅಲ್ಲಿ ನಮಗೆಲ್ಲಾ ಹೊಸದೆನಿಸುವ 360 degree photo booth ಇತ್ತು. ಅದು ಹೇಗೆಂದರೆ ನಮ್ಮನ್ನು ಒಂದು pedestal ಮೇಲೆ ನಿಲ್ಲಿಸಿ ( ಒಮ್ಮೆಗೆ 3-4 ಜನ ನಿಲ್ಲಬಹುದು) cameraವನ್ನು ನಮ್ಮ ಸುತ್ತ 360 degree ತಿರುಗಿಸುತ್ತಾರೆ. ಅದಕ್ಕೆ 360 degree photo ಎಂದು ಹೆಸರು. ಬಂದವರು ಸಾಲುಸಾಲಾಗಿ ನಿಂತು ಚಿತ್ರವನ್ನು ತೆಗೆಸಿಕೊಂಡರು.





ಮಕ್ಕಳ ಮಹಡಿಯಲ್ಲಿ balloon ಗಳನ್ನು ಊದಿ ಬೇರೆ ಬೇರೆ ಆಕಾರಗಳನ್ನು ಮಾಡಿ ಕೊಡುತ್ತಿದ್ದರು ಮತ್ತು face painting ಸಹ ಮಾಡುತ್ತಿದ್ದರು. ಮೇಲೆ, ಕೆಳಗೆ ಎಲ್ಲ ಸ್ನೇಹಿತರನ್ನು ಮಾತನಾಡಿಸಿ ಫೋಟೊ ತೆಗೆಸಿಕೊಳ್ಳುವ ಹೊತ್ತಿಗೆ ಊಟದ ಸಾಲು ಶುರುವಾಯಿತು. ಮಕ್ಕಳಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಇತ್ತು. ಅವರಿಗೆ pizza, pasta ಇತ್ಯಾದಿಗಳು. ದೊಡ್ಡವರಿಗೆ ಭಾರತೀಯ ಶೈಲಿಯ ಊಟ.



ಊಟವನ್ನು ತೆಗೆದುಕೊಂಡು ಬಂದು ಕೂತು ಊಟ ಮಾಡುವಾಗ ಸರಿಯಾಗಿ ನಮ್ಮ ಹಡಗು ವಿಶ್ವ ವಿಖ್ಯಾತ Statue of Liberty ಬಳಿಗೆ ಬಂದಿತು. ಹಡಗು ನಿಧಾನವಾಗಿ ಹೋಗುತ್ತಿದ್ದ ಕಾರಣ ಆರಾಮವಾಗಿ ಕೂತು ಕಿಟಕಿಯಿಂದ Lady Liberty ಯನ್ನು ನೋಡಿದೆವು. ಮನಸ್ಸಿಗೆ ಮುದ ಉಂಟಾಯಿತು. ಊಟ ಮುಗಿಸುವ ಹೊತ್ತಿಗೆ ಹಡಗು ದಡ ಸೇರಿತ್ತು. ಎಲ್ಲ ಸ್ನೇಹಿತರಿಗೂ, ಆಯೋಜಕರಿಗೂ ಅಭಿನಂದನೆ ಹೇಳಿ ಹೊರಟೆವು. ಚಿಕ್ಕದಾಗಿ, ಚೊಕ್ಕವಾಗಿ ಕಳೆದ ಸಂಜೆ ಸಾರ್ಥಕವೆನಿಸಿತು.





# ಶ್ರೀ ಜಗನ್ನಾಥದಾಸರು

ವೀಣಾ ರಾಘವ್

ಹರಿದಾಸರು ಕನ್ನಡದ ಭಕ್ತಿ ಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಅದರಲ್ಲಿ ದಾಸ ಚತುಷ್ಟಯರೆಂದೇ ಪ್ರಸಿದ್ಧರಾದವರು - ಪುರಂದರದಾಸರು, ವಿಜಯದಾಸರು, ಗೋಪಾಲದಾಸರು ಹಾಗೂ ನಾಲ್ಕನೆಯವರು ಜಗನ್ನಾಥದಾಸರು. ವಿಶೇಷವೆಂದರೆ ಮೊದಲ ಮೂವರ ದಾಸರ ಅನುಗ್ರಹಕ್ಕೆ ಪಾತ್ರರಾದವರು ಜಗನ್ನಾಥದಾಸರು.

ಜಗನ್ನಾಥದಾಸರ ಪೂರ್ವಾಶ್ರಮದ ಹೆಸರು ಶ್ರೀನಿವಾಸಾಚಾರ್ಯರು ಎಂದಾಗಿತ್ತು. ಶ್ರೀನಿವಾಸಾಚಾರ್ಯರು ಜಗನ್ನಾಥದಾಸರಾಗಿದ್ದೇ ಒಂದು ರೋಚಕ ಕಥೆ. ರಾಯಚೂರು ಜಿಲ್ಲೆ ಮಾನವಿ ತಾಲೂಕು ಬ್ಯಾಗವಟ ಗ್ರಾಮದಲ್ಲಿ ಶ್ರೀ ನರಸಿಂಹದಾಸರು ಹಾಗೂ ಲಕ್ಷ್ಮಿಬಾಯಿ ದಂಪತಿಗಳಿಗೆ ತಿರುಪತಿ ಶ್ರೀನಿವಾಸನ ಅನುಗ್ರಹದಿಂದ ಒಂದು ಪುತ್ರರತ್ನ ಜನನವಾಯಿತು. ಆ ಮಗುವಿಗೆ ಶ್ರೀನಿವಾಸಾಚಾರ್ಯ ಎಂದು ನಾಮಕರಣ ಮಾಡುತ್ತಾರೆ. ಶ್ರೀನಿವಾಸಾಚಾರ್ಯರು ಬೆಳೆದಂತೆ ಅವರನ್ನು ಮಂತ್ರಾಲಯ ಮಠದ ಪಾಠಶಾಲೆಗೆ ಸೇರಿಸಲಾಯಿತು. ಅಲ್ಲಿ ವೇದಶಾಸ್ತ್ರ ಅಧ್ಯಯನ ಮಾಡಿ ಶ್ರೀನಿವಾಸಾಚಾರ್ಯರು ಅಪಾರ ಪಾಂಡಿತ್ಯವನ್ನು ಪಡೆಯುತ್ತಾರೆ. ಶ್ರೀನಿವಾಸಾಚಾರ್ಯರು ವಿವಾಹದ ನಂತರ ಗುರುಗಳ ಆಣತಿಯಂತೆ ಮಾನವಿಯಲ್ಲಿ ನೆಲೆಸಿ ಪಾಠ ಪ್ರವಚನ ಮಾಡಲು ಪ್ರಾರಂಭಿಸುತ್ತಾರೆ.

ಒಂದು ದಿನ ವಿಜಯದಾಸರು ಮಾನವಿಗೆ ಬಂದು ಭಜನೆ ಮಾಡುತ್ತಾ ಗ್ರಾಮಪ್ರದಕ್ಷಿಣೆ ಮಾಡುತ್ತಿರುತ್ತಾರೆ. ಹಾಗೆಯೇ ಆಂಜನೇಯ ದೇವಸ್ಥಾನದಲ್ಲಿ ತೀರ್ಥಪ್ರಸಾದವನ್ನೂ ಏರ್ಪಡಿಸಿರುತ್ತಾರೆ. ತೀರ್ಥಪ್ರಸಾದಕ್ಕೆ ಊರಿನ ವಿದ್ವಾಂಸರಾದ ಶ್ರೀನಿವಾಸಾಚಾರ್ಯರಿಗೂ ವಿಜಯದಾಸರು ಆಮಂತ್ರಣವನ್ನು ಖುದ್ದಾಗಿ ಕೊಟ್ಟಿರುತ್ತಾರೆ. ಶ್ರೀನಿವಾಸಾಚಾರ್ಯರು ದೊಡ್ಡ ಸಂಸ್ಕೃತ ಪಂಡಿತರಾಗಿದ್ದರಿಂದ ಕನ್ನಡದ ದಾಸರ ಪದಗಳನ್ನು ಹೇಳುವ ದಾಸರೆಂದರೆ ಅವರಿಗೆ ಏನೋ ಕೀಳರಿಮೆ. ಹಾಗಾಗಿ ತೀರ್ಥಪ್ರಸಾದಕ್ಕೆ ಹೋಗಬಾರದೆಂದು ನಿರ್ಧರಿಸುತ್ತಾರೆ. ದೇವರ ಪೂಜೆ ಮುಗಿದರೂ ಶ್ರೀನಿವಾಸಾಚಾರ್ಯರು ಬರದಿದ್ದನ್ನು ನೋಡಿ, ವಿಜಯದಾಸರು ತಮ್ಮ ಶಿಷ್ಯರನ್ನು ಅವರ ಮನೆಗೆ ಕರೆಯಲು ಕಳುಹಿಸುತ್ತಾರೆ. ಶ್ರೀನಿವಾಸಾಚಾರ್ಯರು ಆ ಶಿಷ್ಯರಿಗೆ ನನಗೆ ಸ್ವಲ್ಪ ಹೊಟ್ಟೆನೋವು, ಹಾಗಾಗಿ ಮನೆಯಲ್ಲೇ ಊಟಮಾಡಿದುದಾಗಿ ಹೇಳುತ್ತಾರೆ. ವಿಜಯದಾಸರು ದೇವರ ಇಚ್ಛೆ ಎಂದು ವಿಧಿಯಿಲ್ಲದೆ ಶ್ರೀನಿವಾಸಾಚಾರ್ಯರಿಲ್ಲದೆ ತೀರ್ಥಪ್ರಸಾದವನ್ನು ಹಂಚುತ್ತಾರೆ. ಮರುದಿನ ಶ್ರೀನಿವಾಸಾಚಾರ್ಯರಿಗೆ ನಿಜವಾಗಿ ಹೊಟ್ಟೆನೋವು ಪ್ರಾರಂಭವಾಗುತ್ತದೆ. ಎಷ್ಟು ಮದ್ದು ಮಾಡಿದರೂ ಪ್ರಯೋಜನವಾಗುವುದಿಲ್ಲ. ಯಾವ ವೈದ್ಯರಿಗೂ ಗುಣಪಡಿಸಲಾಗುವುದಿಲ್ಲ. ಅವರ ದೇಹ ತುಂಬಾ ಕೃಶವಾಗತೊಡಗುತ್ತದೆ. ಏನೂ ಮಾಡಲು ತೋಚದೆ ಮಂತ್ರಾಲಯ ಪ್ರಭುಗಳಾದ ಶ್ರೀ ರಾಘವೇಂದ್ರ ಸ್ವಾಮಿಗಳಲ್ಲಿ ಮೊರೆಹೋಗುತ್ತಾರೆ. ತಮ್ಮ ಕೈಲಾದ ಸೇವೆ ಮಾಡತೊಡಗುತ್ತಾರೆ. ಶ್ರೀ ರಾಘವೇಂದ್ರ ಸ್ವಾಮಿಗಳು ಸ್ವಪ್ನದಲ್ಲಿ ಶ್ರೀನಿವಾಸಾಚಾರ್ಯರಿಗೆ ಕಾಣಿಸಿಕೊಂಡು, ಯಾರಲ್ಲಿ ತಪ್ಪಾಗಿ ನಡೆದುಕೊಂಡಿರುವೆಯೋ ಅವರಲ್ಲಿ ಕ್ಷಮೆ ಕೇಳು ಎಂದು ವಿಜಯದಾಸರ ಬಳಿಗೆ ಹೋಗಲು ಸೂಚಿಸುತ್ತಾರೆ.

ಶ್ರೀನಿವಾಸಾಚಾರ್ಯರು ವಿಜಯದಾಸರನ್ನು ಭೇಟಿ ಮಾಡಿ ಕ್ಷಮೆ ಕೇಳಿದಾಗ, ವಿಜಯದಾಸರು ಪ್ರೀತಿಯಿಂದ "ನೀವು ದೊಡ್ಡ ಪಂಡಿತರು. ನಿಮ್ಮಿಂದ ಅನೇಕ ಜನಕಲ್ಯಾಣ ಕಾರ್ಯಗಳು ನಡೆಯಬೇಕಾಗಿದೆ, ಮಹತ್ಕಾರ್ಯಗಳಾಗಬೇಕಾಗಿದೆ. ನೀವು ನಮ್ಮ ಶಿಷ್ಯರಾದ ಗೋಪಾಲದಾಸರ ಬಳಿ ಹೋಗಿ" ಎಂದು ಕಳುಹಿಸುತ್ತಾರೆ. ವಿಜಯದಾಸರಿಗೆ, ಅವರ ದಿವ್ಯದೃಷ್ಟಿಯಿಂದ ಶ್ರೀನಿವಾಸಾಚಾರ್ಯರು ಅಲ್ಪಾಯುಷಿ ಎಂಬ ಅರಿವಿರುತ್ತದೆ.



ವಿಜಯದಾಸರು, ಗೋಪಾಲದಾಸರಿಗೆ ಅವರ ಆಯುಷ್ಯದ ನಲ್ವತ್ತು ವರುಷಗಳನ್ನು ಶ್ರೀನಿವಾಸಾಚಾರ್ಯರಿಗೆ ಧಾರೆಯೆರೆಯಲು ಅಪ್ಪಣೆ ಕೊಡುತ್ತಾರೆ. ಗೋಪಾಲದಾಸರು ಜೋಳದ ಭಕ್ಕರಿಯನ್ನು ಮಂತ್ರಿಸಿ ಶ್ರೀನಿವಾಸಾಚಾರ್ಯರಿಗೆ ಅದನ್ನು ಕೊಟ್ಟು ತಮ್ಮ ಆಯುಷ್ಯದ ನಲ್ವತ್ತು ವರುಷಗಳನ್ನು ಅದರ ಮೂಲಕ ಧಾರೆಯೆರೆಯುತ್ತಾರೆ. ಮುಂದೆ ಶ್ರೀನಿವಾಸಾಚಾರ್ಯರು, ಗೋಪಾಲದಾಸರ ಆದೇಶದ ಮೇರೆಗೆ ಪಂಡರಾಪುರಕ್ಕೆ ತೆರಳಿ ಅಲ್ಲಿ ಚಂದ್ರಭಾಗಾನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಅವರ ಕೈಗೆ ಒಂದು ಕಲ್ಲು ತೇಲಿಕೊಂಡು ಬಂದು ಸೇರುತ್ತದೆ. ಆ ಕಲ್ಲಿನಲ್ಲಿ "ಜಗನ್ನಾಥ ವಿಠ್ಠಲ" ಎಂದು ಬರೆದಿರುತ್ತದೆ. ವಿಠ್ಠಲನ ಆ ಅಂಕಿತವನ್ನು ನೋಡಿ ಕಲ್ಲನ್ನು ಕಣ್ಣಿಗೆ ಒತ್ತಿಕೊಂಡು, ಭಗವಂತನನ್ನು ಕೊಂಡಾಡುತ್ತಾರೆ. ಅಂದಿನಿಂದ

ಅದನ್ನೇ ಅಂಕಿತವನ್ನಾಗಿ ಮಾಡಿಕೊಂಡು ಶ್ರೀನಿವಾಸಾಚಾರ್ಯರು ಜಗನ್ನಾಥದಾಸರೆಂದು ಪ್ರಸಿದ್ಧಿ ಪಡೆಯುತ್ತಾರೆ. ಮುಂದೆ ಜಗನ್ನಾಥದಾಸರು ಹಳೆಗನ್ನಡದಲ್ಲಿ ಕೃತಿಗಳನ್ನು ರಚಿಸಲಾರಂಭಿಸುತ್ತಾರೆ.

ಜಗನ್ನಾಥರ ಮೇರುಕೃತಿ "ಶ್ರೀಹರಿಕಥಾಮೃತ ಸಾರ". ಈ ಕೃತಿಯನ್ನು ತಮ್ಮ ಅರವತ್ತೆಂಟನೇ ವಯಸ್ಸಿನಲ್ಲಿ ಜಗನ್ನಾಥದಾಸರು ರಚಿಸಿದರು. ಈ ಕೃತಿ ಭಾಮಿನಿ ಷಟ್ಪದಿಯಲ್ಲಿ, ಛಂಧೋಬದ್ಧವಾಗಿ, ಮೂವತ್ತೆರಡು ಸಂಧಿಗಳಲ್ಲಿ ವಿಶಿಷ್ಟರೀತಿಯಲ್ಲಿ ರಚಿಸಲಾಗಿದೆ. ಈ ಸಂಧಿಗಳು ಮಂಗಳಾಚರಣ ಸಂಧಿಯಿಂದ ಪ್ರಾರಂಭವಾಗಿ ದೇವತಾ ತಾರತಮ್ಯ ಅಥವಾ ಕಕ್ಷಾ ತಾರತಮ್ಯ ಸಂಧಿಯಿಂದ ಮುಕ್ತಾಯವಾಗುತ್ತವೆ. ಈ ಸಂಧಿಗಳಲ್ಲಿ ಕೆಲವು ವಿಶೇಷ ಸಂಧಿಗಳೆಂದರೆ ಕರುಣಾಸಂಧಿ, ಪಿತೃಗಣಸಂಧಿ, ಶ್ವಾಸಸಂಧಿ, ವಿಘ್ನೇಶ್ವರ ಸ್ತೋತ್ರ ಸಂಧಿ, ಸಕಲದುರಿತನಿವಾರಣಾ ಸಂಧಿಗಳು. ಪ್ರತಿ ಸಂಧಿಗಳೂ ಪ್ರಾರಂಭವಾಗುವುದು "ಹರಿಕಥಾಮೃತಸಾರ ಗುರುಗಳ ಕರುಣದಿಂದಾ ಪನಿತುಪೇಳುವೆ, ಪರಮ ಭಗವತದ್ ಭಕ್ತರಿದನಾದರದಿ ಕೇಳುವುದು" ಎಂಬ ಸಾಲಿನಿಂದ. ಇದರರ್ಥ, ಗುರುಗಳ ಅನುಗ್ರಹದಿಂದಲೇ ಎಲ್ಲ ನಡೆಯುವುದು "ಪುಸ್ತಕದಿಂದ ಮಸ್ತಕಕ್ಕೆ ಬರುವುದಕ್ಕೆ ಗುರುವಿನ ಕರುಣೆ ಆಗಬೇಕು". ಜೀವನದಲ್ಲಿ ಮೇಲೆ ಬರಲು ಗುರುವಿನ ಅನುಗ್ರಹದ ಅಗತ್ಯದ ಬಗ್ಗೆ ತಿಳಿಸಿದ್ದಾರೆ.



ಉದಾಹರಣೆಯಾಗಿ ಇಲ್ಲಿ ಮೂರು ಸಂಧಿಗಳ ಮಹತ್ವದ ಬಗ್ಗೆ ತಿಳಿದುಕೊಳ್ಳೋಣ: ಮೊದಲನೆಯದಾದ "ಮಂಗಳಾಚರಣ ಸಂಧಿ"ಯಲ್ಲಿ ಜಗನ್ನಾಥದಾಸರು ಎಲ್ಲಾ ದೇವತೆಗಳನ್ನೂ, ಗುರುಗಳನ್ನೂ ನೆನೆದು, ನಮಸ್ಕಾರ ತಿಳಿಸಿ, ನಂತರ ಎರಡನೇ ಸಂಧಿ "ಕರುಣಾಸಂಧಿ" ಪ್ರಾರಂಭಿಸುತ್ತಾರೆ. ಈ ಸಂಧಿಯ ವಿಶೇಷತೆ ಏನೆಂದರೆ - ಮನೆಯಲ್ಲಿ ಆಪ್ತರು, ತಂದೆ-ತಾಯಿಯವರ ಮರಣ, ತುಂಬಾ ನಮಗೆ ಬೇಕಾದವರ ಅಗಲುವಿಕೆಯ ದು:ಖವನ್ನು ತಡೆಯುವ ಶಕ್ತಿಯಿಲ್ಲದಂತಹ ಪರಿಸ್ಥಿತಿಯಲ್ಲಿ ಕರುಣಾಸಂಧಿಯನ್ನು ಪಠಿಸಿದರೆ ಮನಸ್ಸಿಗೆ ಸಮಾಧಾನವಾಗುವುದು, ದು:ಖ ಕಡಿಮೆಯಾಗುವುದು ಎಂದು ಹಿರಿಯರು ಹೇಳುತ್ತಾರೆ. ಇನ್ನು "ವಿಘ್ನೇಶ್ವರ ಸ್ತೋತ್ರ" ಸಂಧಿ ಬಗ್ಗೆ ಹೇಳುವುದಾದರೆ, ಜಗನ್ನಾಥದಾಸರು "ಶ್ರೀಹರಿಕಥಾಮೃತ ಸಾರ" ದ ರಚನೆಯಲ್ಲಿ ತೊಡಗಿದಾಗ, ಇಪ್ಪತ್ತೇಳು ಸಂಧಿಗಳ ನಂತರ ಅವರ ಬರಹ ಮುಂದುವರಿಯದೇ ಹೋಯಿತಂತೆ. ವಿಚಲಿತರಾಗಿ ಅವರ ಗುರು ಗೋಪಾಲದಾಸರಲ್ಲಿ ವಿಷಯ ತಿಳಿಸಿದಾಗ, ವಿಘ್ನ ನಿವಾರಕನಾದ ಗಣಪತಿಯ ಸ್ತೋತ್ರವನ್ನು ಬರೆಯದೆ ಇರುವುದರಿಂದ ಹೀಗಾಗಿದೆ ಎಂದು ತಿಳಿದು ಇಪ್ಪತ್ತೆಂಟನೆಯ ಸಂಧಿಯನ್ನು ವಿಘ್ನೇಶ್ವರನ ಸ್ತೋತ್ರ ಸಂಧಿಯೆಂದು ಬರೆದು ಗಣೇಶನಿಗೆ ಅರ್ಪಿಸಿ ಕೃತಿಯನ್ನು ಪೂರ್ಣಗೊಳಿಸಿದರಂತೆ. ವಿಘ್ನೇಶ್ವರ ಸ್ತೋತ್ರ ಸಂಧಿಯಲ್ಲಿ ಜಗನ್ನಾಥರು ವಿಘ್ನೇಶ್ವರನ ಮಹಿಮೆಯನ್ನು ಕೊಂಡಾಡಿದ್ದಾರೆ. ಈ ಸಂಧಿಯನ್ನು ಕೇಳುವುದರಿಂದ, ಪಠಿಸುವುದರಿಂದ ಪದೇ ಪದೇ ಬರುತ್ತಿರುವ ಕಷ್ಟಗಳು, ವಿಘ್ನಗಳು ದೂರವಾಗಿ ವಿನಾಯಕನ ಅನುಗ್ರಹವಾಗುತ್ತದೆ. ಹೀಗೆ ಈ ಕೃತಿಯ ಇಪ್ಪತ್ತೆಂಟು ಸಂಧಿಗಳು ಒಂದೊಂದು ರೀತಿಯಾಗಿ ಶ್ರೀಹರಿಯ ಮಹಾತ್ಮೆಯನ್ನು ಸಾರಿವೆ. ಕನ್ನಡದಲ್ಲಿರುವ ಈ ಕೃತಿಯನ್ನು ಸುಲಲಿತವಾಗಿ ಪದ್ಯರೂಪದಲ್ಲಿ ಹೇಳಬಹುದು. ಈ ಸಂಧಿಗಳನ್ನೂ ಮತ್ತು ಅವುಗಳ ಅರ್ಥವನ್ನು ತಿಳಿದುಕೊಳ್ಳ ಬಯಸುವವರಿಗೆ ಅನೇಕ ಹಿರಿಯರು ಸರಳವಾಗಿ ಸಂಧಿಗಳನ್ನು ವಾಚಿಸಿ, ಅರ್ಥ ವಿವರಿಸಿ ಬರೆದಿರುವ ಲೇಖನಗಳು ಲಭ್ಯವಿದೆ. ಇಂತಹ ಪರಮ ಮಂಗಳಕೃತಿ "ಶ್ರೀಹರಿಕಥಾಮೃತ ಸಾರ"ವನ್ನು ನಾವುಗಳೆಲ್ಲಾ ಪಠಿಸಿ ದೇವತೆಗಳು, ಗುರುಗಳಾದ ಜಗನ್ನಾಥದಾಸರು ಮತ್ತು ಶ್ರೀಹರಿಯ ಅನುಗ್ರಹಕ್ಕೆ ಪಾತ್ರರಾಗೋಣ.



# ಅಮೆರಿಕಾದಲ್ಲಿ ಚಳಿಗಾಲದ ಅನುಭವ

ಯಶಸ್ವಿನಿ ಯಶು, ನ್ಯೂ ಜರ್ಸಿ

ಅಮೆರಿಕಾದಲ್ಲಿನ ಚಳಿಗಾಲದ ಅನುಭವ. ಅಮೆರಿಕಾದಲ್ಲಿ ಚಳಿಗಾಲದ ಅನುಭವವೇ ವಿಶಿಷ್ಟವಾದುದು, ನಮ್ಮ ತವರೂರಾದ ಕರ್ನಾಟಕವನ್ನು ಬಿಟ್ಟು ದೂರದ ಅಮೆರಿಕಾದಲ್ಲಿ ನೆಲೆಸಿರುವ ನಮಗೆ ಅಮೆರಿಕಾದ ಚಳಿ ಅದರಲ್ಲೂ ನ್ಯೂಜರ್ಸಿ/ನ್ಯೂಯಾರ್ಕ್ ಗಳಲ್ಲಿ ವಾಸಿಸುವವರಿಗೆ ಇಲ್ಲಿನ ಚಳಿಗಾಲದ ಕಷ್ಟಗಳ ಬಗ್ಗೆ ಚೆನ್ನಾಗಿ ಅರಿವಿರುತ್ತದೆ.ಇಲ್ಲಿನ ಚಳಿಗಾಲ ಸುದೀರ್ಘವಾದುದು, ಆಕ್ಟೊಬರ್ ನವೆಂಬರ್ ತಿಂಗಳಿನ ಆಸುಪಾಸಿನಲ್ಲಿ ಶುರುವಾದರೆ ಮುಂದಿನ ಏಪ್ರಿಲ್-ಮೇ ತಿಂಗಳಿನವರೆಗೂ ಇರುತ್ತದೆ, ಅಂದರೆ ಸರಿಸುಮಾರು ಏಳು ತಿಂಗಳ ಕಾಲ ಚಳಿಗಾಲವನ್ನು ಅನುಭವಿಸಬೇಕಾಗುತ್ತದೆ, ಅದರಲ್ಲೂ ಡಿಸೆಂಬರ್ ಹಾಗೂ ಜನವರಿ ತಿಂಗಳನ್ನು ಅತ್ಯಂತ ಶೀತದ ಮಾಸಗಳು ಎಂದು ಹೇಳಲಾಗುತ್ತದೆ.

ಇಲ್ಲಿಯೇ ಬಹಳ ವರ್ಷದಿಂದ ವಾಸವಿರುವವರಿಗೆ ಚಳಿಗಾಲವು ಒಗ್ಗಿರುತ್ತದೆ,ಆದರೆ ಹೊಸದಾಗಿ ಭಾರತದಿಂದ ಬಂದವರಿಗೆ (ಹಿರಿಯರಿಗೆ) ಹೊಂದಿಕೊಳ್ಳುವುದು ಕಷ್ಟಸಾಧ್ಯವೇ ಸರಿ,ಏಕೆಂದರೆ ಪ್ರತಿಬಾರಿ ಹೊರಗೆ ಹೋಗಬೇಕಾದಾಗ ಭಾರವಾದ ಜಾಕೆಟ್ ಹಾಗೂ ಬೂಟ್ಸ್ ಗಳನ್ನು ಧರಿಸಲೇಬೇಕಾಗುತ್ತದೆ, ಅದು ಹೊಸದಾಗಿ ಧರಿಸುವವರಿಗೆ ಕಿರಿಕಿರಿಯುಂಟಾಗುತ್ತದೆ, ಆದರೂ ಧರಿಸದೆ ಅನ್ಯಮಾರ್ಗವಿಲ್ಲ, ಮಹಿಳೆಯರಾದರೆ ಅದರಲ್ಲೂ ಸೀರೆ, ಚೂಡಿದಾರ್ ಹೊರತುಪಡಿಸಿ ಬೇರೆ ಉಡುಪು ಧರಿಸಿ ಅಭ್ಯಾಸವಿಲ್ಲದವರಿಗೆ ತುಂಬ ತೊಂದರೆಯಾಗುತ್ತದೆ, ಏಕೆಂದರೆ ಸೀರೆಯಂತಹ ಉಡುಪು ಇಲ್ಲಿನ ಕೊರೆಯುವ ಚಳಿಯನ್ನು ತಡೆದುಕೊಳ್ಳುನ ಸಾಮರ್ಥ್ಯವನ್ನು ಹೊಂದಿಲ್ಲ, ಜೀನ್ಸ್ ಧರಿಸಲೇಬೇಕು , ಇದು ಜೀನ್ಸ್ ಧರಿಸಿ ಅಭ್ಯಾಸವಿಲ್ಲದ ಮಹಿಳೆಯರಿಗೆ ಸಮಸ್ಯೆಯೆನಿಸುತ್ತದೆ, ಕೆಲವರಿಗೆ ಚಳಿಗಾಲವು ತೀರಾ ಒಗ್ಗದೆ ಆರೋಗ್ಯ ಸಮಸ್ಯೆಗೆ ತುತ್ತಾಗಬಹುದು .

ಚಳಿಗಾಲದಲ್ಲಿ ಡಿಸೆಂಬರ್ ಅಥವಾ ಜನವರಿ ತಿಂಗಳಲ್ಲಿ ಬೀಳುವ ಹಿಮದ ಮಳೆ ನೋಡಲು ಬಹಳ ಸೊಗಸಾಗಿರುತ್ತದೆ, ಹಿಮದೊಂದಿಗೆ ಆಡುವುದು ಒಂದು ಮೋಜಿನ ಸಂಗತಿಯೇ, ಆದರೆ ಹಿಮ ಬಿದ್ದ ನಂತರ ಮನೆಯ ಮುಂದೆ ಬಿದ್ದಿರುವ ಹಿಮದ ರಾಶಿಯನ್ನು ಸ್ವಚ್ಛಗೊಳಿಸಲೇಬೇಕು, ಮತ್ತು ಹಿಮ ಪೂರ್ತಿಯಾಗಿ ಕರಗಿಹೋಗುವವರೆಗೂ ನಡೆದಾಡುವಾಗ ಸಾಕಷ್ಟು ಜಾಗೃತರಾಗಿರಬೇಕು,ಹಿಮರಾಶಿಯಲ್ಲಿ ಬಿದ್ದು ಗಂಭೀರವಾಗಿ ಗಾಯಗೊಂಡವರ ಉದಾಹರಣೆಗಳು ಸಾಕಷ್ಟಿವೆ, ಇನ್ನೊಂದು ಬೇಸರದ ಸಂಗತಿಯೆಂದರೆ ಚಳಿಗಾಲದಲ್ಲಿ ಸಂಜೆ ನಾಲ್ಕು ಗಂಟೆಗೆಲ್ಲ ಕತ್ತಲು ಆವರಿಸಲಾಂಭಿಸುತ್ತದೆ, ಮರಗಳೆಲ್ಲ ಎಲೆಗಳುದುರಿ ಬೋಳಾಗಿ ಕಾಣಿಸುತ್ತವೆ,



ಚಳಿಗಾಲದ ನಂತರ ಬರುವ ವಸಂತಋತು ನನ್ನ ಅಚ್ಚುಮೆಚ್ಚಿನ ಕಾಲ. ಎಲೆಗಳೆಲ್ಲ ಚಿಗುರೊಡೆದು ಮತ್ತೆ ಪ್ರಕೃತಿಯೆಲ್ಲ ಕಂಗೊಳಿಸುತ್ತದೆ, ರಾತ್ರಿ ಒಂಭತ್ತು ಗಂಟೆಯಾದರೂ ಕತ್ತಲಾಗುವುದಿಲ್ಲ,ಮಕ್ಕಳು ಉದ್ಯಾನವನಗಳಲ್ಲಿ ಖುಷಿಯಿಂದ ಆಟವಾಡುತ್ತಾರೆ. ಬೇಸಿಗೆಯ ನಂತರ ಬರುವ ಶರತ್ಕಾಲದ ಋತು (Fall season ) ವಿಗೆ ಅದರದ್ದೇ ಆದ ವಿಶೇಷತೆಯಿದೆ, ಎಲೆಗಳು ಕೆಂಪು ಬಣ್ಣ ಅಥವಾ ಹಳದಿ ವರ್ಣಕ್ಕೆ ತಿರುಗಿ ಎಲೆಗಳು ಒಣಗಿ ಉದುರುವ ಪ್ರಕ್ರಿಯೆ ಶರದೃತುವಿನಲ್ಲಿ ನಡೆಯುತ್ತದೆ, ಆದರೂ ಮರಗಳೆಲ್ಲ ದೃಢವಾಗಿ ನಿಂತು ಮುಂಬರುವ ಒಳ್ಳೆಯ ದಿನಗಳಿಗಾಗಿ (ವಸಂತ ಋತುವಿಗಾಗಿ ) ತಾಳ್ಮೆಯಿಂದ ಕಾಯುತ್ತವೆ. ಒಟ್ಟಿನಲ್ಲಿ ಎಲ್ಲ ಋತುಗಳಿಗೂ ಅದರದ್ದೇ ಆದ ಪ್ರಾಮುಖ್ಯತೆಯಿದೆ ಹಾಗೂ ಹೊಂದಿಕೊಂಡು ಬಾಳುವುದು ಅನಿವಾರ್ಯವಾಗಿದೆ



# ತೀರ್ಥದಲ್ಲಿ ತುಳಸಿಯ ಮಹತ್ವ

**ಶ್ರೀವತ್ಸ ಬಲ್ಲಾಳ,** ಫಿಲಡೆಲ್ಫಿಯಾ

ಹಿರಿಯರಿಂದ ಕೇಳಿದ ಒಂದು ಕಥೆ. ಧರ್ಮಸ್ಥಳ ಕ್ಷೇತ್ರ ಹಿಂದಿನಿಂದಲೂ ಜೈನರು ನಡೆಸಿಕೊಂಡು, ಪೂಜಿಸಿಕೊಂಡು ಬಂದಂಥ ಪುಣ್ಯಕ್ಷೇತ್ರ. ಇಂದಿಗೂ ಅಲ್ಲಿನ ಹೆಗ್ಗಡೆಯವರು ಜೈನ ಮತದವರು. ನಡೆಸುತ್ತಿರುವುದು ವೈದಿಕ ಸಂಪ್ರದಾಯದಂತೆ ವಾದಿರಾಜರಿಂದ ಪುನಃ ಪ್ರತಿಷ್ಠೆಗೊಳಪಟ್ಟು ಸ್ಥಾಪನೆಗೊಂಡ ಮಂಜುನಾಥನ ದಿವ್ಯಕ್ಷೇತ್ರ. ಜಾತಿ ಮತ ಬೇಧವಿಲ್ಲದೇ ಧರ್ಮಾಚರಣೆಯನ್ನು ನಡೆಸಿಕೊಂಡು ಬರುತ್ತಿರುವ ಪುಣ್ಯಕ್ಷೇತ್ರಗಲ್ಲೊಂದು, ಧರ್ಮಸ್ಥಳ.

ಅದು ಬ್ರಿಟಿಷರ ಕಾಲ, ಆಗಷ್ಟೇ ಮೈಕ್ರೋಸ್ಕೋಪ್ ಅನ್ವೇಷಣೆಯಾಗಿ ಕಣ್ಣಿಗೂ ಕಾಣದ ಸೂಕ್ಷಾತಿಸೂಕ್ಷ್ಮ ಜೀವಿಗಳನ್ನು ಮೈಕ್ರೋಸ್ಕೋಪಿನ ಮುಖಾಂತರ ನೋಡಬಹುದಾಗಿದ್ದಂಥ ಕಾಲಾವಧಿಯ ಆರಂಭ. ಜೈನ ಸಂಪ್ರದಾಯದಲ್ಲಿ ನೀರನ್ನು ಸೋಸಿಯೇ, ಅದೂ ಏಳು ಪದರ ಬಟ್ಟೆಯ ಮೂಲಕ ನೀರನ್ನು ಇಳಿಸಿ ಅದರಲ್ಲಿರುವ ಯಾವುದೇ ಜೀವಿಯ ಅಂಶ ಕುಡಿಯುವ ನೀರಿನಲ್ಲಿ ಇರದಂತೆ ಮಾಡಿ ಸೇವಿಸುವ ಕಟ್ಟುನಿಟ್ಟಿನ ಕ್ರಮವನ್ನು ಅನುಸರಿಸುತ್ತಿದ್ದ ಕಾಲ. ಇಂದಿಗೂ ಬಹುಶಃ ಅನೇಕ ಜೈನರು ಆ ಕ್ರಮವನ್ನನುಸರಿಸುತ್ತಿರಬಹುದು.

ಧರ್ಮಸ್ಥಳ ಸುಮಾರು ಹದಿನಾರನೇ ಶತಮಾನದಲ್ಲಿ ವಾದಿರಾಜರಿಂದ ಪುನಃ ಪ್ರತಿಷ್ಠೆಗೊಳಪಟ್ಟು ವೈದಿಕ ಸಂಪ್ರದಾಯದಂತೆ ಪೂಜೆಗೊಳಪಡುತ್ತಿದ್ದಾಗ ಅಂದಿನ ಹೆಗ್ಗಡೆಯವರ ಬಗ್ಗೆ ಮಂಜುನಾಥನ ಅಭಿಷೇಕದ ತೀರ್ಥವನ್ನು ಸೋಸದೆ ನೇರವಾಗಿ ತೆಗೆದುಕೊಳ್ಳುವ ಮೂಲಕ ತಮ್ಮ ಸಂಪ್ರದಾಯವನ್ನು ಪಾಲಿಸುತ್ತಿಲ್ಲವೆಂದು ಕಟ್ಟಾ ಜೈನ ಸಂಪ್ರದಾಯವಾದಿಗಳು ಅಸಮಾಧಾನವನ್ನು ಹೊರಹಾಕಿದ್ದರು. ಈ ಗಂಭೀರವಾದ ವಿಷಯ ಚರ್ಚೆಗೊಳಪಡುತ್ತಾ ಏಳು ಪದರದಲ್ಲಿ ಸೋಸಿಲ್ಪಟ್ಟು ಹಿಡಿದಿಟ್ಟ ನೀರು ಮತ್ತು ಮಂಜುನಾಥನಿಗೆ ಅಭಿಷೇಕ ಮಾಡಿದ ತೀರ್ಥ (ನೇರ ಬಾವಿಯಿಂದ ತಂದು ಶಾಸ್ತ್ರೋಕ್ತವಾಗಿ ಅಭಿಷೇಕ ಮಾಡಿ ತೀರ್ಥವೆಂದು ತೆಗೆದಿಟ್ಟದ್ದು) ಇವೆರಡನ್ನೂ ಆಗಷ್ಟೇ ಅನ್ವೇಷಣೆಗೊಂಡಿದ್ದ ಮೈಕ್ರೋಸ್ಕೋಪಿನ ಮೂಲಕ ಪರೀಕ್ಷೆ ಮಾಡುವುದೆಂದು ನಿರ್ಧರಿಸಲಾಯಿತು. ಹಾಗೆ ಮಾಡಿದ ಪರೀಕ್ಷೆಯ ಮೂಲಕ ತಿಳಿದು ಬಂದದ್ದೇನು? ಯಾವ ಸೋಸುವಿಕೆಯ ಪ್ರಕ್ರಿಯೆ ಏಳು ಸಲ ಪುನರಾವರ್ತಿಸಲ್ಪಟ್ಟು ಕುಡಿಯಲು ಯೋಗ್ಯ ಎಂದು ಭಾವಿಸಲಾಗಿತ್ತೋ ಆ ಪ್ರಕ್ರಿಯೆಯ ಕೊನೆಯಲ್ಲಿ ಮೈಕ್ರೋಸ್ಕೋಪ್ ಬರಿಯ ಕಣ್ಣಿಗೆ ಕಾಣಲಾರದ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳ ಇರವನ್ನು ಬಯಲು ಮಾಡಿತ್ತು. ಆದರೆ ಅದೇ ತೀರ್ಥ ಮೈಕ್ರೋಸ್ಕೋಪಿನ ಪರೀಕ್ಷೆಯಲ್ಲಿ ಯಾವುದೇ ಕ್ರಿಮಿ, ಕೀಟ, ಕಣ್ಣಿಗೆ ಕಾಣದ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳ ಕುರುಹೇ ಇಲ್ಲವೆಂದು ತೋರಿಸಿಕೊಟ್ಟಿತ್ತು. ಏನೋ ಹೆಚ್ಚುಕಡಿಮೆ ಆಗಿರಬೇಕು ನಡೆಸಿದ ಪ್ರಯೋಗದಲ್ಲಿ, ಪರೀಕ್ಷೆಯಲ್ಲಿ ಎಂದು ಸಂಶಯ ವ್ಯಕ್ತಪಡಿಸಿ ತೀರ್ಥದಲ್ಲಿದ್ದ ತುಳಸೀದಳವನ್ನು ಅದೇ ಮೈಕ್ರೋಸ್ಕೋಪ್ ಪರೀಕ್ಷೆಗೊಳಪಡಿಸಿದಾಗ ಕಂಡು ಬಂದದ್ದೇನೆಂದರೆ ತೀರ್ಥದಲ್ಲಿನ ತುಳಸೀದಳವು ಅಭಿಷೇಕಕ್ಕೆ ಉಪಯೋಗಿಸಿದ ಹಾಗೂ ಸೋಸದೇ ಹಿಡಿದಿಟ್ಟ ನೀರಿನಲ್ಲಿನ ಎಲ್ಲಾ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳನ್ನು ತನ್ನೆಡೆಗೆ ಸೆಳೆದುಕೊಂಡು ಭಕ್ತರು ಸೇವಿಸುವ ತೀರ್ಥದಲ್ಲಿ ಯಾವುದೇ ಕಲ್ಮಶ ಹಾಗೂ ಮಲಿನವಿಲ್ಲದಂತೆ ಮಾಡಿತ್ತು ಎಂದು. ಅಲ್ಲಿಗೆ ಜೈನರ ಸಂಪ್ರದಾಯವನ್ನು ಹೆಗ್ಗಡೆಯವರು ಪಾಲಿಸುತ್ತಿಲ್ಲವೆಂಬ ಆಕ್ಷೇಪ ನಿಂತು ಹೋದದ್ದೂ ಸಹಜವೇ. ಆದ್ದರಿಂದ ಇಂದಿಗೂ ತೀರ್ಥ ಸೇವಿಸುವಾಗ ಒಂದು ವೇಳೆ ತೀರ್ಥದೊಂದಿಗೆ ತುಳಸೀದಳ ಬಂದರೆ ಅದನ್ನು ಬದಿಗಿಟ್ಟು ಕೇವಲ ತೀರ್ಥವನ್ನು ಮಾತ್ರ ಸ್ವೀಕರಿಸುವ ಸಂಪ್ರದಾಯ ನಡೆದುಕೊಂಡೇ ಬಂದಿದೆ.



**ತೀರ್ಥವನ್ನು ಸೇವಿಸುವಾಗ ಹೇಳುವ ಮಂತ್ರ**

ಅಕಾಲ ಮೃತ್ಯು ಹರಣಂ ಸರ್ವವ್ಯಾಧಿ ನಿವಾರಣಂ|
ಸಮಸ್ತ ದುರಿತೋಪಶಮನಂ ವಿಷ್ಣು ಪಾದೋದಕಂ ಪಾವನಂ ಶುಭಂ||

ಪ್ರಥಮಂ ಕಾಯ ಶುದ್ಧ್ಯರ್ಥಂ।
ದ್ವಿತೀಯಂ ಧರ್ಮ ಸಾಧನಂ।
ತೃತೀಯಂ ಮೋಕ್ಷ ಸಿದ್ಧ್ಯರ್ಥಂ।
ಏವಂ ತೀರ್ಥಂ ತ್ರಿಧಾ ಪಿಭೇತ್।।



# ದೇಹದಲ್ಲಿ ಪಂಚ ವಾಯುಗಳ ಕಾರ್ಯ ವೈಖರಿ

ಟಿ.ಆರ್.ಮಂಜನಾಥ , ಬೆಂಗಳೂರು

ನಮಗೆಲ್ಲಾ ನಮ್ಮ ಹಿರಿಯರು ತಿಂಡಿ ತಿನ್ನುವಾಗ, ಊಟ ಮಾಡುವಾಗ ನೆಲದ ಮೇಲೆ ಪದ್ಮಾಸನ ಅಥವಾ ಸುಖಾಸನ ಹಾಕಿ ಕುಳಿತು, ಅನ್ನ ದೇವರಿಗೆ ನಮಿಸಿ, ಮಾತನಾಡದೆ ಮೌನವಾಗಿ ತಿನ್ನಬೇಕು, ನಮ್ಮ ಎಲ್ಲಾ ಗಮನ ಊಟದ ಕಡೆಗೇ ಇರಬೇಕು, ತಿನ್ನುವುದನ್ನು ಚೆನ್ನಾಗಿ ಅಗಿದು ತಿನ್ನಬೇಕು ಎಂದು ಹೇಳುತ್ತಿದ್ದರು. ಎಲ್ಲರೂ ನೆಲದ ಮೇಲೆ ಕುಳಿತು ಊಟಮಾಡುತ್ತಿದ್ದರು. ಹಾಗೆಯೇ ಬಡಿಸುವವರು ಚೆನ್ನಾಗಿ ಬಡಿಸುತ್ತಿದ್ದರು. 1980ನೇ ಇಸವಿಗೆ ಮೊದಲು ಭಾರತದಲ್ಲಿ ಹುಟ್ಟಿದ ಎಲ್ಲರೂ ಸಾಮಾನ್ಯವಾಗಿ ಇದೇ ರೀತಿ ಬೆಳೆದವರು.

ಹಾಗೆಯೇ ಉಪನಯನ ಆದ ಎಲ್ಲರೂ ಊಟ ಮಾಡುವ ಮೊದಲು ಊಟದ ಎಲೆ ಅಥವಾ ತಟ್ಟೆಗೆ ನೀರಿನಿಂದ ಸುತ್ತು ಕಟ್ಟಿ, ಚಿತ್ರ ಇಟ್ಟು ಆಪೋಶನ ತೆಗೆದುಕೊಂಡು ನಂತರ ಪ್ರಾಣಾಯ ಸ್ವಾಹ, ವ್ಯಾನಾಯ ಸ್ವಾಹ, ಸಮಾನಾಯ ಸ್ವಾಹ, ಉದಾನಾಯ ಸ್ವಾಹ ಮತ್ತು ಅಪಾನಾಯ ಸ್ವಾಹ ಎಂದು ಹೇಳಿ ಐದು ಬಾರಿ ಅನ್ನದ ಅಗಳನ್ನು ಸೇವಿಸುತ್ತಾರೆ. ಹೀಗೇಕೆ? ಇದು ಐದು ವಾಯುಗಳು ನಮ್ಮ ಅಹಾರದಲ್ಲಿ ಸೇರಿ ದೇಹದೊಳಕ್ಕೆ ಹೋಗುವ ಸಂಕೇತ. ಅವುಗಳಿಗೆ ನಾವು ಸಲ್ಲಿಸುವ ಗೌರವ.

ನಮ್ಮ ಮಲ ಮೂತ್ರಗಳ ಜೊತೆಗೆ ಹೊರಗೆ ಹೋಗುತ್ತದೆ. ಇದು ಕೂಡ ಅವಶ್ಯಕ. ಮಲ ಮೂತ್ರ ವಿಸರ್ಜನೆಗೆ ಈ ವಾಯು ಸಹಾಯ ಮಾಡುತ್ತದೆ. ಆರೋಗ್ಯವಂತನ ದೇಹದಲ್ಲಿ ಈ ಅಪಾನ ವಾಯು ದೇಹಕ್ಕೆ ಯಾವುದೇ ತೊಂದರೆ ಕೊಡುವುದಿಲ್ಲ. ಮಲ ಮೂತ್ರಗಳ ಸುಲಭ ಚಲನೆಗೆ ಇದು ಸಹಾಯ ಮಾಡುತ್ತದೆ.



ನಾವು ತಿನ್ನುವ ಆಹಾರದ ಜೊತೆಗೆ ಗಾಳಿಯೂ ನಮ್ಮ ದೇಹದೊಳಕ್ಕೆ ಸೇರುತ್ತದೆ. ಹೀಗೆ ಸೇರುವ ಗಾಳಿ ದೇಹಕ್ಕೆ ಅಗತ್ಯವೂ ಹೌದು. ಹೀಗೆ ಸೇರಿದ ಗಾಳಿಯಲ್ಲಿ ಒಂದು ಭಾಗ ಪ್ರಾಣವಾಯುವಾಗಿ ನಮ್ಮ ಶ್ವಾಸಕೋಶಕ್ಕೆ ಸೇರಿ ಅದನ್ನು ಶುದ್ಧಿಗೊಳಿಸಿ ಸಧೃಡವಾಗಿರಿಸುತ್ತದೆ. ಎರಡನೆಯ ಭಾಗ ವ್ಯಾನವಾಯುವಾಗಿ ನಮ್ಮ ದೇಹದ ಮೂಳೆ, ಮಾಂಸ, ಮಜ್ಜನ, ರಕ್ತ ಗಳಲ್ಲಿ ಸೇರಿ ಅವುಗಳ ಕಾರ್ಯ ಸುಗಮಗೊಳಿಸುತ್ತದೆ. ಮೂರನೆಯ ಭಾಗ ಸಮಾನವಾಯುವಾಗಿ ಹೊಟ್ಟೆ ಜಠರದಲ್ಲಿದ್ದು ಪಚನ ಕ್ರಿಯೆಗೆ ಸಹಾಯ ಮಾಡುತ್ತದೆ. ಇನ್ನುಳಿದ ಗಾಳಿಯಲ್ಲಿ ಒಂದು ಭಾಗ ಉದಾನವಾಯುವಾಗಿ ದೇಹದ ಅನ್ನನಾಳದ ಮೂಲಕ ಹೊರಗೆ ಬರುತ್ತದೆ. ಇದನ್ನು ನಮ್ಮ ಪೂರ್ವಿಕರು ತೇಗು ಎಂದು ಕರೆಯುತ್ತಿದ್ದರು. ನಾವು ಚಿಕ್ಕವರಿದ್ದಾಗ ಮಕ್ಕಳು ತೇಗಿದರೆ ತಾಯಂದಿರಿಗೆ ಬಹಳ ಖುಶಿಯಾಗುತ್ತಿತ್ತು. ಕಾರಣ ಮಗು ಹೊಟ್ಟೆ ತುಂಬ ಊಟ ಮಾಡಿದೆ ಎಂಬುದು. ಆದರೆ ಹಿರಿಯರ ವಿಜ್ಞಾನದಲ್ಲಿ ಈ ತೇಗು ಪ್ರಾಣ, ವ್ಯಾನ, ಸಮಾನ ವಾಯುಗಳು ದೇಹಕ್ಕೆ ಬೇಕಾದಷ್ಟು ಗಾಳಿ ಒದಗಿದ ಮೇಲೆ ಉಳಿದಿರುವ ವಾಯುವಿನ ಒಂದು ಭಾಗ. ಈಗ ಪಾಶ್ಚಿಮಾತ್ಯರ ಮೂರ್ಖತೆಯ ಅನುಕರಣೆಯಿಂದ ಎಲ್ಲರೆದುರು ತೇಗುವುದು ಅಸಹ್ಯವೆಂದು ಭಾವಿಸುವ ಜನರಿದ್ದಾರೆ. ಹಾಗೆ ಬರುವ ತೇಗನ್ನು ತಡೆದರೆ, ತೇಗು ಬರದಿದ್ದರೆ ಆ ವಾಯು ಅಪಾನವಾಯುವಾಗಿ ಮಲ ಮೂತ್ರಗಳ ಜೊತೆಗೆ ಹೊರಬರುತ್ತದೆ.ಹೀಗೆ ತೇಗನ್ನು ತಡೆಯುವುದರಿಂದ ಅಸಿಡಿಟಿ, ಹೊಟ್ಟೆನೋವು, ಹುಳಿತೇಗು ಇತ್ಯಾದಿ ಶುರುವಾಗಬಹುದು. ಆದ್ದರಿಂದ ಯಾರು ಏನಾದರೂ ಅಂದುಕೊಳ್ಳಲಿ ತೇಗನ್ನು ಸಂತೋಷವಾಗಿ ಹೊರಹಾಕಿ. ಇನ್ನು ಉಳಿದ ಭಾಗ ಅಪಾನ ವಾಯು. ಇದು

ಬೇಗ ಬೇಗ ಊಟಮಾಡುವುದರಿಂದ, ದೂರದರ್ಶನ, ಮೊಬೈಲ್ ಅಥವಾ ಕಂಪ್ಯೂಟರ್ ನೋಡುತ್ತಾ ಅಥವಾ ಇನ್ನಾವುದೋ ಕಾರ್ಯಕ್ರಮ ನೋಡುತ್ತಾ ತಿನ್ನುವುದರಿಂದ, ನಿಂತು ತಿನ್ನುವುದರಿಂದ, ಮಾತನಾಡುತ್ತಾ ತಿನ್ನುವುದರಿಂದ ನಮ್ಮ ಗಮನ ತಿನ್ನುವುದರ ಕಡೆಗೆ ಇರುವುದಿಲ್ಲ. ತಿನ್ನುವ ಪ್ರಮಾಣವೂ ವ್ಯತ್ಯಾಸವಾಗುತ್ತದೆ. ಜೊತೆಗೆ ದೇಹಕ್ಕೆ ತಿನ್ನುವುದರ ಜೊತೆಗೆ ಹೋಗುವ ಗಾಳಿಯ ಪ್ರಮಾಣದಲ್ಲೂ ವ್ಯತ್ಯಾಸಬಾಗುತ್ತದೆ.ಈ ಹೆಚ್ಚಿನ ವಾಯು ಉದಾನವಾಗಿ ತೇಗಿನ ರೂಪದಲ್ಲಿ ಅಥವಾ ಅಪಾನವಾಗಿ ಮಲ ಮೂತ್ರಗಳ ಜೊತೆಗೆ ಹೊರ ಹೋಗಬೇಕಾಗುತ್ತದೆ. ಹಾಗೆ ಆಗದಿದ್ದರೆ ಅದು ದೇಹದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ನಮ್ಮ ದೇಹದಲ್ಲಿ ಈ ಐದು ವಾಯುಗಳು ಸರಿಯಾಗಿ ಕೆಲಸ ಮಾಡದಿದ್ದರೆ ಉದಾನ ಮತ್ತು ಅಪಾನ ವಾಯುಗಳು ಕೆಟ್ಟ ವಾಸನೆಯಿಂದ ಕೂಡಿರುತ್ತವೆ. ವಾತ, ಪಿತ್ಥ, ತಲೆನೋವು ಮುಂತಾದ ಕಾಯಿಲೆಗಳು ಬರುತ್ತವೆ. ನಮ್ಮ ಅಂಗಾಂಗಗಳ ಸುಸ್ಥಿತಿಯನ್ನು ಇದು ಹಾಳು ಮಾಡುತ್ತದೆ.

ನಮ್ಮ ಹಿರಿಯರು ಇದನ್ನು ತಿಳಿದು ಆಹಾರ ತಿನ್ನುವ ಮೊದಲು ಈ ಐದು ವಾಯುಗಳನ್ನು ಸ್ಮರಿಸಿ ಭೋಜನ ಮಾಡುವ ಪದ್ಧತಿ ಜಾರಿಗೆ ತಂದರು. ಇದು ನಮ್ಮ ಹಿರಿಯರು ಕಂಡು ಕೊಂಡ ವಿಜ್ಞಾನಿಕ ಜೀವನ ಸತ್ಯ. ಎಲ್ಲರೂ ಇದನ್ನು ಗೌರವಿಸಿ ಮುಂದುವರಿಸಿಕೊಂಡು ಹೋಗೋಣ. ನಮ್ಮ ಆರೋಗ್ಯವನ್ನು ಚೆನ್ನಾಗಿ ಇಡು ಎಂದು ಭಗವಂತನನ್ನು ಪ್ರಾರ್ಥಿಸೋಣ.



# ಕಗ್ಗದ ಸಿರಿ–5

ನಾಗರತ್ನ, ಬೆಂಗಳೂರು

ಜಡವೇನು? ಜೀವವೇಂ? ಚೈತನ್ಯ ನಿದ್ರಿಸಿರು ।
ವೆಡೆಯೆಲ್ಲ ಜಡಲೋಕ ಕಲ್ಲು ಕಡ್ಡಿ ಕಸ ॥
ಅಡಗಿರ್ಪ ಚೈತನ್ಯವೆಚ್ಚರಲು ಜಂತು ಜಗ ।
ಜಡವೇ ಜೀವದ ವಸತಿ - ಮಂಕುತಿಮ್ಮ ॥

ಈ ಜಗತ್ತಿನ ಸಮಸ್ತ ವಸ್ತುಗಳನ್ನೂ ಜೀವವಸ್ತು ಹಾಗು ಜಡವಸ್ತು ಎಂದು ವಿಭಾಗಿಸಲಾಗಿದೆ. ಜೀವವೆಂದರೆ ಚೈತನ್ಯವುಳ್ಳದ್ದು ಹಾಗೂ ಜಡವೆಂದರೆ ಚೈತನ್ಯಶೂನ್ಯವೆಂದು ಭಾವಿಸಲಾಗಿದೆ. ಆದರೆ ಪರಮಾತ್ಮನ ಸೃಷ್ಟಿಯಾದ ಜೀವಜಡ ವಸ್ತುಗಳೆಲ್ಲದರಲ್ಲಿಯೂ ಆ ಚೈತನ್ಯಶಕ್ತಿಯು ಸುಪ್ತವಾಗಿ ಅಡಗಿರುವುದು ಎನ್ನುತ್ತಾರೆ ಮಾನ್ಯ ಡಿವಿಜಿಯವರು. ಒಂದು ಮರದ ಬೀಜವನ್ನು ಮಣ್ಣಿನಲ್ಲಿ ಬಿತ್ತಾಗ, ಅದು ಪ್ರಕೃತಿಯಲ್ಲಿನ ಜೀವಸತ್ವವನ್ನು ಹೀರಿಕೊಂಡು ಸಸಿಯೊಡೆದು ಒಂದು ಮಹಾವಟವೃಕ್ಷವಾಗುತ್ತದೆ. ಅಂದರೆ ಒಂದು ಸಣ್ಣ ಬೀಜದೊಳಗೆ ಚೈತನ್ಯ ತುಂಬಿದ ಆ ಮಹಾವೃಕ್ಷವೇ ಅಡಗಿತ್ತು ಎಂದಾಯಿತು. ಚಕಮಕಿ ಕಲ್ಲನ್ನು ಒಂದಕ್ಕೊಂದು ಉಜ್ಜಿದಾಗ ಬೆಂಕಿಯು ಉತ್ಪತ್ತಿಯಾಗುತ್ತದೆ. ಕಲ್ಲಿನಲ್ಲಿ ಅಡಗಿದ ಅಗ್ನಿಯು ಮೇಲ್ನೋಟಕ್ಕೆ ಗೋಚರಿಸುವುದಿಲ್ಲ. ಕಣ್ಣಿಗೆ ಕಾಣದಿದ್ದರೂ ಬೀಜದೊಳಗಿನ ಮರ, ಕಲ್ಲಿನೊಳಗಿನ ಅಗ್ನಿ ಸುಳ್ಳಾಗುವುದೇ? ಜೀವಜಡಗಳ ಅವಿನಾಭಾವ ಸಂಬಂಧವನ್ನು ನಾವು ಈ ಜಗತ್ತಿನೆಲ್ಲೆಡೆಯಲ್ಲಿಯೂ ನೋಡಬಹುದು. ಜೀವಜಡಗಳೆರಡಕ್ಕೂ ಮೂಲ ಆ ಪರಮಾತ್ಮನ ಚೇತನ.


ಶಿಲಿಯಾಗಿ ನಿದ್ರಿಸುತ್ತಿರ್ದಾಕೆ ರಾಮಪದ ।
ತಲದ ಸಂಸ್ಪರ್ಶದಿಂದೆದ್ದು ನಿಂತಂತೆ ॥
ಚಲಿಸದೆನಿಸಿದ ಜಡವನಾವ ಗಾಳಿಯೊ ಸೋಕೆ ।
ಬಲ ತೀವಿ ಚಲಿಪುದದು - ಮಂಕುತಿಮ್ಮ ॥

ಶಾಪಗ್ರಸ್ತಳಾಗಿ ಕಲ್ಲಾಗಿ ನಿದ್ರಿಸುತ್ತಿದ್ದ ಮಹರ್ಷಿ ಗೌತಮರ ಪತ್ನಿ ಅಹಲ್ಯೆ, ರಾಮನ ಪಾದಸ್ಪರ್ಶವಾದೊಡನೆ ಮರಳಿ ಜೀವಂತವಾದಳು. ಯಾವುದು ನಿರ್ಜೀವವಸ್ತು ಅಥವಾ ಜಡವಸ್ತು ಎನಿಸಿಕೊಳ್ಳುತ್ತದೋ, ಅದು ಯಾವುದೋ ಅದಮ್ಯ ಚೈತನ್ಯದ ಸತ್ವದ ಸಂಸರ್ಗದಿಂದ ಚೈತನ್ಯಶಕ್ತಿಯನ್ನು ಪಡೆದು ಜೀವಂತಿಕೆಯನ್ನು ಪಡೆಯುತ್ತದೆ. ಪ್ರಕೃತಿಯಲ್ಲಿನ ಸಮಸ್ತ ಜಡವಸ್ತುಗಳಲ್ಲಿಯೂ ಆ ಮಹಾಚೈತನ್ಯವು ಅಡಗಿದೆ. ಆದರೆ ಅದನ್ನು ಉದ್ದೀಪನಗೊಳಿಸುವ ಚೈತನ್ಯದ ಕಿಡಿಯಗ್ನಿಯ ಅಗತ್ಯವಿದೆ. ಅಂತೆಯೇ ಆ ವಿಶ್ವಾತ್ಮಕ ಶಕ್ತಿಯ ಒಂದು ಸಣ್ಣ ಅಂಶವಾದ ಮಾನವನಲ್ಲಿಯೂ ಆ ಮಹಾಚೈತನ್ಯವು ಸುಪ್ತವಾಗಿ ಅಡಗಿದ್ದು, ಅದು ಉದ್ದೀಪನಗೊಂಡು ಪ್ರಕಾಶಿಸಲು ಸೂಕ್ತ ಸಮಯಕ್ಕಾಗಿ ಕಾಯುತ್ತಲಿರುತ್ತದೆ. ಆ ಸುಪ್ತಶಕ್ತಿಯ ಅರಿವಿಲ್ಲದ ನಾವು ಸಾಮಾನ್ಯರಂತೆ ಜೀವಿಸಿ, ಈ ಭೂಮಿಯ ಮೇಲಿನ ನಮ್ಮ ಅಸ್ತಿತ್ವಕ್ಕೆ ಬೆಲೆಯೇ ಇಲ್ಲದಂತೆ, ಮಾನವ ಸಂತತಿಯ ಇತಿಹಾಸದಲ್ಲಿ ಧೂಳಿನಕಣದಂತೆ ಮಾಯವಾಗುತ್ತೇವೆ. ಪಂಚಮಹಾಭೂತಗಳಲ್ಲಿನ ಆ ಮಹಾಶಕ್ತಿಯನ್ನು ಸ್ವೀಕರಿಸುವ ಅರ್ಹತೆಯನ್ನು ನಾವು ಮೊದಲು ಪಡೆದುಕೊಳ್ಳಬೇಕು. ಪ್ರಕೃತಿಯಲ್ಲಿನ ಅಗಾಧ ಜ್ಞಾನಭಂಡಾರದಿಂದ ಜ್ಞಾನವನ್ನು ಸ್ವೀಕರಿಸಿ, ನಮ್ಮ ಬುದ್ಧಿಶಕ್ತಿಯನ್ನು ವಿಕಾಸನಕ್ಕೆ ಅಣಿಗೊಳಿಸಬೇಕು. ಸ್ವಾರ್ಥ, ಅಹಂಕಾರ, ಅರಿಷಡ್ವರ್ಗಗಳಂತಹ ದುರ್ಗುಣಗಳಿಂದ ಮುಕ್ತರಾಗಿ, ಧ್ಯಾನ, ಅಧ್ಯಯನ, ಕೀರ್ತನಗಳಿಂದ ಆವೃತರಾದಾಗ, ಜೀವಜಡಶಕ್ತಿಗಳ ಸಮಾಗಮವಾಗಿ ಜ್ಞಾನವಾಹಿನಿಯು ಪ್ರವಹಿಸುತ್ತದೆ. ನೂರಾರು ಜ್ಞಾನಿಗಳು, ಮಹಾತ್ಮರು, ಸಾಧಕರು ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೇ ಉಳಿದಿದ್ದಾರೆ. ಹಾಗಾದರೆ ನಮ್ಮಲ್ಲಿಲ್ಲದ ವಿಶೇಷವಾದ ಶಕ್ತಿಯ ಭಂಡಾರವೇನಾದರೂ ಇದೆಯೇ ಆ ಮಹಾನ್ ಸಾಧಕರಲ್ಲಿ? ಅದಕ್ಕೆಂದೆ ಮಾನ್ಯ ಡಿವಿಜಿಯವರು ಹೇಳುತ್ತಾರೆ :

ನಿನಗಿರದ ಕಣ್ ಬಾಯಿ ವಾಲ್ಮೀಕಿಗೆಂತಾಯ್ತು
ಮುನಿಕವಿತೆಗೆಂತು ನಿನ್ನೆದೆಯೊಳೆಡೆಯಾಯ್ತು? ॥
ಘನಮಹಿಮನೊಳ್ ಜ್ವಲಿಸುತಿತರರೊಳು ನಿದ್ರಿಸುತೆ ।
ಅನಲನೆಲ್ಲರೊಳಿಹನು - ಮಂಕುತಿಮ್ಮ ॥

ಆದಿಕಾವ್ಯ 'ರಾಮಾಯಣ'ವನ್ನು ರಚಿಸಿದ ಕವಿ ವಾಲ್ಮೀಕಿ ಮಹರ್ಷಿ. ಆತನು ಎಲ್ಲರಂತೆಯೇ ಸಾಮಾನ್ಯವ್ಯಕ್ತಿ. ಆದರೆ ಆತನು ರಚಿಸಿದ ರಾಮಾಯಣವು ಅತ್ಯದ್ಭುತ ಮಹಾಕಾವ್ಯ. ಅಂತಹ ಅದ್ಭುತವಾದ ಕಾವ್ಯಸೃಷ್ಟಿಗೆ ಅವಶ್ಯವಿದ್ದಂತಹ ಶಕ್ತಿ ಸಂಚಯನವು ಮುನಿಗೆ ಹುಟ್ಟಿನಿಂದಲೇ ಲಭ್ಯವಿತ್ತೇ? ವ್ಯಾಧನ ಬಾಣಕ್ಕೆ ಬಲಿಯಾದ ಕ್ರೌಂಚಪಕ್ಷಿಯ ಯಾತನೆಯನ್ನು ಕಂಡ ವಾಲ್ಮೀಕಿಮುನಿಯಲ್ಲಿ ಸುಪ್ತವಾಗಿ ಅಡಗಿದ್ದ ಚೈತನ್ಯದ ಕಿಡಿಯು ಜಾಗೃತವಾಗಿ ಒಂದು ಮಹಾಕಾವ್ಯಕ್ಕೆ ನಾಂದಿಯಾಯಿತು. ವಾಲ್ಮೀಕಿಯಂತಹ ಘನಮಹಿಮನಲ್ಲಿ ಉಜ್ವಲವಾಗಿ ಬೆಳಗುತ್ತಿರುವ ಆ ಒಂದು ಚೈತನ್ಯಶಕ್ತಿಯು ಎಲ್ಲರಲ್ಲಿಯೂ ಉಂಟು. ಆದ್ದರಿಂದಲೇ ಅಂತಹ ಅದ್ಭುತವಾದ ಮಹಾಕಾವ್ಯವನ್ನು ಪಠಿಸಿ, ಅರ್ಥೈಸಿಕೊಂಡು, ಅದನ್ನು ಪ್ರೀತಿಯಿಂದ ಎದೆಗಪ್ಪಿಕೊಳ್ಳುವಷ್ಟು ಜ್ಞಾನವಿರುವುದು ನಮ್ಮಲ್ಲಿ. ಆದರೆ ಆ ಶಕ್ತಿಯು ಕೆಲವರಲ್ಲಿ ಜಾಗೃತವಾಗಿಯೂ ಮತ್ತೆ ಕೆಲವರಲ್ಲಿ ಸುಪ್ತವಾಗಿಯೂ ಪ್ರವಹಿಸುತ್ತಿರುವುದು. ಸರ್ವರಲ್ಲಿಯೂ ಸುಪ್ತವಾಗಿರುವ ಆ ಚೈತನ್ಯದ ಕಿಡಿಯು ಜ್ಯೋತಿಯಾಗಿ ಬೆಳಗಬೇಕಾದರೆ ಸಾಧನೆಯು ಅತ್ಯವಶ್ಯ. "ಹುತ್ತಗಟ್ಟದೆ ಚಿತ್ತ ಮತ್ತೆ ಕೆತ್ತಿತೇನು ಪುರುಷೋತ್ತಮನ ಆ ಅಂಥ ರೂಪರೇಖೆ?" - ಅಡಿಗರ ಈ ಸಾಲಿನಲ್ಲಿ ಅರ್ಥದ ಮಹಾಪೂರವೇ ಅಡಗಿದೆ. ಪುರುಷೋತ್ತಮನಾದಂತಹ ಶ್ರೀರಾಮನ ವ್ಯಕ್ತಿತ್ವವನ್ನು ಕಡೆದು ನಿಲ್ಲಿಸುವಂತಹ ವಾಲ್ಮೀಕಿಯ ಸಾಧನೆಯು ಹೇಗಿದ್ದಿರಬಹುದು? ತಮ್ಮ ಸುತ್ತಲೂ ಕಟ್ಟಿದ ಹುತ್ತದ ಪರಿವೆಯೇ ಇಲ್ಲದೆ ತಪಸ್ಸಿನಲ್ಲಿ ಮುಳುಗಿ ಸಿದ್ಧಿಗಳಿಸುತ್ತಿದ್ದ ತಪಸ್ವಿಗಳಂತೆ, ವಾಲ್ಮೀಕಿಮುನಿಯ ಮನಸ್ಸು, ಚಿತ್ತವು ಕೂಡ ಹುತ್ತಕಟ್ಟುವಷ್ಟು ಸಾಧನೆ ನಡೆಸಿತ್ತು ರಾಮಾಯಣದಂತಹ ಬೃಹತ್ಕಾವ್ಯದ ರಚನೆಗಾಗಿ. 'ಅನಲ'ನು ಎಂದರೆ ಆ ಚೈತನ್ಯಶಕ್ತಿಯು ಸರ್ವರಲ್ಲಿಯೂ ಪ್ರವಹಿಸುತ್ತಿದ್ದರೂ, ವಾಲ್ಮೀಕಿಯಂತಹ ಘನಮಹಿಮರಲ್ಲಿ ಅದು ದೇದೀಪ್ಯಮಾನವಾಗಿ ಪ್ರಜ್ವಲಿಸುತ್ತಿದ್ದು, ಮಿಕ್ಕವರಲ್ಲಿ ಅದು ಸುಪ್ತವಾಗಿ ನಿದ್ರಿಸುತ್ತಿದೆ ಎನ್ನುತ್ತಾರೆ ಡಿವಿಜಿಯವರು. ಸುಪ್ತವಾಗಿದ್ದ ಚೈತನ್ಯಾಗ್ನಿಯನ್ನು ಬಡಿದೆಬ್ಬಿಸಿ ಪೋಷಿಸಿದಾಗ ಎಲ್ಲರೂ ವಾಲ್ಮೀಕಿಮುನಿಯಂತೆ ಸಾಧಕರಾಗುತ್ತಾರೆ. ಧ್ಯಾನ, ಅಧ್ಯಯನ ಶಕ್ತಿಗಳಿಂದ ಆ ಚೈತನ್ಯಾಗ್ನಿಯನ್ನು ಜಾಗೃತಗೊಳಿಸಿದಾಗ ನಮ್ಮ ಜೀವನವು ಚೈತನ್ಯದಾಯಕವಾಗುತ್ತದೆ.

ಅಂತರಂಗದಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ, ಅದರ ವಿಕಸನಕ್ಕಾಗಿ ಪರಿಶ್ರಮ ಪಡುವವರು ಕೇವಲ ಕೆಲವೇ ಮಂದಿ. ನಾವು ನಮ್ಮಲ್ಲಿರುವ ಕುಂದುಕೊರತೆಗಳನ್ನು, ಲೋಪದೋಷಗಳನ್ನು, ದೌರ್ಬಲ್ಯಗಳನ್ನು ಅರಿತು, ನಮ್ಮಲ್ಲಿನ ಸಾಮರ್ಥ್ಯವನ್ನು ಸೂಕ್ತವಾದ ರೀತಿಯಲ್ಲಿ ಬಳಸಿಕೊಂಡರೆ ಜಗತ್ತಿನಲ್ಲಿ ನಾವು ನಮ್ಮದೇ ಆದ ಛಾಪನ್ನು ಮೂಡಿಸಬಹುದು. ಇದಕ್ಕೆ ಭಗೀರಥ ಪ್ರಯತ್ನವೂ, ವಿಶ್ವಾಮಿತ್ರನಹಠವೂ ಅತ್ಯವಶ್ಯ.



ಶ್ರೀ ಡಿ. ವಿ. ಗುಂಡಪ್ಪ (ಡಿ. ವಿ. ಜಿ)

ಏಸು ಸಲ ತಪವಗೈದೇಸು ಬನ್ನವನಾಂತು ।
ಕೌಶಿಕಂ ಬ್ರಹ್ಮರ್ಷಿಪದಕರ್ಹನಾದನ್? ॥
ಘಾಸಿಪಡುತಿನ್ನೊಮ್ಮೆ ಮತ್ತೊಮ್ಮೆ ಮರಮರಳಿ ।
ಲೇಸಾಗಿಸಾತ್ಮವನು - ಮಂಕುತಿಮ್ಮ ॥

ಕೌಶಿಕನೆಂಬ ರಾಜನು ವಸಿಷ್ಠಮಹರ್ಷಿಗಳ ಬ್ರಹ್ಮತೇಜಸ್ಸಿನ ಬಲವನ್ನು ಕಂಡು ಅದನ್ನು ತಾನೂ ಪಡೆದು ವಸಿಷ್ಠರಿಂದಲೇ 'ಬ್ರಹ್ಮರ್ಷಿ' ಎನಿಸಿಕೊಳ್ಳಬೇಕೆಂಬ ಛಲದಿಂದ ತಪೋಮಗ್ನನಾದಾಗ ಆತನ ತಪಸ್ಸಿಗೆ ಬಂದೊದಗಿದ ವಿಘ್ನಗಳು ಹಲವಾರು. ಅವನ ತಪಸ್ಸಿಗೆ ಇಂದ್ರಾದಿ ದೇವತೆಗಳು ಒಡ್ಡಿದ ಹಲವಾರು ಅಡ್ಡಿಆತಂಕಗಳನ್ನು ನಿವಾರಿಸಿಕೊಂಡು ಮತ್ತೆ ಮತ್ತೆ ಮರಳಿ ಯತ್ನವ ಮಾಡುತ್ತಲೇ ಬಂದನು ಕೌಶಿಕ. ದೇವಲೋಕದ ಅಪ್ಸರೆ ಮೇನಕೆಯಿಂದ ಅವನ ತಪೋಭಂಗವಾಗಿ, ಅವಳೊಡನೆ ದಾಂಪತ್ಯಜೀವನಕ್ಕೆ ಕಾಲಿಟ್ಟದ್ದು ಒಂದೆಡೆಯಾದರೆ, ತ್ರಿಶಂಕು ಮಹಾರಾಜನನ್ನು ಸಶರೀರಿಯಾಗಿ ಸ್ವರ್ಗಕ್ಕೆ ತಾನು ಕಳಿಸಲೇಬೇಕೆನ್ನುವ ಹಠದಿಂದ, ಗಳಿಸಿದ್ದ ತಪಸ್ಸಿನ ಫಲವೆಲ್ಲವನ್ನೂ ಕಳೆದುಕೊಂಡದ್ದು ಮತ್ತೊಂದು ಘಟನೆ. ಆದರೂ 'ಕ್ಷಾತ್ರಬಲ'ಕ್ಕಿಂತ 'ಆತ್ಮಬಲ'ವೇ ಶ್ರೇಷ್ಠವೆಂದರಿತ ಕೌಶಿಕನು ಆತ್ಮಬಲವನ್ನು ಗಳಿಸುವ ಹಾದಿಯಲ್ಲಿ ಎದುರಾದ ವಿಘ್ನಗಳೆಲ್ಲವನ್ನೂ ಮೆಟ್ಟಿನಿಂತು, ಮತ್ತೆ ಮತ್ತೆ ಪ್ರಯತ್ನವನ್ನು ಮಾಡುತ್ತಾ ಕೊನೆಗೂ 'ಬ್ರಹ್ಮರ್ಷಿ ವಿಶ್ವಾಮಿತ್ರ' ನಾದುದು ನಮಗೆಲ್ಲರಿಗೂ ಒಂದು ಉತ್ತಮ ನಿದರ್ಶನ. ಪರತತ್ವವನ್ನು ಅರಿಯುವ ಹಾದಿಯಲ್ಲಿ ಸೂಕ್ತಮಾರ್ಗದರ್ಶನವನ್ನು ಪಡೆದು, ಎದುರಾಗುವ ಅಡ್ಡಿತಡೆಗಳನ್ನು ಧೈರ್ಯದಿಂದ ಎದುರಿಸಿ, ಛಲಬಿಡದ ವಿಕ್ರಮನಂತೆ ಮರಳಿಯತ್ನವ ಮಾಡಿ, ಹಿಡಿದ ಕೆಲಸವನ್ನು ಸಂಪನ್ನಗೊಳಿಸಿದಾಗ ಆಗುವ ಸತ್ಯದ ದರುಶನದಿಂದ ದೊರಕುವುದು ಆತ್ಮಾನಂದ. 'ಲೇಸಾಗಿಸಾತ್ಮವನು' ಎಂದು ಸೂಚಿಸಿರುವುದರ ಅರ್ಥವೇ ಆತ್ಮವು ಪಡೆಯಬೇಕಾದ ಪೂರ್ಣಾನುಭವ.

ಈ ಜಗತ್ತಿನ ಅಗಾಧ ಸೃಷ್ಟಿಗೆ ಕಾರಣವಾದ ಆ ಪರತತ್ವವನ್ನು ಅರಿತು ಆತ್ಮಬಲವನ್ನು ವರ್ಧಿಸಿಕೊಳ್ಳುವುದು ಅಲ್ಪಮತೀಯರಾದ ನಮ್ಮಿಂದ ಸುಲಭ ಸಾಧ್ಯವೇ? ಪರತತ್ವವನ್ನು ಅರಿಯಬೇಕಾದ ಹಾದಿ ಯಾವುದು? ಜ್ಞಾನವು ತನ್ನಷ್ಟಕ್ಕೆ ತಾನೆ ಎಲ್ಲರಲ್ಲೂ ಸ್ಫುರಿಸುವಂತದ್ದಲ್ಲ. ಆ ಜ್ಞಾನವನ್ನು ಪಡೆಯುವುದೇ ಒಂದು ಮಹತ್ಸಾಧನೆ. ಈ ಸಾಧನಾಮಾರ್ಗದಲ್ಲಿ ನಮಗೆದುರಾಗುವ ಸವಾಲುಗಳು, ಸಂದಿಗ್ಧತೆಗಳು ನೂರಾರು. ಅಂತರಂಗದಲ್ಲಿ ಪುಟಿದೇಳುವ ಜಿಜ್ಞಾಸೆಗಳು ಹಲವಾರು. ಇದಕ್ಕೆಲ್ಲಾ ಉತ್ತರಗಳನ್ನು ಕಂಡುಕೊಂಡು, ಬೌದ್ಧಿಕವಾಗಿ ಬೆಳೆಯುತ್ತಾ ಮುನ್ನಡೆಯುವ ಮಾರ್ಗವೇ ಜ್ಞಾನಮಾರ್ಗ. ಪುರಾತನಕಾಲದ ಋಷಿಮುನಿಗಳಂತೆ, ವಿದ್ವಾಂಸರುಗಳಂತೆ ಸಿದ್ಧಿಯನ್ನು ಪಡೆಯುವುದು ಇಂದಿನ ಪೀಳಿಗೆಗೆ ಅಸಾಧ್ಯವಾದರೂ, ಆ ದಾರಿಯಲ್ಲೊಂದಿಷ್ಟು ದೂರ ಸಾಗಿದರೂ ಸಾಕು, ಬೊಗಸೆಯಷ್ಟಾದರೂ ಸಿಕ್ಕೀತು.

ಸೃಷ್ಟಿಯ ಮಹಿಮೆಯು ಅಪಾರ. ಸೃಷ್ಟಿಕರ್ತನ ಸೃಷ್ಟಿಯು ಅಗಾಧ. ಸತ್ವಸಂಪದ್ಭರಿತವಾದ ಈ ಜಗತ್ತಿನ ಭಂಡಾರವನ್ನು ಆದಷ್ಟೂ ತಮ್ಮದಾಗಿಸಿಕೊಂಡು ಸಿದ್ಧಿಯನ್ನು ಪಡೆದವರು ನಮ್ಮ ಋಷಿಮುನಿಗಳು. ಅಂತಹ ಋಷಿಮುನಿಗಳ ಅನುಭವದ ಸಾರಸಂಗ್ರಹಗಳಾದ ಶಾಸ್ತ್ರಗ್ರಂಥಗಳು, ವಿದ್ವಾಂಸರ ಬರಹಗಳು ನಮ್ಮ ಜ್ಞಾನಭಂಡಾರವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಈ ಜಗತ್ತಿನಲ್ಲಿ ನಮ್ಮ ವೇದದ ಜ್ಞಾನವೇ ಅತಿ ಪುರಾತನವಾಗಿದ್ದು, ಅದು ಅನಾದಿಕಾಲದಿಂದಲೂ, ಯುಗಯುಗಾಂತರಗಳಿಂದಲೂ ತಲೆಮಾರುಗಳ ಮೂಲಕ ಜನಮಾನಸದೊಳಗೆ ಹರಿದುಬರುತ್ತಿದೆ. ನಮ್ಮ ಜಗತ್ತಿನ ಸಮಸ್ತ ಆಧುನಿಕ ಜ್ಞಾನದ ಉಗಮಕ್ಕೆ ತಳಹದಿಯೇ ಇದು. ಆಧುನಿಕ ವಿಜ್ಞಾನವು ಕೂಡ ಪುರಾತನ ತತ್ವಗಳ ಆಧಾರಗಳಿಂದಲೇ ಜನ್ಮತಳೆದದ್ದು. ಇಂದು ನಾವು ಕಲಿಯುತ್ತಲಿರುವುದರ ಮೂಲವು ಋಷಿಮುನಿಗಳ ವೇದಶಾಸ್ತ್ರಗಳ ಗರ್ಭದಿಂದಲೇ ಚಿಗುರೊಡೆದದ್ದು. ಆದ್ದರಿಂದ ಹಳೆಯದು, ಹಳೆಯಕಾಲದ್ದು ಎನ್ನುವುದಕ್ಕಿಂತಲೂ ಆದಿಮೂಲವೆಂದರೆ ಹೆಚ್ಚು ಸೂಕ್ತವೆನಿಸುತ್ತದೆ. ಬೇರುಗಳು ಗಟ್ಟಿಯಾಗಿದ್ದಾಗ ಮಾತ್ರ ಒಂದು ಮರವು ಋತುಮಾನಕ್ಕನುಗುಣವಾಗಿ ನವನಾವಿನ್ಯತೆಯಿಂದ ಕಂಗೊಳಿಸಬಲ್ಲದು. ಮೂಲದೊಂದಿಗಿನ ಕೊಂಡಿ ಕಳಚಿದಲ್ಲಿ ಮರವು ಸೊರಗಿ ಬಾಡಿಹೋಗುತ್ತದೆ. ನಮ್ಮ ಪರಂಪರೆ, ಸಂಸ್ಕಾರಗಳು ಚಿರಕಾಲ ಉಳಿಯಬೇಕಾದರೆ, ಹೊಸ ಆಯಾಮಗಳೊಂದಿಗೆ ವಿಕಾಸವಾಗಬೇಕಾದರೆ, ಪುರಾತನ ಜ್ಞಾನದ ಆಧಾರದಿಂದ ಮಾತ್ರ ಸಾಧ್ಯ. ದುರಂತವೆಂದರೆ ಇಂದಿನ ಪರಿಸ್ಥಿತಿಯಲ್ಲಿ ಪಾಶ್ಚಾತ್ಯ ನಡವಳಿಕೆಗಳ ಅಂಧಾನುಕರಣೆ ಹಾಗು ನಮ್ಮ ಮೌಲ್ಯಾಧಾರಿತ ಸಂಸ್ಕೃತಿಯ ಅವಹೇಳನ ಇಂದಿನವರ ಒಂದು ಹವ್ಯಾಸವಾಗಿದೆ.

ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ।
ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ ॥
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ।
ಜಸವು ಜನಜೀವನಕೆ - ಮಂಕುತಿಮ್ಮ ॥

ನಮ್ಮ ಮೂಲತತ್ವದ ಸತ್ವಸಾರದ ಜೊತೆಗೆ ನವೀನ ಅವಿಷ್ಕಾರಗಳು, ಚಿಂತನೆಗಳು ಮೇಳೈಸಿದಾಗ ನಿಜವಾದ ಬದುಕು. ಋಷಿಮುನಿಗಳ ಜ್ಞಾನದೊಡನೆ ನವೀನ ವಿಜ್ಞಾನದ ಸಮನ್ವಯವಾದಾಗ ಬದುಕಿಗೊಂದು ಅರ್ಥ. ಮೌಲ್ಯಾಧಾರಿತ ಸಮಾಜದಲ್ಲಿನ ಉನ್ನತಮೌಲ್ಯಗಳು, ನೀತಿನಿಯಮಗಳು ನಮ್ಮ ಸಾಮಾಜಿಕ ಅಸ್ತಿತ್ವಕ್ಕೆ ಆಧಾರ. ಆ ಮೂಲ ಜ್ಞಾನದ ಆಧಾರದ ಮೇಲೆ ಬೆಳೆದು ಬಂದ ಕಥೆ, ಪುರಾಣ, ಕಾವ್ಯ, ಕವಿತೆ, ಸಂಗೀತ, ನೃತ್ಯಗಳ ಮಹಾಪೂರವೇ ಹರಿದುಬಂದು ನಮ್ಮ ಸಂಸ್ಕೃತಿ ಸಂಸ್ಕಾರಗಳಲ್ಲಿ ಬೆರೆತು ಹಾಸು ಹೊಕ್ಕಾಗಿವೆ. ಮೂಲದಿಂದ ಬಂದ ಜ್ಞಾನವು ಸ್ವತಃ ಸಿದ್ಧವಾದ ಜ್ಞಾನ. ಈ ಸಾಧಿತ ಜ್ಞಾನವನ್ನು ಪಡೆಯುವುದಾದರೂ ಹೇಗೆ ?

ವೇದ ಲೋಕಾಚಾರ ನಿನ್ನನುಭವದ ಯುಕ್ತಿ ।
ಶೋಧಿಸಿ ಮೂರನುಂ ಸಂವಾದಗೊಳಿಸು ॥
ಸಾಧಿತಜ್ಞಾನ ನರಸಾಧ್ಯ ಪ್ರಮಾಣವದು ।
ಹಾದಿ ಬೆಳಕದು ನಿನಗೆ - ಮಂಕುತಿಮ್ಮ ॥

ಅನಾದಿಕಾಲದಿಂದಲೂ ಪರಂಪರಾನುಗತವಾಗಿ ಹರಿದು ಬಂದಿರುವ ವೇದೋಪನಿಷತ್ತುಗಳ ಸಾರ, ಲೋಕಾರೂಢಿಯಾಗಿ ಬಂದ ಆಚಾರವಿಚಾರಗಳು ಹಾಗು ಅವುಗಳಿಂದ ದೊರೆತ ಅನುಭವವನ್ನು ಅಂತರಂಗದ ವಿಚಾರಮಂಥನಕ್ಕೆ ಒಳಪಡಿಸಿದಾಗ ದೊರೆಯುವುದು ನಮ್ಮದೇ ಆದ ಸತ್ಯಸತ್ವಸಾರಯುತ ಜ್ಞಾನ. ಈ ಮೂರನ್ನು ಶೋಧಿಸಿ ಬಂದಂತಹ ಸಾರವನ್ನು ಅಂತರಂಗದಲ್ಲಿ ಸಮನ್ವಯಗೊಳಿಸಿದಾಗ ದೊರೆಯುವ ಜ್ಞಾನವು ಸಾಧಿತಜ್ಞಾನ. ಅದೇ ನಮ್ಮ ಜ್ಞಾನಾರ್ಜನೆಯ ಬದುಕಿಗೆ ಬೆಳಕು ಎಂಬುದು ಮಾನ್ಯ ಡಿವಿಜಿಯವರ ಅಭಿಪ್ರಾಯ.

ಜ್ಞಾನವು ದೊರೆಯಬಹುದಾದ ಮೂರು ನೆಲೆಗಳನ್ನು ಕುರಿತು ಇಲ್ಲಿ ತಿಳಿಯಬಹುದು. ಈ ಜಗತ್ತಿನಲ್ಲಿ ನಮ್ಮ ಭಾರತೀಯ ಸನಾತನಧರ್ಮದ ಮೂಲವಾದ ವೇದಜ್ಞಾನವೇ ಅತಿ ಪುರಾತನವಾದುದು. ನಮ್ಮೆಲ್ಲ ಜ್ಞಾನದ ಮೂಲವೇ ವೇದೋಪನಿಷತ್ತಿನ ಸಾರ. ಈ ಸಾರವೇ ಗಟ್ಟಿಯಾದ ಆಳಕ್ಕಿಳಿದ ಬೇರು. ಹೊರಬಂದ ಮಹಾವಟವೃಕ್ಷದ ರೆಂಬೆ ಕೊಂಬೆಗಳೇ ನಮ್ಮ ಬದುಕಿನ ಸಂಸ್ಕೃತಿ, ಸಾಹಿತ್ಯ, ವಿಜ್ಞಾನ, ತತ್ತ್ವಜ್ಞಾನಾದಿಗಳು. ನಮ್ಮ ಸಮಸ್ತ ಆಧುನಿಕ ಜ್ಞಾನದ ಭದ್ರಬುನಾದಿಯೇ ಈ ಬೇರುಗಳು. ಇಂತಹ ಸತ್ವಸಾರವನ್ನು ನಮಗೆ ದಯಪಾಲಿಸಿದ ನಮ್ಮ ಋಷಿಮುನಿಗಳ ಜ್ಞಾನವು ಮೇರುಸದೃಶವಾದುದು. ವೇದಗಳು ಒಳಗೊಂಡಿಲ್ಲದ ಕ್ಷೇತ್ರವಿಲ್ಲ. ಖಗೋಳಶಾಸ್ತ್ರ, ಗಣಿತಶಾಸ್ತ್ರ, ವಾಸ್ತುಶಾಸ್ತ್ರ, ಶಿಲ್ಪ ಹಾಗು ನಾಟ್ಯಶಾಸ್ತ್ರ ಇತ್ಯಾದಿಗಳನ್ನು ಒಳಗೊಂಡಿರುವ ವೇದಗಳು ನಮ್ಮ ಜ್ಞಾನಾರ್ಜನೆಗೆ ಮೂಲಮಂತ್ರ.

ಲೋಕಾಚಾರವೆಂದರೆ ನಮ್ಮ ಸುತ್ತಮುತ್ತಲಿನ ಸಮಾಜ ದೊಂದಿಗಿನ ಹಾಗು ಪ್ರಕೃತಿಯೊಡನೆಯ ಒಡ ನಾಟದಿಂದ ಪಡೆದುಕೊಂಡ ಲೋಕಜ್ಞಾನ. ನೋಡಿ, ಕೇಳಿ, ಓದಿ ಕಲಿತ ವಿದ್ಯೆಗಳು, ಪಡೆದುಕೊಂಡ ಸಂಸ್ಕಾರಗಳು, ಶಿಕ್ಷಣ ಇತ್ಯಾದಿಗಳಿಂದ ದೊರೆತ ಅಪಾರವಾದ ಅನುಭವದ ರಾಶಿ. ಪ್ರತಿದಿನವು, ಪ್ರತಿಕ್ಷಣವು ನೀತಿಪಾಠವನ್ನು ಕಲಿಸುತ್ತಲೇ ಇರುತ್ತದೆ ನಾವು ವಾಸಿಸುತ್ತಿರುವ ನಮ್ಮೀ ಜಗತ್ತು. ಒಬ್ಬ ವ್ಯಕ್ತಿಯು ಒಂದು ದಿನದಲ್ಲಿ ಪಡೆಯಬಲ್ಲ ಅನುಭವಗಳಿಗೆ ಮಿತಿಯಿಲ್ಲ. ಪ್ರತಿಯೊಬ್ಬ ವ್ಯಕ್ತಿಯ ಸ್ವಂತಾನುಭವವು ಅವನ ಬುದ್ಧಿಶಕ್ತಿಗೆ ವಿಷಯ ಸಾಮಗ್ರಿ. ಈ ಪ್ರಪಂಚದಲ್ಲಿ ಹೇಗೆ ಬದುಕಬೇಕೆಂಬುದರ ಅರಿವು ಉಂಟಾಗುವುದೇ ಈ ಲೋಕಾನುಭವದಿಂದ. ನಮ್ಮ ಜೀವಿತಾವಧಿಯಲ್ಲಿ ನಾವು ಪಡೆಯುವ ಅನುಭವಗಳು ನಮ್ಮ ಜ್ಞಾನವಿಕಾಸಕ್ಕೆ ದಾರಿ.

ನಮಗೆ ದೊರೆತ ಲೋಕಾನುಭವವು ಮನಮಂಥನಕ್ಕೆ ಒಳಗಾದಾಗ ದೊರೆಯುವ ಹಾಲ್ಬೆಣ್ಣೆಯು ಜ್ಞಾನವೆಂಬ ಸತ್ಯ.. 'ಅನುಭವದ ಪಾಲೊಳು ವಿಚಾರ ಮಂಥನವಾಗೆ ಜನಯಿಕುಂ ಜ್ಞಾನನವನೀತ..' ಎನ್ನುತ್ತಾರೆ ಮಾನ್ಯ ಡಿವಿಜಿಯವರು. ನಮ್ಮ ಇಂದ್ರಿಯಗಳ ಮೂಲಕ ನಾವು ಪಡೆದುಕೊಂಡ ಲೌಕಿಕವಿಚಾರಗಳು ಮೊದಲು ನಮ್ಮ ಮನಸ್ಸನ್ನು ಹೊಕ್ಕುತ್ತವೆ. ಆದರೆ ಆ ಎಲ್ಲಾ ವಿಷಯಗಳು ನಮ್ಮ ಅಂತರಂಗದ ಆಳಕ್ಕಿಳಿಯುವುದಿಲ್ಲ. ಕೇವಲ ಪ್ರಜ್ಞಾಪೂರ್ವಕವಾಗಿ, ಸೂಕ್ಷ್ಮವಾಗಿ ಗಮನಿಸಿದಷ್ಟು ಮಾತ್ರ ಸುಪ್ತಪ್ರಜ್ಞೆಯ ಆಳಕ್ಕಿಳಿಯುವುದು. ಬುದ್ಧಿಶಕ್ತಿಯು ಆ ವಿಷಯಗಳನ್ನು ವಿಚಾರವಿಮರ್ಶೆಗೆ ಒಳಪಡಿಸಿದಾಗ ದೊರೆಯುವ ಜ್ಞಾನದ ಬಲದಿಂದ ನಮ್ಮ ವಿವೇಕ, ವಿವೇಚನಾಶಕ್ತಿಯು ವರ್ಧಿಸುತ್ತದೆ. ಮನಸ್ಸು ಹಾಗು ಬುದ್ಧಿ ಇವೆರೆಡರ ಕಾರ್ಯದಕ್ಷತೆ ಹಾಗು ಕ್ರಿಯಾಶೀಲತೆ ವ್ಯಕ್ತಿಯೊಬ್ಬನ ಸರ್ವತೋಮುಖ ವಿಕಾಸಕ್ಕೆ ಹಾದಿ.

ಈ ಮೂರೂ ನೆಲೆಗಳಿಂದ ದೊರೆತ ಜ್ಞಾನವನ್ನು ಮೊದಲು ಬುದ್ಧಿಶಕ್ತಿಯ ಹಿನ್ನೆಲೆಯಲ್ಲಿ ಶೋಧಿಸಬೇಕೆನ್ನುತ್ತಾರೆ ಡಿವಿಜಿಯವರು. ಶೋಧಿಸಿ ತೆಗೆದ ಸತ್ವಸಾರವನ್ನು ನಮ್ಮ ಅಂತರಂಗದಲ್ಲಿ ಸಮನ್ವಯಗೊಳಿಸಿದಾಗ ನಮಗೆ ದೊರೆಯುವ ಜ್ಞಾನವೇ ಸತ್ಯಜ್ಞಾನ, ಸಾಧಿತಜ್ಞಾನ. ಈ ಜ್ಞಾನದೀವಿಗೆಯ ಬೆಳಕಿನಲ್ಲಿ ಮುನ್ನಡೆದಾಗ ಅಜ್ಞಾನ, ಅಂಧಕಾರದಿಂದ ಮುಕ್ತಿ. ಅದುವೇ ಆತ್ಮಜ್ಞಾನ! ಅದುವೇ ಆತ್ಮಬಲ!



# ನಿಲ್ಲಲ್ಲ.... ನಿಲ್ಲಲ್ಲ.... ಜಲಧಾರೆ

**ಸುಮಾ ರಮೇಶ್,** ಹಾಸನ

ಬೆಳಗಿನಿಂದ ಡೌನ್ ವಾಟರ್ ಪೈಪ್ ನಲ್ಲಿ ನೀರು ತೊಟ್ಟಿಕ್ಕುತ್ತಿತ್ತು. ಮೋಟರ್ ಆಫ್ ಮಾಡಿ ಹತ್ತು ನಿಮಿಷದೊಳಗೆ ಓವರ್ ಫ್ಲೋ ವಾಟರ್ ನ ಆರ್ಭಟ ನಿಲ್ಲಬೇಕಿತ್ತು. ಇಂದೇಕೋ ಗಂಟೆಯಾದರೂ ಕೊರೋನಾ ಕಾಲದ ರನ್ನಿಂಗ್ ನೋಸ್ ನಂತೆ ಫ್ಲೋ ಕಂಟ್ರೋಲ್ ತಪ್ಪಿತ್ತು.ಸೋಲಾರ್ ನೀರು ರಿವರ್ಸ್ ಬಂದೂ ಹೀಗಾಗಿದ್ದಿದೆ. ಸಮಸ್ಯೆಯ ಮೂಲ ಅರಿಯಲು ಮಹಡಿ ಏರಿದೆ. ಮೂರು ಮಹಡಿ ದಾಟಿ ಟ್ಯಾಂಕ್ ಇರಿಸಿದ ಸ್ಥಳ ತಲುಪುವಷ್ಟರಲ್ಲಿ ಬೆವರು ಬಸಿದು ಉಸಿರು ಮೇಲೆ ಬಂದಿತ್ತು. ಪ್ಯಾರಾ ಪೆಟ್ ವಾಲ್ ಮೇಲೆ ಕುಳಿತುಉಸಿರೆಳೆಯುತ್ತಲೇ ಸೋಲಾರ್ ಟ್ಯಾಂಕ್ ಪರಿಶೀಲಿಸಿದೆ. ಅದು ಬೆಳಗಿನಿಂದ ಭಾಸ್ಕರನ ಸಖ್ಯದಲ್ಲಿ ಸುಖಿಸಿ ಬೆಚ್ಚಗೆ ಬಿಸಿಯೇರಿಸಿಕೊಂಡು ಕುಳಿತಿತ್ತು. ವಾಟರ್ ಟ್ಯಾಂಕ್ ಬಳಿ ಬಂದು ಸುತ್ತಲೂ ಸ್ಕ್ಯಾನ್ ಮಾಡಿದೆ. ಅದರ ಔಟರ್ ಬಾಡಿಯಲ್ಲಿ ಮೂರಿಂಚಿನಷ್ಟು ಬಿರುಕು ಮೂಡಿಜಲಲ ಜಲಲ ಜಲ ಧಾರೆ..... ಸೃಷ್ಟಿಯಾಗಿತ್ತು.ಮನೆಕಟ್ಟಿ ಕೇವಲ ನಾಲ್ಕು ವರ್ಷ....ಇನ್ನೂ ಟೀನೇಜನ್ನೂ ತಲುಪದ ಟ್ಯಾಂಕು ರಿಟೈರ್ ಮೆಂಟ್ ಗೆ ರೆಡಿಯಾಗುತ್ತಿತ್ತು. ಕನ್ಸ್ಟ್ರಕ್ಷನ್ ಸಮಯದಲ್ಲಿ ಶ್ರಮ ಕಡಿಮೆಯಾಗಲೆಂದು ಆರ್ಕಿಟೆಕ್ಟ್ ಗೆ ಮೆಟೀರಿಯಲ್ ಕಾಂಟ್ರ್ಯಾಕ್ಟ್ ಕೊಟ್ಟಿದ್ದರ ಫಲ. ಯಾವುದೋ ಅಗ್ಗದ ಟ್ಯಾಂಕ್ ತಂದಿರಿಸಿ ಬಿಸಿಲಿನ ಝಳಕ್ಕೆ ಅದು ಬಳಲಿ ಬಾಯ್ತೆರೆದು ಅಳುತ್ತಿತ್ತು. ಖರ್ಚಿಗೆ ಬಂದಿದ್ದಕ್ಕೆ ನಾನು ಅಳಬೇಕಿತ್ತು. ಹೊಸ ಟ್ಯಾಂಕ್ ರೀಪ್ಲೇಸ್ ಮಾಡುವ ಬದಲು ಏನಾದರೂ ಮಾಸ್ಟರ್ ಪ್ಲ್ಯಾನ್ ಮಾಡಬಹುದಾ ಎಂದು ಗೂಗಲ್ ಸರ್ಚ್ ಕೊಟ್ಟೆ.

ಹೌ ಟು ರಿಪೇರ್ ಕ್ರ್ಯಾಕ್ಸ್ ಇನ್ ಪ್ಲಾಸ್ಟಿಕ್ ವಾಟರ್ ಟ್ಯಾಂಕ್ ಎಂದು ಟೈಪಿಸಿದಾಗ.....ಗಮ್ ಟೇಪ್, ಸೀಲ್ ಟೇಪ್, ಎಂಸೀಲ್, ಎಪೋಕ್ಸಿ ಪುಟ್ಟಿ, ಪ್ಲಾಸ್ಟಿಕ್ ಗ್ಲೂ,ಸಿಪಿವಿಸಿ ಸಾಲ್ವೆಂಟ್...... ಹೀಗೆ ಬಿರುಕಿನ ಸೇವೆಗೆ ಸಾಲಾಗಿ ಸಿದ್ದರಾಗಿದ್ದ ವಿದೇಶಿ ಹೆಸರಿನ ಪರಿಚಾರಿಕೆಯರು.... ಚೈನೀಸ್ ರೆಸ್ಟೋರೆಂಟ್ ನ ಮೆನು ಕಾರ್ಡ್ ಕೈಲಿಡಿದಂತೆ ಕುಳಿತೆ. ನನ್ನ ಮುಂದಿದ್ದ ಚಾಯ್ಸ್ ಗಳಲ್ಲಿ ಗಮ್ ಟೇಪ್ ಎಲ್ಲಕ್ಕಿಂತ ಈಸಿ ಸೊಲ್ಯೂಷನ್ ಎನಿಸಿತು. ಅದನ್ನೇ ಆಯ್ಕೆ ಮಾಡಿದೆ. ಶಸ್ತ್ರಚಿಕಿತ್ಸೆಗೂ ಮುನ್ನ ಎನೀಮ ಕೊಟ್ಟು ಹೊಟ್ಟೆ ಬರಿದಾಗಿಸುವಂತೆ ನನ್ನ ಕಾರ್ಯಾಚರಣೆಗಾಗಿ ಟ್ಯಾಂಕ್ ಒಳಗಿನ ನೀರನ್ನು ಖಾಲಿ ಮಾಡಬೇಕಿತ್ತು. ಬೆಳಗಿನ ಸಮಯ ಎಲ್ಲರಿಗೂ ಸ್ನಾನ ಶೌಚದ ಸಮಸ್ಯೆ. ಸಂಜೆಯೇ ಸರ್ಜರಿಗೆ ಬೆಸ್ಟ್ ಟೈಮ್ ಎನಿಸಿತು. ಎರಡು ಗಂಟೆಗಳ ಕಾಲ ಟ್ಯಾಂಕ್ ಬರಿದಾಗುವುದರಿಂದ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಲು ಬಾಡಿಗೆದಾರರ ಬಾಗಿಲು ಬಡಿದು ಸೂಚನೆ ನೀಡಿದೆ. ಕಾಮನಬಿಲ್ಲಿನಂತ ಅವರ ಹುಬ್ಬುಗಳು ಆಕಾರ ಕಳೆದುಕೊಂಡವು.

ಸಂಜೆ ಮಹಡಿ ಏರಿದೆ. ಖಾಲಿ ಟ್ಯಾಂಕ್ ನಲ್ಲಿ ಚಿಲುಮೆಯ ಉಗಮ ಸ್ಥಾನವನ್ನು ಹುಡುಕುವುದು ಅಷ್ಟು ಸುಲಭವಿರಲಿಲ್ಲ. ಸ್ಪೆಕ್ಸ್ ಬೇರೆ ಕೊಂಡೊಯ್ದಿರಲಿಲ್ಲ. ಹೇರ್ ಲೈನ್ ಕ್ರ್ಯಾಕ್ ಅನ್ನು ನನ್ನ ಮಬ್ಬಿನ ಕಣ್ಣುಗಳಲ್ಲಿ ತಡವರಿಸುತ್ತಾ ಗುರುತಿಸುವಲ್ಲಿ ಗಂಟೆಯೊಂದು ಉರುಳಿತ್ತು.ಒಣ ಬಟ್ಟೆಯಿಂದ ಸೀಳು ಭಾಗವನ್ನು ಒರೆಸಿ ಗಮ್ ಟೇಪ್ ನಿಂದ ಸೀಲ್ ಮಾಡಿ ಸುಧಾರಿಸಿಕೊಂಡೆ. ಎರಡು ಗಂಟೆ ಡ್ರೈ ಆಗಲೆಂದು ಬಿಡುವಷ್ಟರಲ್ಲಿ ಬಾಡಿಗೆಯವರ ಮೂರು ಮಿಸ್ಡ್ ಕಾಲ್ ಗಳು. ಟ್ಯಾಂಕ್ ಲೋಡ್ ಮಾಡಿ ಡೌನ್ ವಾಟರ್ ಪೈಪ್ ನಲ್ಲಿ ವಾಚ್ ಮಾಡಿದಾಗ ಲೀಕೇಜ್ ನ ಕುರುಹು ಗೋಚರಿಸದೆ ನೆಮ್ಮದಿ ಎನಿಸಿತು. ಟ್ಯಾಂಕ್ ರೀಪ್ಲೇಸ್ ಮಾಡುವ ಬದಲು ಕೇವಲ ನೂರು ರೂಪಾಯಿಯೊಳಗೆ ಸಮಸ್ಯೆ ಪರಿಹರಿಸಿದ ನನ್ನ ಮಾಸ್ಟರ್ ಬ್ರೈನ್ ಅನ್ನು ನಾನೇ ಅಭಿನಂದಿಸಿದೆ.

ಬೆಳಗ್ಗೆದ್ದು ಪತಿಯೊಂದಿಗೆ ನನ್ನ ಸಾಹಸವನ್ನು ಬಣ್ಣಿಸಿದಾಗ..... ನಸುನಕ್ಕ ಅವರು "ನಿನ್ನ ಗಮ್ ಟೇಪಿಗೆಲ್ಲಾ ಜಗ್ಗಲು ಅದು ಒಂದೂವರೆ ಸಾವ್ರ ಲೀಟರಿನ ಟ್ಯಾಂಕು.... ಫೋರ್ಸ್ ಜಾಸ್ತಿ ಇರುತ್ತೆ. ಬೆಳಿಗ್ಗೆ ವಾಕ್ ಹೊರಟಾಗ ನೋಡ್ದೆ. ಪೈಪ್ ನಲ್ಲಿನ್ನೂ ನೀರು ಇಳೀತಿದೆ.ಸುಮ್ನೆ ಸಾಹಸ ಮಾಡೋಕೋಗಿ ಕೈಕಾಲು ಮುರ್ಕೋಬೇಡ. ಸಂಡೇ ಪ್ಲಂಬರ್ ಬಂದು ಚೆಕ್ ಮಾಡ್ತಾನೆ....."ಎಂದರು. ಹೊರಬಂದು ತೊಟ್ಟಿಕ್ಕುವ ನೀರನ್ನು ಕಂಡಾಗ ಕೆಡುಕೆನಿಸಿತು. ತಿಂಡಿ ಕೆಲಸ ಮುಗಿಸಿ ಮೇಲೇರಿ ಹೋಗಿ ಕ್ರಾಸ್ ಚೆಕ್ ಮಾಡಿದಾಗ ಪತಿಯ ಮಾತು ನಿಜವಾಗಿತ್ತು. ನೀರಿನ ಒತ್ತಡಕ್ಕೆ ಗಮ್ ಟೇಪ್ ನ ಅರ್ಧ ಭಾಗ ಕಳಚಿಕೊಂಡು ಚಿಲುಮೆಯನ್ನು ನೆಮ್ಮದಿಯಾಗಿ ಹರಿಯಬಿಟ್ಟಿತ್ತು. ಅದರ ಇನ್ನರ್ಧ ಭಾಗ ಟ್ಯಾಂಕ್ ಅನ್ನು ಅಪ್ಪಿ ಹಿಡಿದಿತ್ತು.ಸ್ಥೂಲಕಾಯದ ಟ್ಯಾಂಕ್ ನ ಸುತ್ತಳತೆಯನ್ನು ತಬ್ಬಲಾರದೆ ತಬ್ಬಲಿಯಂತೆ ನೇತಾಡುತ್ತಿತ್ತು. ಅದನ್ನು ಕಿತ್ತು ಕೆಳಗೆ ಹಾಕಿದೆ. ಸೀಳು ಭಾಗವನ್ನು ಗಮನಿಸಿದಾಗ ಹೀಟ್ ಮಾಡಿದ ಪ್ಲಾಸ್ಟಿಕ್ ಕಡ್ಡಿಯಿಂದ ಕ್ರ್ಯಾಕ್ ಕ್ಲೋಸ್ ಮಾಡುವ ಹೊಸ ಆಲೋಚನೆಯೊಂದು ಹೊಳೆಯಿತು. ಸಂಡೆಯೊಳಗೆ ಏನಾದರೊಂದು ಮಾಡಿ ನನ್ನ ಸಾಮರ್ಥ್ಯವನ್ನು ಸಾಬೀತುಪಡಿಸಬೇಕಿತ್ತು. ಎಂಸೀಲ್ , ಕ್ಯಾಂಡಲ್, ಪ್ಲಾಸ್ಟಿಕ್ ಸ್ಟಿಕ್, ಮ್ಯಾಚ್ ಬಾಕ್ಸ್ಮುಂತಾದ ಹತಾರಗಳೊಂದಿಗೆ ಮಹಡಿ ಏರಿದೆ. ಈ ಬಾರಿ ಟ್ಯಾಂಕ್ ಖಾಲಿ ಮಾಡುವಾಗ ಬಾಡಿಗೆಯವರಿಂದ ತೀವ್ರ ಕಿರಿಕಿರಿ ಎದುರಿಸಿದೆ. ಲೀಕೇಜ್ ಸರಿ ಮಾಡಲು ಇರುವ ಎಲ್ಲಾ ಚಾಯ್ಸ್ ಗಳನ್ನೂ ಟ್ರೈ ಮಾಡುವ ಉತ್ಸಾಹವಿತ್ತು. ಮಾಹಿತಿ ನೀಡುವ ಮೊಬೈಲನ್ನು ಕೈಲಿರಿಸಿಕೊಂಡಿದ್ದೆ. ಟ್ಯಾಂಕ್ ಬರಿದಾಗಿ ಅರ್ಧ ಗಂಟೆಯಾಗಿತ್ತು. ಕ್ಯಾಂಡಲ್ ಬೆಳಗಿ ಆಪರೇಷನ್ ಗೆ ಚಾಲನೆ ನೀಡಿದೆ. ಸೀಳುಭಾಗದ ಸುತ್ತಲೂ ಸ್ವಲ್ಪವೇ ಕ್ಯಾಂಡಲ್ ನಿಂದ ಶಾಖ ನೀಡಿದಾಗ ಹೊರಮೈ ಮೆತ್ತಗಾಯಿತು. ಬಿಸಿಯಾದ ಪ್ಲಾಸ್ಟಿಕ್ ಕಡ್ಡಿಯಿಂದ ಮೆಲ್ಲನೆ ಅದನ್ನುಜ್ಜಿ ಗ್ಯಾಪ್ ಫಿಲ್ ಮಾಡಲು ಪ್ರಯತ್ನಿಸಿದೆ. ಊಹೂಂ.... ಸಾಧ್ಯವಾಗಲಿಲ್ಲ. ಸಂಜೆಯವರೆಗೂ ಕಾರ್ಯಾಚರಣೆ ಮುಂದುವರಿಯಿತು. ಕೊನೆಗೆ ಎಂಸೀಲ್ ನ ಎರಡು ಬಿಲ್ಲೆಗಳನ್ನು ಚಪಾತಿ ಹಿಟ್ಟಿನಂತೆ ನಾದಿ ಗ್ಯಾಪಿಗೆ ಹಾಗು ಅದರ ಸುತ್ತಲೂ ಪ್ಯಾಕ್ ಮಾಡಿದೆ. ಚೈನಾ ಗೋಡೆಯಂತೆ ನಿರ್ಮಾಣವಾಗಿದ್ದ ದಪ್ಪನೆಯ ಪ್ಯಾಕ್ ಅನ್ನು ತಳ್ಳಿ ನೀರು ಹೊರಬರಲಾರದೆಂದುನನ್ನ ಮನಸ್ಸಿಗೆ ನಾನೇ ಧೈರ್ಯ ಹೇಳಿಕೊಂಡು ಕೆಳಗಿಳಿದೆ. ಮರುದಿನ ಡೌನ್ ವಾಟರ್ ಪೈಪ್ ಬಳಿ ಹೋದಾಗ ಅದು ಕಂಬನಿಗರೆಯುತ್ತಾ ಪ್ಲ್ಯಾನ್ ಫ್ಲಾಪಾಯಿತೆಂದು ತಿಳಿಸಿತು. ' ನಿಲ್ಲಲ್ಲ ....ನಿಲ್ಲಲ್ಲ... ಜಲ ಧಾರೆ.....' ಸುರಿಯುತ್ತಿದ್ದ ನೀರನ್ನೇ ದಿಟ್ಟಿಸುತ್ತಾ ಮನ ಮೂಕವಾಗಿ ರೋದಿಸಿತು.

ಕಳೆದೆರಡು ದಿನಗಳಿಂದ ಮಾಡಿದ್ದ ಎಲ್ಲಾ ಪ್ರಯತ್ನಗಳೂ ನೆಲಕಚ್ಚಿದ್ದವು. ತಲೆಕೂದಲಿನಷ್ಟಿದ್ದ ಸೀಳು ಜಾಗ ಕಿರುಮೀಸೆಯಷ್ಟು ಹಿಗ್ಗಿತ್ತು. ಕಾರ್ಯಾಚರಣೆಯ ಕೊನೆಯ ಪ್ರಯತ್ನ ಎನ್ನುತ್ತಾ ಸಿಪಿವಿಸಿ ಸಾಲ್ವೆಂಟ್

ಸಿಮೆಂಟ್ ಬಾಕ್ಸ್ ಕೈಗೆತ್ತಿಕೊಂಡೆ. ಇದು ಒಂದು ರೀತಿ ಮಂದ ಹಳದಿಯ ದ್ರವ. ಕ್ಲೋರಿನೇಟೆಡ್ ಪಾಲೀ ವೈನಲ್ ಕ್ಲೋರೈಡ್ ಸೊಲ್ಯೂಷನ್. ಇದೇ ನನ್ನ ಈಗಿನ ಪಾಶುಪತಾಸ್ತ್ರ. ಈ ಮಧ್ಯೆ ರಿಪೇರಿ ನೆಪದಿ ಪದೇ ಪದೇ ಟ್ಯಾಂಕ್ ನೀರು ಖಾಲಿ ಮಾಡಿ ಬಾಡಿಗೆಯವರಿಗೆ ಮುಖ ತೋರದಂತಾಗಿದ್ದೆ. ಚಾರಣಕ್ಕೆ ಹೊರಟವಳಂತೆ ಪ್ರತಿದಿನ ನನ್ನ ಹತಾರಗಳೊಂದಿಗೆ ಮಹಡಿ ಹತ್ತಿ ಇಳಿದು ಕೈಕಾಲು,ಸೊಂಟ ಅಲ್ಲಲ್ಲಿ ಉಳುಕಿ ದೇಹವನ್ನು ಅನುಕೂಲಕ್ಕೆ ತಕ್ಕಂತೆ ಬಾಗಿಸಿ ಕುಂಟುತ್ತಿದ್ದೆ. ಉತ್ಸಾಹ ಕ್ಷೀಣಿಸಿದ್ದರೂ ಮಾಡಿದ್ದ ಅನಾಹುತವನ್ನು ಸರಿಪಡಿಸುವ ಜರೂರಿತ್ತು.

ಯೂಟ್ಯೂಬ್ ಗೈಡ್ ಲೈನ್ಸ್ ಸೂಚಿಸಿದಂತೆ ಮೊದಲಿಗೆ ಸೀಳು ಜಾಗವನ್ನು ಸ್ವಚ್ಛಗೊಳಿಸಬೇಕಿತ್ತು. ಮೊದಲ ಹಂತದ ಪ್ರಯೋಗದಲ್ಲಿ ಪಾಲ್ಗೊಂಡು ಫೇಲ್ಯೂರ್ ಆಗಿದ್ದ ಎಂಸೀಲ್ ಅನ್ನು ಹೆಕ್ಸಾ ಬ್ಲೇಡಿನಿಂದ ಕೆತ್ತಿ ತೆಗೆದೆ. ಸೀಳು ಜಾಗ ಹಿಗ್ಗಿ ಟ್ಯಾಂಕಿನ ಒಳಭಾಗದ ದರ್ಶನವನ್ನು ಅಸ್ಪಷ್ಟವಾಗಿ ಮಾಡಿಸಿತು. ಹೇರ್ ಲೈನ್ ಕ್ರ್ಯಾಕ್ ಹೋಗಿ ಹೇರ್ ಪಿನ್ ಗ್ಯಾಪ್ ಆಗಿತ್ತು.ಅದರ ಸುತ್ತಲೂ ಲೈಟ್ ಆಗಿ ಉಜ್ಜುತ್ತಾ ಬಂದೆ. ಆ ಪ್ರಕ್ರಿಯೆಯಲ್ಲಿ ಉದುರುವ ಪ್ಲಾಸ್ಟಿಕ್ ಪುಡಿಯನ್ನು ಸಿಪಿವಿಸಿ ಸಾಲ್ವೆಂಟ್ ನೊಂದಿಗೆ ಬೆರೆಸಬೇಕಿತ್ತು. ಬಾಕ್ಸ್ ಓಪನ್ ಮಾಡಿ ಅದರ ಹಿಡಿಗೆ ಅಟ್ಯಾಚ್ ಆಗಿದ್ದ ಬ್ರಶ್ ನಿಂದ ಮೊದಲು ಟ್ಯಾಂಕ್ ನ ಅಫೆಕ್ಟೆಡ್ ಏರಿಯಾಗೆ ಪ್ರೈಮರ್ ಕೋಟ್ ಬಳಿದೆ. ನಂತರ ಪ್ಲಾಸ್ಟಿಕ್



ಪುಡಿಯೊಂದಿಗೆ ಬೆರೆಸಿದ ಸಿಪಿವಿಸಿ ಸಾಲ್ವೆಂಟ್ ಅನ್ನು ಅಪ್ಲೈ ಮಾಡಿದೆ. ಪರಿಹಾರಕ್ಕಾಗಿ ನನ್ನ ಬಳಿಯಿದ್ದ ಎಲ್ಲಾ ಆಯ್ಕೆಗಳೂ ಮುಗಿದಿದ್ದವು. ಮೇಜರ್ ಸರ್ಜರಿಗೊಳಗಾಗಿ ಕಲೆನಿಂತ ಹೊಲಿಗೆ ಗುರುತಿನಂತೆ ಪ್ಯಾಚ್ ವರ್ಕ್ ಎದ್ದು ಕಾಣುತ್ತಿತ್ತು. ಹೇಗೋ ......ಲೀಕೇಜ್ ನಿಂತರೆ ಸಾಕಾಗಿತ್ತು. ಅದರ ಸುತ್ತಲೂ ಚೊಕ್ಕಟಗೊಳಿಸಿ ಕುಂಟುತ್ತಲೇ ಕೆಳಗಿಳಿದು ಬಂದೆ. ಎರಡು ಗಂಟೆಗಳ ನಂತರ ಟ್ಯಾಂಕ್ ಲೋಡ್ ಮಾಡಿದೆ. ಗಳಿಗೆಗೊಮ್ಮೆ ಡೌನ್ ವಾಟರ್ ಪೈಪ್ ಗಮನಿಸುತ್ತಿದ್ದೆ. ರಾತ್ರಿಯಾದರೂ ಆತಂಕ ಪಡುವಂತದ್ದೇನೂ ಕಾಣಲಿಲ್ಲ. ಸಮಾಧಾನಗೊಂಡ ಮನ ಅಂದು ನೆಮ್ಮದಿಯಾಗಿ ಮಲಗಿ ನಿದ್ರಿಸಿತು.

ಬೆಳಿಗ್ಗೆ ಎಚ್ಚರವಾದಾಗ ಸಮಯ ಐದೂವರೆ. ಹೊರಹೋಗಲು ಇನ್ನೂ ಕತ್ತಲಿತ್ತು. ಹಾಗೇ ಹೊರಳಾಡುತ್ತಾ ಸೈಲೆಂಟ್ ನಲ್ಲಿರಿಸಿದ್ದ ಮೊಬೈಲ್ ಕೈಗೆತ್ತಿಕೊಂಡೆ. ಮೂರು ಮಿಸ್ಡ್ ಕಾಲ್ ಗಳು ....... ಬಾಡಿಗೆಯವರಿಂದ. ಐದು ನಿಮಿಷದ ಕೆಳಗೆ ಸತತವಾಗಿ ಮೂರು ಬಾರಿ ಪ್ರಯತ್ನಿಸಿದ್ದು ದಾಖಲಾಗಿತ್ತು. ಇಷ್ಟು ಬೆಳಿಗ್ಗೆಯೇ ಏನಾಯ್ತಪ್ಪಾ ಇವರಿಗೆ...? ಎನಿಸಿತು. ತಟ್ಟನೆ ಲೀಕೇಜ್ ಕಾರ್ಯಾಚರಣೆ ನೆನಪಾಗಿ ಅಪಾಯದ ಅಲಾರ್ಮ್ ಮೊಳಗಿತು. ಅಳುಕುತ್ತಲೇ ರಿಂಗ್ ಮಾಡಿದೆ. ಕರೆ ಸ್ವೀಕರಿಸಿದ ಗಂಡಸು " ಹಲೋ... ಗುಡ್ ಮಾರ್ನಿಂಗ್ ಎನ್ನುವ ಯಾವ ಶಿಷ್ಟಾಚಾರಕ್ಕೂ ಒಳಗಾಗದೆ ಡೈರೆಕ್ಟ್ ಆಗಿ ಚಾರ್ಜ್ ಮಾಡಿದ. " ಏನ್ ಮೇಡಂ ಇದು.....ಯಾವ ಟ್ಯಾಪಲ್ಲೂ ನೀರು ಬರ್ತಿಲ್ಲ.... ಒಂದ್ ವಾರದಿಂದ ಇದೇ ಗೋಳಾಯ್ತು ನಿಮ್ದು.....ಅದೇನ್ ಪ್ರಾಬ್ಲಮ್ಮು ಅಂತ ನೋಡ್ಬಾರ್ದಾ... ಇಲ್ಲಿ ಟಾಯ್ಲೆಟ್ ಗೂ ನೀರಿಲ್ಲ..." ಅಬ್ಬರಿಸಿದ. ಬಹುಶಃ ಟಾಯ್ಲೆಟ್ ನಲ್ಲೇ ಕರೆ ಸ್ವೀಕರಿಸಿರಬೇಕು. ಎಕೋ ಬೇರೆ ಬರ್ತಿತ್ತು. ಅವನ ಬೈಗುಳವೂ ಎಕೋ ಆಗಿ ಎರಡೆರಡು ಬಾರಿ ಅಪ್ಪಳಿಸಿತು. ತಲೆ ಏನೂ ಓಡದೆ ಫೋನ್ ಹಿಡಿದು ಹಾಗೆಯೇ ಮ್ಯೂಟ್ ಆಗಿದ್ದೆ. ನನ್ನ ಪೆಚ್ಚು ಮುಖವನ್ನು ಕಂಡು ನನ್ನವರು ಏನೋ ಗ್ರಹಿಸಿದವರಂತೆ ಹೊರಹೋದರು. ಟ್ಯಾಂಕ್ ಗೆ ಮಾಡಿದ್ದ ಉಪಚಾರ ವ್ಯರ್ಥವಾಗಿ ಸೀಳು ಭಾಗ ಊರು ಬಾಗಿಲಿನಂತಾಗಿತ್ತು. ರಾತ್ರಿ ಇಡೀ ನೀರು ಸೋರಿ ಹೋಗಿ ಟ್ಯಾಂಕ್ ಬರಿದಾಗಿತ್ತು. ಮತ್ತೆ ಟ್ಯಾಂಕ್ ತುಂಬಿಸಿದರೂ ಉಪಯೋಗವಿರಲಿಲ್ಲ. ಕೆಳಗಿಳಿದು ಬಂದು ವಿವರಿಸಿದ ನನ್ನವರ ನೋಟ ಎದುರಿಸಲಾಗದೆ ಉಳುಕಿದ್ದ ಕೈಕಾಲುಗಳನ್ನು ನೀವಿಕೊಳ್ಳುತ್ತಾ ತಲೆತಗ್ಗಿಸಿದೆ. ಬೆಳಗಿನ ಕಾಫಿಯನ್ನೂ ಸವಿಯದೆ ಪ್ಲಂಬರ್ ಕರೆತರಲು ಹೊರಹೋಗುತ್ತಿದ್ದ ಪತಿಯನ್ನು ಕಂಡು ಮರುಕವಾಯಿತು.

## ಏನು ಮಜಾ....! ಹೊದಿಕೆಯ ಸಾಮ್ರಾಜ್ಯ.....!!

ಮಲಗುವಾಗ ಹೊದ್ದು ಮಲಗುವ, ಹೊದೆಯದೆ ಮಲಗುವ ಹಾಗು ಅರ್ಧಂಬರ್ಧ ಹೊದ್ದು ಮಲಗುವ ಎಂಬ ಮೂರು ಕೆಟಗರಿಯ ಜನರಿರುತ್ತಾರೆ. ಇವರನ್ನು ಕವರ್ಡ್, ಸೆಮೀಕವರ್ಡ್ ಹಾಗು ಫುಲ್ಲೀ ಕವರ್ಡ್ ಎಂದು ವಿಂಗಡಿಸಬಹುದು. ಕವರ್ಡ್ (ಪುಕ್ಕಲು) ಸ್ವಭಾವದವರು ಸಾಮಾನ್ಯವಾಗಿ ಫುಲ್ಲೀ ಕವರ್ಡ್ ಆಗಿರಲು ಬಯಸುವರು. ಹೆದರಿಕೆಗೆ ಹೊದಿಕೆಯದೇ ಸಾರಥ್ಯ !! ಕೆಲವರಿಗೆ ಮೈಯೆಲ್ಲಾ ಗಾಳಿಯಾಡಿಸುತ್ತಾ ಕೊರೆಯುವ ಚಳಿಯಲ್ಲೂ ಫ್ಯಾನ್ ಕೆಳಗೆ ಮೈಯೊಡ್ಡಿಕೊಂಡು ಮಲಗುವ ರೂಢಿ. ಇನ್ನು ಕೆಲವರಿಗೆ ಅರ್ಧಂಬರ್ಧ ಹೊದ್ದು ತಲೆಯನ್ನೋ ಪಾದವನ್ನೋ ಹೊರಗೆ ಇಣುಕಿಸುವ ಇರಾದೆ. ಹೊರಹಾಕಲ್ಪಟ್ಟ ಪಾದ ಸೂಚಿಸುವ ವೆದರ್ ರಿಪೋರ್ಟ್ ಗೆ ಅನುಗುಣವಾಗಿ ಹೊದಿಕೆಯ ಹಿಗ್ಗುವಿಕೆ ಹಾಗು ಕುಗ್ಗುವಿಕೆ ನಿಗದಿಯಾಗುವುದು. ನನಗಂತೂ ನೀವೇನೇ ಹೇಳಿ ಹೊರಗಿನ ತಾಪಮಾನ ಹೇಗೇ ಇರಲಿ ಮುಖದ ತುಂಬಾ ರಗ್ಗು ಕವುಚಿಕೊಂಡು ದೇಹವನ್ನು ಮುದುರಿ ಇಂಟೀರಿಯರ್ ನಲ್ಲಿ ನನ್ನ ಶ್ವಾಸದಿಂದ ಇನ್ನಷ್ಟು ಶಾಖೋತ್ಪತ್ತಿ ಮಾಡಿಕೊಂಡು ಮಲಗುವುದೆಂದರೆ ಬಹಳ ಪ್ರಿಯ. ಉಸಿರುಕಟ್ಟಿ ಎಂಜಿನ್ ಆಫ್ ಆಗ್ಬಿಟ್ಟೀತು, ಸ್ವಲ್ಪನಾದ್ರೂ ಗಾಳಿಯಾಡಲು ಜಾಗ ಬಿಟ್ಕೋ ಎಂದು ನನ್ನ ಪತಿ ಆಗಾಗ ಎಚ್ಚರಿಸುವರು.

ಕೆಲವು ಮಂದಿಗೆ ಹೊದ್ದರೆ ಶೆಖೆ ಹೊದೆಯದಿರೆ ಚಳಿ, ಉಂಡರೆ ಉಬ್ಬಸ ಹಸಿದರೆ ಸಂಕಟ ಎನ್ನುವಂತವರು. ಇವರು ಆಗಾಗ ಹೊದೆಯುವುದು ನಂತರ ಒದೆಯುವುದು (ಹೊದಿಕೆಯನ್ನು) ಈ ಕೈಂಕರ್ಯದಲ್ಲಿ ತೊಡಗಿ ಮಗ್ಗುಲಿನ ಮಂದಿಗೂ ಒಮ್ಮೊಮ್ಮೆ ಪಾದಸೇವೆಯ ಪ್ರಸಾದ ಕರುಣಿಸುವರು. ಇವರನ್ನು ಪಾರ್ಟ್ ಟೈಮ್ ಕವರ್ಡ್ ಎನ್ನಬಹುದು. ಇವರ ಹೊದಿಕೆಗಳು ಅರೆಕಾಲಿಕ ಸೇವೆ ಮುಗಿಸಿ ಆಗಾಗ ಕಿಕ್ಕಿಸಿಕೊಂಡು ಪಾದದ ಕೆಳಗೆ ಬಿದ್ದು ಮುಂದಿನ ಆದೇಶದವರೆಗೂ ಮುದುರಿ ಕುಳಿತಿರುತ್ತವೆ.

ಕಾಲಗಳಲ್ಲೆಲ್ಲಾ ನನಗೆ ಪ್ರಿಯವಾದದ್ದು ಚಳಿಗಾಲ. ಕೊರೆಯುವ ಚಳಿಯಲ್ಲಿ ಎರಡೆರಡು ರಗ್ಗು ಹೊದ್ದು ನನ್ನ ಬಾಡಿಯನ್ನು ಅದರೊಳಗೆ ಸೀಲ್

ಮಾಡಿಕೊಳ್ಳುವ ಆನಂದ ಆಹಾ..!! ಏನು ಮಜಾ ...ರಗ್ಗಿನ ಸಾಮ್ರಾಜ್ಯ' ಹಾಸಿಗೆ ಇದ್ದಷ್ಟು ಕಾಲು ಚಾಚು ' ಎಂಬ ಗಾದೆ ಮಾತಿದೆ. ಆದರೆ ನನ್ನ ಕಾಲು ಎಂದಿಗೂ ಹಾಸಿಗೆಯ ತುದಿಯವರೆಗೂ ನೀಡಿಕೊಂಡಿದ್ದೇ ಇಲ್ಲ.' ಬೇಸಿಗೆ ಇದ್ದರೂ ಹೊದ್ದು ಮಲಗು ' ಸಂಸ್ಕೃತಿಯವಳಾದ ನಾನು ನಮ್ಮ ಏಳು ಬೈ ಏಳು ಅಳತೆಯ ಮಂಚದಲ್ಲಿ ಐದು ಬೈ ಐದು ಅಳತೆಯನ್ನು ನಾನು, ನನ್ನ ರಗ್ಗು ಆಕ್ರಮಿಸಿಕೊಂಡಿರುತ್ತೇವೆ. ದೇಹವನ್ನು ವೃತ್ತಾಕಾರವಾಗಿ ಮುದುರಿಕೊಂಡು ಮಗ್ಗುಲಿಗೆ ತಿರುಗಿ ರಗ್ಗನ್ನಪ್ಪಿ ಮಲಗಿದರೆ ಸ್ವರ್ಗಕ್ಕೆ ಮೂರೇ ಗೇಣು. ಪಕ್ಕದಲ್ಲಿ ಮಲಗಿದವರದ್ದು ಪಾಡೇ ಪಾಡು ಸುಖೀ ದಾಂಪತ್ಯಕ್ಕೆ ಪತಿ ಪತ್ನಿ ಒಂದೇ ಹೊದಿಕೆಯೊಳಗೆ ಮಲಗುವುದು ಸೂಕ್ತ ಎಂದು ವಾಸ್ತು ಶಾಸ್ತ್ರಜ್ಞರು ಅಭಿಪ್ರಾಯಪಡುವರು. ಆದರೆ ವಿಭಿನ್ನ ಅಭಿರುಚಿ ಹಾಗು ಮನಸ್ಥಿತಿಯ ದಂಪತಿಗಳು ಹೊದಿಕೆಯಿಂದ, ಹೊದಿಕೆಗಾಗಿ, ಹೊದಿಕೆಗೋಸ್ಕರವೇ ಕಿತ್ತಾಡಿದರೆ ಪ್ರಜಾಪ್ರಭುತ್ವದ ದುರ್ಬಳಕೆಯಾದಂತೆಯೇ ಸರಿ. ಈ ಮುಸುಕಿನೊಳಗಿನ ಗುದ್ದಾಟದಲ್ಲಿ ಹೊದಿಕೆ ತೆಳ್ಳನೆಯದೋ ತುಪ್ಪಳದ್ದೋ...., ಅದಕ್ಕೆ ಫ್ಯಾನ್ ಬೇಕೋ ಬೇಡವೋ...., ಸೊಳ್ಳೆ ಪರದೆಯೋ ಲಿಕ್ವಿಡೇಟರೋ...., ಹೊದ್ದ ಹೊದಿಕೆ ಕಾಲನ್ನು ಕವರ್ ಮಾಡಬೇಕೋ ಬೇಡವೋ ಎಂಬ ವಿಷಯಗಳಲ್ಲಿ ಒಮ್ಮತಕ್ಕೆ ಬರಲಾರದೆ, ಅದೇ ಕಲಹಕ್ಕೆ ಮುನ್ನುಡಿಯಾಗಿ ಬೇರೆ ಬೇರೆ ರೂಮುಗಳಿಗೆ ಶಿಫ್ಟ್ ಆಗುವ ಬದಲು ಅವರ ಅಭಿರುಚಿಗೆ ತಕ್ಕಂತೆ ವಿಭಿನ್ನ ಹೊದಿಕೆಯೊಳಗೆ ಅಲಂಕೃತರಾಗುವುದೇ ಒಳಿತಲ್ಲವೇ...?

ಜಗತ್ತು ಸೊಫಿಸ್ಟಿಕೇಟೆಡ್ ಸಂಸ್ಕೃತಿಗೆ ತೆರೆದುಕೊಂಡಂತೆ ಕುರಿಯ ಕಂಬಳಿ , ರಗ್ಗುಗಳ ಜಮಾನಾ ಮುಗಿದು ರೇಶ್ಮೆಯಂತೆ ನುಣುಪಾದ ಬಣ್ಣ ಬಣ್ಣದ ಬ್ಲಾಂಕೆಟ್ , ರ್‍ಯಾಬಿಟ್ ರಗ್ಗುಗಳ ಎರಾ ಪ್ರಾರಂಭವಾಯಿತು.ಈ ಟೆಡ್ಡಿಬೇರಿನಂತ ಬ್ಲಾಂಕೆಟ್ ಗಳಲ್ಲಿ ಕಂಬಳಿ , ರಗ್ಗಿನಂತೆ ಚುಚ್ಚುವ ರಗಳೆಯಿರಲಿಲ್ಲ. ಕಂಬಳಿಯೊಳಗೊಂದು ಕಾಟನ್ ಹೊದಿಕೆ ಇದ್ದರೂ ನಿದ್ರೆಯಲ್ಲಿ ಒದ್ದಾಡುವಾಗ ಹೊದಿಕೆ ಅತ್ತಿತ್ತ ಸರಿದು ಸ್ಯಾಂಡ್ ಪೇಪರ್ ನಿಂದ ತಿಕ್ಕಿದ ಅನುಭವವಾಗುತ್ತಿತ್ತು. ಮೊಲದಂತೆ ನವಿರಾದ, ಹತ್ತಿಯಂತೆ ಮೃದುವಾದ ಬ್ಲಾಂಕೆಟ್ ಗಳು ಮಾರ್ಕೆಟ್ ಗೆ ಬಂದದ್ದೇ , ಮೈಗಪ್ಪಿ ಬಿಸಿಯೇರಿಸುವ ಈ ಬಣ್ಣದ ಬೆಡಗಿಯರಿಗೆ ಭರ್ಜರಿ ಬೇಡಿಕೆ ಬಂತು. ಪಾರ್ಟ್ ಟೈಮ್ ಹೊದೆಯುವ ಮಂದಿಯೂ ಇವುಗಳ ಖಾಯಂ ಭಕ್ತರಾದರು. ಈ ಬೆಡಗಿಯರು ಆಗಾಗ ವಾಶಿಂಗ್ ಮಶೀನ್ ನೊಳಗೆ ಕಂಫರ್ಟ್ ನ ಸಖ್ಯದಲ್ಲಿ ಮಿಂದೆದ್ದು ಹಿತವಾದ ಪರಿಮಳದಿಂದ ದೇಹಕ್ಕೂ ಮನಸ್ಸಿಗೂ ಮುದ ನೀಡತೊಡಗಿದರು. ಔಟ್ ಡೇಟೆಡ್ ಆದ ಕಂಬಳಿಯ ದಾರಗಳು ರಾಜಮಾರ್ಗದಿಂದ ಸರಿದು ಕಾಲುದಾ(ರಿ)ರಗಳಾದವು. ಬಣ್ಣದ ಬೆಡಗಿಯರ ಪಾದಸೇವೆಗೈಯುತ್ತಾ ದೃಷ್ಟಿ ನಿಗ್ರಹಕ್ಕಷ್ಟೇ ಸೀಮಿತವಾದವು.

ಕೆಲವರಿಗೆ ಹೊದಿಕೆಯೊಳಗೆ ಶ್ವಾನಗಳನ್ನಪ್ಪಿ ಮಲಗುವ ಅಭ್ಯಾಸವಿರುತ್ತದೆ. ಸಂಗಾತಿಯೊಂದಿಗೆ ಕಿತ್ತಾಟವಾದಾಗ ಸಾಕುಪ್ರಾಣಿಗಳಿಗೆ ಆ ಭಾಗ್ಯ. ಪ್ರಾಣಿಗಳಿಗೆ ಮೇಲ್ಭಾಗದಲ್ಲಿ ನೈಸರ್ಗಿಕವಾದ ತುಪ್ಪಳದ ಫೆಸಿಲಿಟಿ ಇದ್ದು ತಳಭಾಗದ ಬೆತ್ತಲೆ ಭಾಗಕ್ಕಷ್ಟೇ ಹೊದಿಕೆಯ ನೆಸೆಸಿಟಿ ಇರುವುದು. ಹಾಗಾಗಿ ಅವುಗಳ ಕಾನ್ಸಂಟ್ರೇಷನ್ ಏನಿದ್ದರೂ ಬೆಚ್ಚಗಿನ ಬೇಸ್ ಕಡೆಗೆ. ಬೀದಿ ನಾಯಿಗಳು ಮರಳುಗುಡ್ಡೆಯಲ್ಲಿ ಗುಂಡಿ ತೋಡಿ ಅದರೊಳಗೆ ಇಳಿದು ಮುದುರಿಕೊಳ್ಳುತ್ತವೆ. ನಮ್ಮ ಸಾಕು ನಾಯಿ ವೀನಸ್, ಕೆಳಗೆ ಹಾಸಿದ ಬ್ಲ್ಯಾಂಕೆಟ್ ಮೇಲೆ ಮಲಗಿ ಸೈಡಿನ ಎಕ್ಸ್ ಟ್ರಾ ಭಾಗವನ್ನು ಮುದುರಿ ಕಪ್ಪೆ ಗೂಡಿನಂತೆ ಮಾಡಿಕೊಂಡು ಅದರೊಳಗೆ ತನ್ನ ಮುಖವನ್ನು ತೂರಿಸಿ ಮೂಗಿಗೆ ಬೆಚ್ಚನೆಯ ಕವರೇಜ್ ಕಲ್ಪಿಸಿಕೊಳ್ಳುವನು. ದಾವಣಿಗಳು ಸೀರೆಗಳ ಮಿನಿಯೇಚರ್ ಇದ್ದಂತೆ ಶಾಲುಗಳು ಬ್ಲಾಂಕೆಟ್ ಗಳ ಮಿನಿಯೇಚರ್ ಗಳು. ಈ ಶಾಲುಗಳು ಮನೆಯಿಂದ ಹೊರಗೆ ಬಳಕೆಯಾಗುವುದೇ ಹೆಚ್ಚು. ಯುವಕರು ಹೆಚ್ಚಾಗಿ ಜಾಕೆಟ್ ,ಸ್ವೆಟರ್ಸ್ ಬಳಸುವುದರಿಂದ ಇವು ವೃದ್ದರ ಸಾಮಾನ್ಯ ಔಟ್ ಫಿಟ್ ಗಳು. ಸಾಹಿತಿಗಳನ್ನೂ, ಸಾಧಕರನ್ನೂ ಸನ್ಮಾನಿಸಲು ಸಮಾರಂಭಗಳಲ್ಲೂ ಹೆಚ್ಚಾಗಿ ಶಾಲುಗಳು ಬಳಕೆಯಾಗುವುವು. ವೇದಿಕೆಯ ಮುಂಭಾಗದ ಪ್ಲಾಸ್ಟಿಕ್ ಚೇರಿನ ಮೇಲೆ ಸಾಧಕರನ್ನು ಕೂರಿಸಿ ತ್ರಿಕೋನಾಕಾರದ ಶಾಲನ್ನು ಕತ್ತಿನ ಸುತ್ತ ಸ್ಕೌಟ್ಸ್ ಅಂಡ್ ಗೈಡ್ಸ್ ನವರ ನೆಕ್ಕರ್ ಚೀಫ್ ನಂತೆ ಸುತ್ತಿ ಅದರ ಮಧ್ಯಕ್ಕೊಂದು ಮಣಿ ಹಾರವನ್ನೇರಿಸಿ ಅವರ ಘನಕಾರ್ಯಗಳನ್ನು ಮೈಕಿನಲ್ಲಿ ಬಣ್ಣಿಸುವಾಗ ಅವರು ಸಂತೋಷದಿಂದ ದ್ರವಿಸಿ ಹೋಗುವರು. ಅದೇ ಶಾಲಿನಿಂದ ಬೆವರೊರೆಸಿಕೊಳ್ಳುತ್ತಾ ಕೆಳಭಾಗದಲ್ಲಿ ಪೇಪರ್ ತ್ಯಾಜ್ಯದೊಂದಿಗೆ ಪ್ಯಾಕ್ ಆದ ಭಾರವಲ್ಲದ ಹಣ್ಣಿನ ಬುಟ್ಟಿಯೊಂದಿಗೆ ತಡವರಿಸುತ್ತಾ ಕೆಳಗಿಳಿಯುವರು.

ಇನ್ನು ' ಮಫ್ಲರ್ ' ಎಂಬ ತಲೆ ಹೊದಿಕೆ ಇಂದಿನ ಜನರೇಶನ್ ನವರಿಗೆ ಅಪರಿಚಿತವಾದ ಉಲ್ಲನ್ನಿನ ವಸ್ತ್ರ. ಇದು ಸೀರೆಯಂತೆ ಯಾವ ಹೊಲಿಗೆಯ ಬಂಧಕ್ಕೂ ಕಟ್ಟು ಬೀಳದೆ ಇರುವಂತದ್ದು. ಇದನ್ನು ಅನುಕೂಲಕ್ಕೆ ತಕ್ಕಂತೆ ತಲೆ, ಕಿವಿ ಕುತ್ತಿಗೆಗೆ ಸುತ್ತಿಕೊಳ್ಳಬಹುದು. ಹಿಂದೆ ಮುಖಮರೆಸಿಕೊಂಡು ಓಡಾಡುವ ಮಂದಿಗೆ ಇವು ಅನುಕೂಲಕರವಾಗಿದ್ದವು. ಇದರಲ್ಲೇ ಸ್ವಿಚ್ಡ್ ಒನ್ಸ್ ಎಂದರೆ ಮಂಕಿ ಕ್ಯಾಪ್ ಗಳು. ಇವು ಮಫ್ಲರ್ ಗಿಂತಲೂ ಉತ್ತಮವಾದ ತಲೆಯ ಸಿದ್ದ ಹೊದಿಕೆಗಳು. ಮಂಕಿ ಕ್ಯಾಪ್ ನ ಮೇಲ್ಭಾಗದಲ್ಲಿ ಒಂದು ಉಲ್ಲನ್ನಿನ ಗೊಂಡೆ (ಕುಚ್ಚು) ಇರುತ್ತಿತ್ತು. ಅದನ್ನು ನೋಡಿದರೆ ಎಂತವರಿಗಾದರೂ ಒಮ್ಮೆ ಆ ಗೊಂಡೆಯನ್ನು ಎಳೆಯುವಂತೆ ಪ್ರಚೋದನೆ ಆಗುತ್ತಿತ್ತು. ಹೀಗೆ ಮಂಕಿಗಳ ಆಕ್ರಮಣಕ್ಕೊಳಗಾದ ಮಂಕಿ ಕ್ಯಾಪ್ ಗಳು ಶೇಪ್ ಲೆಸ್ ಆಗಿ ಧರಿಸಿದವರಿಗೆ ಮುಜುಗರ ನೀಡುತ್ತಿದ್ದವು. ಕ್ಯಾಪ್ ಅಟ್ಯಾಚ್ ಆದ ಜಾಕೆಟ್ ಗಳು ಬಂದಂತೆ ಇವೆಲ್ಲ ಔಟ್ ಡೇಟೆಡ್ ಆದವು.

ಗರ್ಭದೊಳಗಿನ ಶಾಖವನ್ನು ಹೊರಗೂ ಮೇನ್ಟೇನ್ ಮಾಡಲು ನವಜಾತ ಶಿಶುಗಳನ್ನು ಮೆತ್ತಗಿನ ಬಟ್ಟೆಯ ಹೊದಿಕೆಯಲ್ಲಿ ಬಿಗಿಯಾಗಿ ಸುತ್ತುವರು. ಅಚ್ಚರಿಯಿಂದ ಬಣ್ಣದ ಪ್ರಪಂಚ ನೋಡುತ್ತಾ ಹೊಸ ಅನುಭವದೊಂದಿಗೆ ಕೈಕಾಲಾಡಿಸಿಕೊಂಡು , ಸೈಕಲ್ ಹೊಡ್ಕೊಂಡಿದ್ದ ಕೂಸುಗಳು ಸೀಜ್ ಆದ ಬಾಡಿಯನ್ನು ಹೊದಿಕೆಯಿಂದ ಹೊರತರಲಾರದೆ ಬಣ್ಣ... ಹೊಸದಾಗಿದೇ.. ಬಂಧ... ಬಿಗಿಯಾಗಿದೇ... ಎನ್ನುತ್ತಾ ಮುಲುಕಿ, ವಿಸರ್ಜನೆಗಳೆಂಬ ಅಸ್ತ್ರ ಪ್ರಯೋಗಿಸುತ್ತವೆ. ಶುಚಿಗೊಳಿಸಲು ಹೊದಿಕೆ ಕಳಚಿದ ಕೂಡಲೇ ಸಂತೋಷದಿಂದ ಸ್ಪ್ರಿಂಗಿನಂತೆ ಕೈಕಾಲುಗಳನ್ನು ಮಡಚಿಕೊಳ್ಳುತ್ತವೆ.

ಬದುಕಲು ಆಸರೆಯೂ ಇಲ್ಲದೆ ನೆಲೆಸಲು ಮನೆಯೂ ಇಲ್ಲದೆ ತ್ಯಾಜ್ಯ , ಚಿಂದಿ ಆಯಲು ಬರುವ ಮಂದಿಗೆ ಭೂರಮೆಯೇ ಹಾಸಿಗೆ, ಆಕಾಶವೇ ಹೊದಿಕೆಯಾದರೆ , ಕಾಂಡಿಮೆಂಟ್ಸ್, ಸ್ವೀಟ್ಸ್ ಸ್ಟಾಲ್ ಗಳಲ್ಲಿ ಬೆಳ್ಳಿಯ ಹೊದಿಕೆ, ಜರ್ಮನ್ ಕಾಗದಗಳನ್ನು ಹೊದ್ದು ಅಲಂಕೃತಗೊಂಡ ಸೊಫೆಸ್ಟಿಕೇಟೆಡ್ ಸ್ವೀಟುಗಳದ್ದು ಬಹುತ್ ಖುಷ್ ನಸೀಬು ಬಿಡಿ. ಹಣ್ಣಿನಂಗಡಿಗಳಲ್ಲಿ ಸೇಬುಗಳೂ ಚಿತ್ತಾರದ ಹೊದಿಕೆ ಹೊದ್ದು ಕಾನ್ವೆಂಟ್ ಗೆ ಹೊರಟ ಕೂಸುಗಳಂತೆ ರೆಡಿಯಾಗಿರುತ್ತವೆ. ಜನರ ಬೇಡಿಕೆಗಳಿಗೆ ಸ್ಪಂದಿಸದ ಸರ್ಕಾರವನ್ನು ಕಂಬಳಿ ಹೊದ್ದು ಮಲಗಿದೆ ಎಂದು ವಿರೋಧ ಪಕ್ಷದವರು ಟೀಕಿಸುವರು. ಈ ಮುಸುಕಿನೊಳಗಿನ ಗುದ್ದಾಟ ದ್ವಿಪಕ್ಷಗಳ ನಡುವೆ ಸರ್ವೇ ಸಾಮಾನ್ಯ. ಯಾವುದೇ ಪಕ್ಷ ಆಡಳಿತಕ್ಕೆ ಬಂದರೂ ಹೊದ್ದು ಮಲಗುವ ಸಂಪ್ರದಾಯ ತಪ್ಪದು ಬಿಡಿ. ವಿಭಕ್ತ ಕುಟುಂಬಗಳಲ್ಲಿ ಇತ್ತೀಚೆಗೆ ಸಂಬಂಧಗಳೂ ಮುಸುಕೆಳೆದು ಮಲಗಿರುತ್ತವೆ. ಈ ದೇಹ ಮೂಳೆ ಮಾಂಸದ ತಡಿಕೆ , ಇದರ ಮೇಲಿದೆ ತೊಗಲಿನ ಹೊದಿಕೆ ಎಂದು ಭಕ್ತ ಕುಂಬಾರ ಹಾಡಿದರೆ, ಆತ್ಮವೆಂಬ ಜ್ಯೋತಿಗೆ ದೇಹವೇ ಹೊದಿಕೆ ಎಂದರು ಮಹಾತ್ಮರು. ಹೊದಿಕೆಗಳನ್ನು ಕಳಚಿ ಹೊರಡಲು ಕರೆ ಬರುವವರೆಗೂ ಈ ದೇಹವನ್ನು ಬೆಚ್ಚಗಿಟ್ಟು , ಹೊದಿಕೆ



# ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದ ಸಂಭ್ರಮ

ವಿನೋದ್ ಶಾಂಸುಂದರ್, ನ್ಯೂ ಜರ್ಸಿ

**ನ್ಯೂ** ಜರ್ಸಿಯ ಶ್ರೀಕೃಷ್ಣ ವೃಂದಾವನದಿ
ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದ ಸಂಭ್ರಮ
- "ಕಾಂತಾರ" ಸ್ಟೈಲ್ !!!

ನಾವೆಲ್ಲರೂ ಶ್ರೀ ಶ್ರೀನಿವಾಸ ಕಲ್ಯಾಣವನ್ನು ಹತ್ತಾರು ಬಾರಿ ನೋಡಿದ್ದೇವೆ. . ದೇವಸ್ಥಾನಗಳಲ್ಲಿ ಹಾಗೂ ಮನೆಗಳಲ್ಲಿ ಕೂಡಾ ! ಆದರೆ "ಕಾಂತಾರ" ಪ್ರಭಾವದ ಶ್ರೀನಿವಾಸ ಕಲ್ಯಾಣ ನೋಡಿರಲಿಕ್ಕಿಲ್ಲ...ಅಲ್ಲವೇ??

ಇದೇ ತಿಂಗಳ ೧೦ ನೇ ತಾರೀಖಿನಂದು ನಮ್ಮ ನ್ಯೂಜರ್ಸಿಯ ಶ್ರೀಕೃಷ್ಣ ವೃಂದಾವನದಲ್ಲಿ ಅದ್ದೂರಿಯಿಂದ ನಡೆದ ಕಲ್ಯಾಣೋತ್ಸವ ಇದಕ್ಕೆ ಒಂದು ನಿದರ್ಶನ.




ಮಂಗಳೂರು ಮತ್ತು ಸುತ್ತಮುತ್ತಲಿನ ಕರಾವಳಿ ಪ್ರದೇಶದ ಸಂಸ್ಕೃತಿ, ದೈವಾರಾಧನೆಯ ಅದ್ದೂರಿಯನ್ನು "ಕಾಂತಾರ" ಚಲನಚಿತ್ರದಲ್ಲಿ ನಾವು ಕಂಡಿದ್ದೇವೆ. ದೈವಗಳನ್ನು ಅಲಂಕರಿಸಲು ಹಳದಿ, ಕೆಂಪು, ಕಪ್ಪು ಹೀಗೆ ಮತ್ತಿತರ ಪ್ರಮುಖ ಬಣ್ಣಗಳ ಉಪಯೋಗ ಅಲ್ಲಿನ ವಿಶೇಷ. ಇದನ್ನೇ ಪ್ರೇರಣೆಯಾಗಿ ಶ್ರೀನಿವಾಸ ಕಲ್ಯಾಣದ ಅಲಂಕಾರಕ್ಕೆ ಬಳಸಿಕೊಂಡರು ಶ್ರೀರಾಘವೇಂದ್ರ ಮೂರ್ತಿ ಮತ್ತು ಅವರ ತಂಡ. ಹೀಗೆ ತಯಾರಾಯಿತು ದೇವರ ಹಿಂದಿನ ಬೃಹದಾಕಾರದ "ಅಣಿ". ಕಾಂತಾರದಲ್ಲಿ ದೈವಗಳ ಅಲಂಕಾರಕ್ಕಾಗಿ ಅವರ ಹಿಂದೆ ಕಟ್ಟಿರುವ ಬಣ್ಣ ಬಣ್ಣದ ಬಿದಿರು ಮತ್ತು ಅಡಿಕೆ ಹೂವಿನ ಅಲಂಕಾರ ನೆನಪಿಗೆ ಬರುತ್ತಲ್ಲಾ? ಅದೇ "ಅಣಿ".

ಆದರೆ ನನ್ನ ಪ್ರಶ್ನೆ : ಬಿದಿರು ಮತ್ತು ಅಡಿಕೆ ಹೂವನ್ನು USA ಗೆ ತಂದವರಾರು? ಈ ಪ್ರಶ್ನೆಗೆ ನಕ್ಕು ಉತ್ತರಿಸಿದರು, ರಾಘವೇಂದ್ರ ಮೂರ್ತಿ. ಬಿದಿರಲ್ಲ ಅದು, ನಾವು ಜ್ಯೂಸ್ ಕುಡಿಯುವ ಸ್ಟ್ರಾ !! ಅಬ್ಬಾ.. ಎಂತಹ ಮನೋಜ್ಞ ಕೈಚಳ. ಇವರ ಈ ಅಪೂರ್ವ ಪ್ರತಿಭೆಗೆ ನಮ್ಮದೊಂದು ನಮನ .

ಪಂಜುರ್ಲಿ ಮತ್ತು ಗುರುವ ದೈವಗಳು ನೆನಪಿದೆಯಲ್ಲಾ, ಆ ದೈವಗಳನ್ನು ತಲೆ-ತಲಾಂತರಗಳಿಂದ ಪೂಜಿಸಿಕೊಂಡು ಬಂದಿರುವವರು ಯಾರು ಗೊತ್ತೇ ? ಮತ್ತಾರೂ ಅಲ್ಲ, ನಮ್ಮ ಆಚಾರ್ಯರೂ, ಶ್ರೀಕೃಷ್ಣ ವೃಂದಾವನದ ಪ್ರಧಾನ ಅರ್ಚಕರೂ ಆದ ಶ್ರೀ ಯೋಗಿಂದ್ರ ಭಟ್ ಉಳಿ ಮನೆತನದವರು. ಅವರ ಅಪ್ರತಿಮ ಹುಮ್ಮಸ್ಸು, ಅಪಾರ ಜ್ಞಾನ, ವಿಷಯವನ್ನು ಎಲ್ಲರಿಗೂ ಅರ್ಥವಾಗುವಂತೆ ವರ್ಣಿಸುವ ಚಾಣಾಕ್ಷತೆ ನಮ್ಮ ಮಾತಿಗೆ ನಿಲುಕದಂತದು. ಆಚಾರ್ಯರು ಶ್ರೀನಿವಾಸ ಕಲ್ಯಾಣದ ಪ್ರತಿಯೊಂದು ವೇದಮಂತ್ರ, ಶ್ಲೋಕ, ಅಚರಣೆ, ಪದ್ಧತಿಗಳನ್ನು ಪರಿಪರಿಯಾಗಿ ಬಿಡಿಸಿ, ವರ್ಣಿಸಿ, ಹೇಳಿದರು. ಇದನ್ನು ಕೇಳಿದ ಪುಟ್ಟ ಮಕ್ಕಳೂ ಮನಸ್ಪೂರ್ವಕವಾಗಿ ಈ ಪೂಜೆಯನ್ನು ಅರ್ಥ ಮಾಡಿಕೊಡು ಸಂತೋಷಪಟ್ಟರು.

ಶ್ರೀನಿವಾಸ ಕಲ್ಯಾಣ ಶುರುವಾಗುತ್ತಲೇ ಭಕ್ತವೃಂದ ಸಭಾಂಗಣದಲ್ಲಿ ನೆರೆದಿತ್ತು. ಸುಮಾರು ೬೦೦ ರಷ್ಟು ಜನ, ಬಹಳಷ್ಟು ಗಂಡಸರು ರೇಶ್ಮೆ ಪಂಚೆ-ಶಲ್ಯ ಹಾಗು ಹೆಂಗಸರು ಫಳ ಫಳಿಸುವ ರೇಶ್ಮೆ ಸೀರೆಯನ್ನುಟ್ಟು ಸಾಲು ಸಾಲಾಗಿ ಕುಳಿತಿದ್ದರು. ಬಣ್ಣದ ಉಡುಗೆಯನ್ನುಟ್ಟ ಪುಟಾಣಿಗಳ ಸಡಗರ ನೋಡಲು ಅದೆಷ್ಟು ಸುಂದರ.

ಶ್ರೀನಿವಾಸನ ವರಪೂಜೆ ವಿಜೃಂಭಣೆಯಿಂದ ನಡೆಯಿತು. ತಾಯಿ ಶ್ರೀದೇವಿ ಹಾಗು ಭೂದೇವಿಯರ ವಜ್ರ ಖಚಿತ ಮೂರುತಿಗಳನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆಯೊಂದಿಗೆ ತರಲಾಯಿತು. ಶ್ರೀ - ಭೂ-ಶ್ರೀನಿವಾಸರಿಗೆ ವಧೂ ವರರ ಅಭಿಷೇಕ ನಡೆಯಿತು. ನೈವೇದ್ಯಕ್ಕೆ ಕೇಳಬೇಕೆ? ಸಾಂಪ್ರದಾಯಿಕ ನೈವೇದ್ಯಗಳಾದ ಚಕ್ಕುಲಿ, ಕೋಡಬಳೆ, ಉಂಡೆಗಳೊಂದಿಗೆ cup cake ಕೂಡ ಶ್ರೀ ಭೂ ಶ್ರೀನಿವಾಸರಿಗೆ ಸಮರ್ಪಿಸಲಾಯಿತು!










ಕಲ್ಯಾಣ ಮಾಡುವಾಗ ಪ್ರತಿಯೊಂದು ಪದದ ಮಧ್ಯದಲ್ಲೂ ಆ ಸೇವೆಗೆ ಅನುಗುಣವಾಗಿ ಸಂಗೀತದ ಸುಮಧುರ ಪದ್ಯಗಳನ್ನು ವೀಣಾ ಅವರ ಸಂಗೀತ ತಂಡ ಹಾಡುತ್ತಿದ್ದರು. ಲಕ್ಷ್ಮೀಷರವರ ಮೃದಂಗದ ನಾದಕ್ಕೆ ಸರಿಯಾಗಿ ಹೊಂದಿಕೊಂಡ ದಾಸರ ಪದ, ಕೀರ್ತನೆಗಳು, ಭಕ್ತಿ ಗೀತೆಗಳ ಮಳೆಯೇ ಸುರಿದಂತಿತ್ತು. ಯಾವ ಕಲ್ಯಾಣವೂ ನಾದಸ್ವರವಿಲ್ಲದೇ ಪರಿಪೂರ್ಣವೆನಿಸುವುದಿಲ್ಲ. ವಧೂವರರು ಹಾರ ಬದಲಾಯಿಸುವಾಗ, ವಧುವಿನ ಕೊರಳಿಗೆ ಮಾಂಗಲ್ಯ ಕಟ್ಟುವಾಗ "ಮಾಂಗಲ್ಯಂ ತಂತುನಾನೇನ... " ಮಂತ್ರದೊಂದಿಗೆ ಗಟ್ಟಿಮೇಳ ಬರಲೇ ಬೇಕು. ಇಲ್ಲದಿದ್ದರೆ ಮದುವೆ - ಮದುವೆ ಎನ್ನಿಸುವುದಿಲ್ಲ, ಅಂತೆಯೇ ನಾದಸ್ವರ, ಮೇಳಗಳನ್ನೂ ಮೊಳಗಿಸಿರು. ಬಳಿಕ ಭಗವದ್ಗೀತೆಯನ್ನು ಕಂಠಪಾಠ ಮಾಡಿದ ಮಕ್ಕಳಿಂದ ಗೀತಾವಾಚನ ಮತ್ತು ಸಂಗೀತ ಸೇವೆ ಕೇಳಲು ಕರ್ಣಾನಂದವಾಗಿತ್ತು.

ತದನಂತರ ಅದ್ದೂರಿಯಾದ ಕೋಲಾಟ ಸೇವೆ ಜರುಗಿತು. " ಲೆಲೆ ಲೆಲೆ..." ಎಂಬ ಶ್ರೀ ವಾದಿರಾಜರು ರಚಿಸಿದ ದಶಾವತಾರದ ತುಳು ಹಾಡಿಗೆ ಲಯಬದ್ಧವಾಗಿ ಕೋಲುಗಳನ್ನು ತಾಡಿಸುತ್ತ, ಕುಣಿಯುತ್ತ, ನಲಿಯುತ್ತ ಶ್ರೀನಿವಾಸನಿಗೆ ನಾಟ್ಯ ಸೇವೆಯನ್ನು ಸಮರ್ಪಿಸಿದರು ಶ್ರೀಮತಿ ದೀಪ್ತಿ ಗಡ್ ಮತ್ತು ಅವರ ತಂಡ. ಹದಿನೈದು ನಿಮಿಷದ ಈ ನೃತ್ಯ, ಕಾಂತಾರದಲ್ಲಿ ಕಂಡ ತುಳುನಾಡಿನ ಸಂಸ್ಕೃತಿಯನ್ನು ಹೊರಚಿಮ್ಮಿಸುವಂತಿತ್ತು. ಬಳಿಕ ಕಲ್ಯಾಣೋತ್ಸವದಲ್ಲಿ ಪಾಲ್ಗೊಂಡ ಭಕ್ತಾಭಿಮಾನಿಗಳೆಲ್ಲರಿಗೂ ಮಹಾಪ್ರಸಾದವಾಗಿ ಅನ್ನ ಸಂತರ್ಪಣೆ ಶ್ರೀ ಸುರೇಶ್ ಭಟ್ ಇವರ ನೇತೃತ್ವದಲ್ಲಿ ನೆರವೇರಿತು.ಹೀಗೆ ಶೃದ್ಧಾ ಭಕ್ತಿ ಮತ್ತು ವಿಜೃಂಭಣೆಯಿಂದ ಅಮೋಘವಾಗಿ ಶ್ರೀ ಶ್ರೀನಿವಾಸ ಕಲ್ಯಾಣವು ಸಂಪನ್ನಗೊಂಡಿತು.



## ಕರುಣಿಸೇ ತಾಯೇ

ವಾಸವಿ ಗುಡೂರ

ಕರುಣಿಸೇ ತಾಯೇ ಕರುಣಿಸೇ ಎನ್ನನು
ಸಿರಿಗನ್ನಡ ನುಡಿ ಸದಾ ಉಸಿರಲಿರುವಂತೆ

ಹೊಟ್ಟೆಯ ಹೊರೆಯೆ ಆಂಗ್ಲವ ಕಲಿತೆನು
ರಾಷ್ಟ್ರಭಾಷೆ ಎನೆ ಹಿಂದಿಗೆ ಒಲಿದೆನು
ಇವೆರಡರ ನಡುವೆ ಕನ್ನಡ ಮರೆತೆನು
ನಿರಭಿಮಾನದಿ ನನ್ನತನ ತೊರೆದೆನು.

ರನ್ನನ ಪಂಪನ ಕಾವ್ಯವ ತಿಳಿಯೆನು
ದಾಸರ ಶರಣರ ವಚನವ ಅರಿಯೆನು
ಕುವೆಂಪು ಬೇಂದ್ರೆಯ ಕವನವ ಓದೆನು
ಪರದೇಶಿಯಂತೆ ಅನ್ಯ ಭಾಷೆಯ ನೆರೆದನು

ಇನ್ನಾದರೂ ನಮ್ಮಲಿ ತಿಳಿವನು ಅರಳಿಸು
ಕನ್ನಡದ ಕಿಡಿಯನು ಎದೆಯಲಿ ಹೊತ್ತಿಸು
ಅಭಿಮಾನದ ಪ್ರಭೆಯ ಎಲ್ಲೆಡೆ ಹರಡಿಸು
ಕನ್ನಡ ಜ್ಯೋತಿಯ ಎಂದೆಂದೂ ಬೆಳಗಿಸು





## ಬದಲಾಗಲೇ ಇಲ್ಲ!

ಎಂ.ವಿ. ಶಶಿಭೂಷಣ ರಾಜು, ಪೆನ್ಸಿಲ್ವೇನಿಯ

ಹುಚ್ಚು ಮನಸಿನ ಹದ್ದು ಮೀರಿದ ವಿನಾಶಗಳ ಕಂಡು
ಕೆಚ್ಚು ತುಂಬಿದ ಎದೆಯೊಳಗೆ ಸುರಿದ ಭಯ ಆತಂಕಗಳು ಬೆಳೆದು
ಸಾಗುವ ದಾರಿಗಳ ತಡೆದು ಮೆದುಳು ತಿರಿಚಿದರೂ ಬದಲಾಗಲೇ ಇಲ್ಲ

ಅಷ್ಟ ಐಶ್ವರ್ಯಗಳ, ಕನಸನು ತೂರಿ
ಇಷ್ಟಮಳೆಯ ಆಗಸವ ತೋರಿ
ರಂಗು ರಂಗಿನ ಕಾಮನಬಿಲ್ಲನು ಮೂಡಿಸಿ
ಝುರ್ರನೆ ಮೇಲಕೆ ಎತ್ತಿ ಆಡುಮಣೆಯಲಿ ಆಡಿಸಿ
ಕಂದಕಗೆ ಜಾರಿಸಿದರೂ ಬದಲಾಗಲೇ ಇಲ್ಲ

ಹಿಗ್ಗುವುದು ತಬ್ಬಿದಾಗ
ಕತ್ತನು ಮೇಲೆತ್ತಿ ಜಂಬದಿಂದ ಜಗ ನೋಡುವುದು
ಸ್ವರ್ಗಕ್ಕೆ ಮೂರೇಗೇಣು ಎಂದು
ಇರದ ಮೆಟ್ಟಿಲೇರುವುದು,
ಮರೆತು ಎಲ್ಲವ, ಆಮೇಲೇರಿದಾಗ
ಸರಕ್ಕನೆ ಬಿಟ್ಟ ಕೈಯಿಂದ
ಪಾತಾಳ ಜಾರಿದರೂ ಬದಲಾಗಲೇ ಇಲ್ಲ

ಇಲ್ಲಿಯ ಸುಖವ ಮೂದಲಿಸಿ
ಅಲ್ಲೆಲ್ಲೋ ಇರುವ ಸುಖಕ್ಕೆ ಧಾವಿಸುವುದು
ಇಲ್ಲಿಯ ತೊರೆಯ ನೀರಿಗೆ ಹೀಗಳೆದು
ಅಲ್ಲಿಯ ಕಲ್ಲು ಕುಟ್ಟುವುದು
ಜಿನುಗಿದ ಪಸೆಗೆ ಹಂಬಲಿಸಿ ದಾಹವನದಿಮಿಡಿದು,
ಗಂಟಲು ಒಣಗಿದರೂ ಬದಲಾಗಲೇ ಇಲ್ಲ

ಎಲ್ಲವೂ ತೆರೆದು ಬಯಲಾದರೂ
ಸಲ್ಲುವ ಬಯಕೆಗೆ ಕಾತರಿಸಿ
ದಾರಿಗುಂಟ ಜಾರಿದ ಸುಖಗಳ ನೆನಸಿ
ತಪ್ಪಿಗೆ ಪಶ್ಚಾತಾಪ ಪಟ್ಟು
ಒಪ್ಪಿತ ಜೀವನ ನಡೆಸಿದರೂ ಮತ್ತೆಳೆಯುವ,
ಜಗವ ಕಂಡು ಬದಲಾಗಲೇ ಇಲ್ಲ



# ನನ್ನ ಕವಿತೆಗಳು

ಮಧುಕರ್ ರಾವ್, ಮೈಸೂರು

## ಕನ್ನಡ

ಕನ್ನಡವೆಂದರೆ ನಮ್ಮ ಜೀವ ನಾಡಿ ಕನ್ನಡ,
ಉಳಿಸಿರಿ, ಬೆಳೆಸಿರೆ, ಬಳಸಿರಿ ಕನ್ನಡ,
ಅನ್ಯಭಾಷಿಕರಿಗೆ ಕಲಿಸಿರಿ ಕನ್ನಡ.
ನಮ್ಮ ನೆಲೆ ಕನ್ನಡ, ನಮ್ಮ ನುಡಿ ಕನ್ನಡ,
ನಮ್ಮ ಕೂಳು ಕನ್ನಡ, ನಮ್ಮ ಬಾಳು ಕನ್ನಡ,
ನಮ್ಮ ಭಾಷೆ ಕನ್ನಡ, ನಮ್ಮ ವಾಸ ಕನ್ನಡ,
ಎಲ್ಲರಲ್ಲಿಯೂ ಗುನುಗಲಿ ಕನ್ನಡ,
ಕರುನಾಡಿನ ಕನ್ನಡಾಂಬೆಯ ಕಲ್ಪತರ ನಾಡು ಕನ್ನಡ.
ನಮ್ಮ ಉಸಿರೇ ಕನ್ನಡ.

ಕನ್ನಡ ನಾಡು ಹೆಮ್ಮೆಯ ನಾಡು,
ಸಾಂಸ್ಕೃತಿಕ ಕಲೆ ಗುಡಿ ಗೋಪುರಗಳ  ಬೀಡು.
ಶ್ರೀಗಂಧದ ನಾಡು, ಮಲೆಗಳ ಬೀಡು,
ರನ್ನ, ಪೊನ್ನ, ಪಂಪ, ರಾಘವಾಂಕರ ನಾಡು,
ಬಸವಣ್ಣ,ಅಲ್ಲಮ, ಅಕ್ಕಮಹಾದೇವಿಯ ನಾಡು,
ಕುವೆಂಪು, ಮಾಸ್ತಿ, ಬೇಂದ್ರೆ, ಕಾರಂತರಂತೆ ಹಲವಾರು
ಕವಿಗಳ ನಾಡು,
ಗಂಗ, ಕದಂಬ, ಚೋಳ, ಹೊಯ್ಸಳರಿಂದ ಯದುವಂಶದ
ಕೊನೆಯ ಕುಡಿವರೆಗೆ ಆಳಿದ ನಾಡು,
ತಲ ಕಾವೇರಿ ಉಗಮದ ಕೊಡಗಿನ ಬೀಡು,
ಕಪಿಲೆ ದಂಡೆಯ ಶ್ರೀರಂಗ, ನಂಜುಂಡನ ಹೆಮ್ಮೆಯ ನಾಡು,
ಪಸರಿಸಲಿ ಎಲ್ಲರ ತನು ಮನಕೆ ಪ್ರೀತಿಯ ಹಾಡು,
ನಮ್ಮ ಕನ್ನಡ ನಾಡು, ಹೆಮ್ಮೆಯ ನಾಡು.

## ಆಂಟಿ

ಹೊರ- ಒಳ ನಾಡಿನ ಜೋಡಿಯ ಭೇಟಿ,
ಪ್ರೇಮವೆಂಬ ಕುರುಡು ಕಣ್ಣ ಕಟ್ಟಿ,
ನಟನೆಯಲ್ಲಿ ಅವ ಬಲು ಘಾಟಿ,
ತರಾತುರಿಯಲ್ಲಿ ತಾಳಿ ಕಟ್ಟಿ
ವರ್ಷ ದಲ್ಲೇ ಅವಳಿಗೆ ಒಂದು ಮಗು ಕೊಟ್ಟಿ,
ಹುಡುಗಿಯಾದಳು ಆಂಟಿ,
ಕುಡುಕ ಗಂಡನ ಪ್ರತಿದಿನದ ನೈಂಟಿ,
ಶಿವನ ಪಾದ ಸೇರಿದ ಕೈಲಾಸ ಮುಟ್ಟಿ.

ಒಂದು ಮಗುವಿನ ಆಂಟಿ-ಒಬ್ಬಂಟಿ.
ಬದುಕನರಸಿ ಬಂದಳು ಕನಸು ಕಟ್ಟಿ,
ಬಾಚಿ ಕರೆಯುವ ಬೆಂಗಳೂರು ಸಿಟಿ,
ಕೆಲಸಗಳ ಕಣಜ ನಮ್ಮ ಐಟಿ ಬಿಟಿ,
ವಿದ್ಯೆಗೆ ತಕ್ಕ ಉದ್ಯೋಗ ಗಳಿಸಿದ ಆಂಟಿ,
ಕೆಲಸಕ್ಕೆ ಸಾರಥಿಯಾಯಿತು ಅವಳ ಸ್ಕೂಟಿ,
ಉಬ್ಬು ತಗ್ಗುಗಳ ರಸ್ತೆ ದಾಟಿ,
ದಟ್ಟ ದುಸ್ಸಾರ ಸಂಚಾರ ಅಡಚಣೆಯ ಮೀಟಿ,
ಪ್ರತಿ ದಿನ ಸಾಗಿತ್ತು ದಾರಿ ಎಲೆಕ್ಟ್ರಾನಿಕ್ ಸಿಟಿ,
ಕನಸುಗಳ ಕೈಲಾಸ - ಹಣದಾಸೆಯ ಬೆನ್ನಟ್ಟಿ.
ಎಲ್ಲಾ ಪಾಳೆಯದಲ್ಲಿ ಕೆಲಸ ಬಲು ತುಟ್ಟಿ,
ಸಾಲದ ಹಣದ ಮನೆಯ ಕಟ್ಟಿ,
ಬಸವಳಿದ ಬದುಕಿನ ಮೇಲೇರುವ ಪೈಪೋಟಿ,
ಬಂದವರಿಗೆಲ್ಲ ಮಣೆ ಹಾಕುವ ಕನ್ನಡಿಗರ ಹೃದಯ ಗಟ್ಟಿ,



## ತೊಟ್ಟಿ ಮನೆ

ಡಾ.ಸುಧಾ ಲಿಂಗರಾಜು

ಹನ್ನೆರಡು ಕಂಬಗಳ ದೊಡ್ಡ ಹಜಾರದ
ತೇಗದ ಕೆತ್ತನೆಯ ಕಲಾಸಿರಿಯ ಮನೆ
ಬಾಂದಳಕೆ ಗವಾಕ್ಷಿಯ ತೆರೆದು
ನಿಸರ್ಗದ ಸೌಂದರ್ಯ
ಕಣ್ತುಂಬಿಕೊಳ್ಳುವ ಮುಂಗಾರು ಮಳೆಯ
ಮುಸಲ ಧಾರೆ ಜಲಪಾತದಂತೆ,
ತೊಟ್ಟಿಯೊಳಗೆ ಧುಮುಕಿರಲು
ಗುಡುಗು,ಮಿಂಚುಗಳ ಆರ್ಭಟ ಸಿಡಿಸಿರಲು
ಕೋಲ್ಮಿಂಚಿನ ಪ್ರಭೆ ಕೋರೈಸಿರಲು
ಮನೆ ಮಂದಿಗೆ ಸಂತಸದ ಹೊನಲು

ಬಾಲ್ಯದ ಆಟ ಪಾಠಗಳು
ಚೌಕ- ಬಾರ,ಅಳ್ಳು ಮಣೆ,,
ಮಾವಿನಕಾಯಿ, ಹುಣಸೆಹಣ್ಣು
ಉಪ್ಪುಕಾರ ಬೆರೆಸಿ
ಮೆದ್ದ ಕ್ಷಣಗಳು
ಮನೆ ಮಂದಿಯರೊಂದಿಗೆ
ಕಳೆದ ಸವಿ ನೆನಪುಗಳು
ನೋವು- ನಲಿವುಗಳ
ಪಿಸುಮಾತುಗಳಿಗೆ
ಮೂಕ ಸಾಕ್ಷಿಯಾದ
ಗೋಡೆಗಳು,ಹೆಂಚುಗಳು
ಕಾಲ ಗರ್ಭದಲ್ಲಿ
ಅವಿತುಕೊಂಡಿವೆ

ಶತಮಾನದ ಇತಿಹಾಸವಿರುವ
ತಾತ,ಮುತ್ತಾತ,ಮಕ್ಕಳು, ಮೊಮ್ಮಕ್ಕಳು ಬಾಳಿ ಬದುಕುತಿರುವ
ತೊಟ್ಟಿ ಮನೆಯಲ್ಲಿ ಹಿರಿಯರ ಆಶೀರ್ವಾದ,ಹಾರೈಕೆಗಳು
ಬದುಕಿನ ಬಂಡಿಗೆ ಇಂಧನಗಳು



## ಗಾಡಿ

ಡಾ. ಹರಿಕುಮಾರ್

ಬಿಡಿದಾರಿ.... ಬಿಡಿದಾರಿ
ಗಾಡಿ - ಹೊನ್ನಗಾಡಿ ಬರುತಿಹುದು
ಊರುಗೋಲು, ಕರಿಯ ಲಾಂದ್ರ ಇಹುದು
ಕುಂಬಾರನ ಊಹೆಗೂ ನಿಲುಕದ ಮಡಕೆಯೂ
ಇಹುದು.

'ಗಾಡಿ' ಬಂದಾಗ ಹಾಡಿ ಹೊಗಳಿ
ಓಡಿ ಬಂದು ಪಾದಕೆ ಶಿರ ಸ್ಪರ್ಶಮಾಡಿ
ಕಾಡಿಬೇಡಿ ಪಡೆದ 'ಮಗ' ಇಳಿಯುವವನು
'ಗುಡಿ' ದೇವರ ಬದಲು ಇವನ ನೋಡಿ

ಗಾಡಿ ನೋಡಿ ಅಚ್ಚರಿ ಬಾರದಿರಲಿ
ಕೆಂಬಣ್ಣದ ಆವೃತ್ತ ಅವರ್ಣನೀಯ
ಅದೇನಾದರೂ ನಿಮ್ಮ ಕೆನ್ನೀರ ಬಣ್ಣವಿರಬಹುದೆ?
ಗಾಡಿಗೆ ಶಾಪ - ಕೋಪಗಳು ಅತೀ ಸಾಮಾನ್ಯ.

ನಾಡಿ ಮಿಡಿತ ಇವ ಚೆನ್ನದ ಖೋಡಿಯೋ
ಎಂಬ ಊಹೆಗಳು ಬೇಡ ಮನದಲಿ
ಇಂದ್ರ ನೋಡಿದ ಚಂದ್ರ ಮಾಡಿದ
ಗಾಡಿಯದು ಆ ಭೀಕರ ಮೋಡಿಯದು

ಈ ಹಿಂದೆ ನೋಡಿಲ್ಲವಾದರೆ ಇಂದು ನೋಡಿ
ಈಗ ನೋಡಿದರೆ ಮತ್ತೆ ನೋಡದಿರಿ
ಈ ಗಾಡಿ ನಮ್ಮಲ್ಲೆ ನೀವು ಕಳೆದುಹೋದ
ಉಗಿ ಬಂಡಿ. ನಿಮ್ಮಲ್ಲಿನ ಮನಗಾಡಿಯ
ಪಯಣದಿಂದ ಆಗದಿರಿ ವಂಚಿತ...!



# ಏಳು ಬಟ್ಟಲ ಬರ್ಫಿ (ಸೆವೆನ್ ಕಪ್ಸ್)

ಗ್ರೀಷ್ಮ

***ಬೇಕಾಗುವ ಸಾಮಾಗ್ರಿಗಳು***

**೧ ಬಟ್ಟಲು ಕಡ್ಲೆ ಹಿಟ್ಟು**
**೧ ಬಟ್ಟಲು ತುಪ್ಪ**
**೧ ಬಟ್ಟಲು ಗೋಡಂಬಿ ಪುಡಿ**
**೧ ಬಟ್ಟಲು ಸಣ್ಣಗೆ ತುರಿದ ತೆಂಗಿನಕಾಯಿ**
**೧ ಬಟ್ಟಲು ಸಕ್ಕರೆ**
**೧ ಬಟ್ಟಲು ಹಾಲು**
**೨ ಚಮಚ ಏಲಕ್ಕಿ ಪುಡಿ**

***ಮಾಡುವ ವಿಧಾನ***

- ಒಂದು ದಪ್ಪ ತಳದ ದೊಡ್ಡ ಬಾಣಲೆಯನ್ನು ಒಲೆಯ ಮೇಲೆ ಸಣ್ಣಉರಿಯಲ್ಲಿ ಇಟ್ಟು, ೧ ಬಟ್ಟಲು ಕಡ್ಲೆ ಹಿಟ್ಟು ಮತ್ತು ೧ ಬಟ್ಟಲು ತುಪ್ಪವನ್ನು ಹಾಕಿ ಒಂದು ನಿಮಿಷ ಹುರಿಯಿರಿ.
- ಇದಕ್ಕೆ ೧ ಬಟ್ಟಲು ತೆಂಗಿನಕಾಯಿ, ೧ ಬಟ್ಟಲು ಗೋಡಂಬಿ ಪುಡಿ, 2 ಬಟ್ಟಲು ಸಕ್ಕರೆ ಮತ್ತು ೧ ಬಟ್ಟಲು ಹಾಲನ್ನು ಸೇರಿಸಿ, ಎಲ್ಲವನ್ನೂ ಚೆನ್ನಾಗಿ ಸಂಯೋಜಿಸಿ.
- ಮಧ್ಯಮ ಉರಿಯಲ್ಲಿ ಬೇಯಿಸುತ್ತಾ, ನಿಧಾನವಾಗಿ ಮಗಚುತ್ತಾ ಇರಿ. ತಳ ಹಿಡಿಯಲು ಬಿಡಬೇಡಿ
- ಮಿಶ್ರಣವು ದಪ್ಪವಾಗುವವರೆಗೆ ಮತ್ತು ಪಾತ್ರೆಯ ಬದಿಗಳಿಂದ ಬಿಟ್ಟುಕೊಳ್ಳುವವರೆಗೆ ಮಗುಚುತ್ತಾ ಇರಬೇ ಕು. ಇದು ಸುಮಾರು ೩೫ ರಿಂದ ೪೫ ನಿಮಿಷಗಳನ್ನು ತೆಗೆದುಕೊಳ್ಳುತ್ತದೆ.
- ಕೊನೆಯಲ್ಲಿ ಏಲಕ್ಕಿ ಪುಡಿಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ
- ತಯಾರಾದ ಮಿಶ್ರಣವನ್ನು ಬೇಕಿಂಗ್ ಪೇಪರ್ ಹಾಕಿದ ಒಂದು ಹರಿವಾಣ ಅಥವಾ ತಟ್ಟೆಯಲ್ಲಿ ಹಾಕಿ ಅರ್ಧ ಇಂಚು ದಪ್ಪ ಬರುವಂತೆ ತಟ್ಟಿ ಅಥವಾ ಲಟ್ಟಣಿಗೆಯಿಂದ ಲಟ್ಟಿ◌ಿಸಿ.
- ಸ್ವಲ್ಪ ತಣಿದ ಮೇಲೆ ಹರಿತವಾದ ಚೂರಿಯಿಂದ ಒಂದೂವರೆ ಅಥವ ಎರಡು ಇಂಚು ಗಾತ್ರದ ಚೌಕಾಕಾರ ಬರುವಂತೆ ಕತ್ತರಿಸಿ.

**ಈ ಸಿಹಿ ಖಾದ್ಯ ಮಾಡಲು ತುಂಬಾ ಸುಲಭ, ತಿನ್ನಲು ಬಲು ರುಚಿ.**
**ಹೆಸರಿಗೆ ತಕ್ಕಂತೆ, ಇದಕ್ಕೆ 7 ಬಗೆಯ ಸಾಮಗ್ರಿಗಳು ಬೇಕು. ಮೇಲೆ ಕೊಟ್ಟಿರುವ ಅಳತೆಯಲ್ಲಿ 20 ರಿಂದ 25 ಬರ್ಫಿ ಮಾಡಬಹುದು.**







# ಸೋರೆಕಾಯಿ ಪಲ್ಯ

ವೈಶಾಲಿ ಚಲಗೇರಿ. (ಅನುವಾದ: ಲಕ್ಷ್ಮಿ ಕೊಲಾಲ್)

ಬೇಕಾಗುವ ಪದಾರ್ಥಗಳು

1 . ಒಂದು ಮಧ್ಯಮ ಗಾತ್ರದ ಸೋರೆಕಾಯಿ .
2 . ಎರಡು ಚಮಚ ಎಣ್ಣೆ.
3 . ಒಂದು ಚಮಚ ಸಾಸಿವೆ.
4 . ಒಂದು ಚಮಚ ಜೀರಿಗೆ .
5 . ಒಂದು ಚಮಚ ಉದ್ದಿನಬೇಳೆ .
6 . ನಾಲಕ್ಕು ಹಸಿಮೆಣಸಿನಕಾಯಿ .
7 . ಒಂದು ಎಸಳು ಕರಿಬೇವಿನ ಸೊಪ್ಪು .
8 . ಒಂದು ಚಿಕ್ಕ ಕಂತೆ ಕೊತ್ತಂಬರಿ ಸೊಪ್ಪು .
9 . ಅರ್ಧ ಕಪ್ ಹಾಲು.
10 . ಎರಡು ಚಮಚ ಹುರಿದ ಕಡಲೇಕಾಯಿ ಬೀಜದ ಪುಡಿ .
11 . ರುಚಿಗೆ ತಕ್ಕಷ್ಟು ಉಪ್ಪು .

ಮಾಡುವ ವಿಧಾನ

ಸೋರೆ ಕಾಯಿಯ ಸಿಪ್ಪೆಯನ್ನು ತೆಗೆದು ಚಿಕ್ಕ ತುಂಡುಗಳಾಗಿ ಕತ್ತರಿಸಬೇಕು ನಂತರ ಸ್ವಲ್ಪ ನೀರಿನಲ್ಲಿ ಇಡಬೇಕು. ಒಂದು ಅಗಲವಾದ ಪಾತ್ರೆಗೆ ಎಣ್ಣೆಯನ್ನು ಹಾಕಿ ಕಾದ ನಂತರ ಸಾಸಿವೆ, ಜೀರಿಗೆ , ಇಂಗು , ಉದ್ದಿನಬೇಳೆ ಹಾಕಿ ಕೆಂಪಾದ ನಂತರ ಮೆಣಸಿನಕಾಯಿ ಮತ್ತು ಕರಿಬೇವಿನ ಸೊಪ್ಪನ್ನು ಹಾಕಬೇಕು ಆಮೇಲೆ ಸೋರೆಕಾಯಿಯ ತುಂಡುಗಳನ್ನು ಹಾಕಿ ಎರಡುನಿಮಿಷ ಮುಚ್ಚಳ ಮುಚ್ಚಿ ಬೇಯಿಸಬೇಕು .ನಂತರ ಹಾಲು ಮತ್ತು ಕಡಲೇಕಾಯಿ ಬೀಜದ ಪುಡಿಯನ್ನು ಬೆರೆಸಿ ಕೆದಕಿ ಎಂಟು ನಿಮಿಷಗಳ ಕಾಲ ಮಧ್ಯಮ ಉರಿಯಲ್ಲಿ ಬೇಯಿಸಬೇಕು . ನಂತರ ರುಚಿಗೆ ತಕ್ಕಷ್ಟು ಉಪ್ಪು ಮತ್ತು ಕೊತ್ತಂಬರಿ ಸೊಪ್ಪನ್ನು ಬೆರೆಸಬೇಕು.
ಈಗ ಪಲ್ಯವು ಸವಿಯಲು ಸಿದ್ಧ .





# ಮುಚ್ಚೋರೆ

ಛಾಯ ಬಟ್ಟೆ (ಅನುವಾದ: ಲಕ್ಷ್ಮಿ ಕೊಲಾಲ್)

ಬೇಕಾಗುವ ಪದಾರ್ಥಗಳು


1 . ಅಕ್ಕಿ ಹಿಟ್ಟು 3 ಕಪ್ಸ್
2 . ಪುಡಿಮಾಡಿದ ಹುರಿಗಡಲೆ 1 ಕಪ್ .
3 . ಪುಡಿಮಾಡಿದ ಕೊಬ್ಬರಿ 1/4 ಕಪ್ .
4 . ಬೆಣ್ಣೆ 2 ಔನ್ಸ್ .
ಉಪ್ಪು ರುಚಿಗೆ ತಕ್ಕಷ್ಟು .
ಅಚ್ಚ ಖಾರದ ಪುಡಿ ರುಚಿಗೆ ತಕ್ಕಷ್ಟು

ಮಾಡುವ ವಿಧಾನ

ಎಲ್ಲವನ್ನು ಚೆನ್ನಾಗಿ ಸ್ವಲ್ಪ ನೀರು ಹಾಕಿ ಕಲಸಿ ಹದವಾದ ಮಿಶ್ರಣವನ್ನು ಮಾಡಿ ಚಕ್ಕುಲಿ ಒರಳಿನಲ್ಲಿ ಹಾಕಿ ಒತ್ತಿ ನಿಮಗಿಷ್ಟವಾದ ಆಕಾರದಲ್ಲಿ ಬಿಸಿಯಾದ ಎಣ್ಣೆಯಲ್ಲಿ ಹಾಕಿ ಕರಿಯಬೇಕು. ಆಗ ರುಚಿಕರವಾದ ಮುಚ್ಚೋರೆ ಸವಿಯಲು ತಯಾರು.



# ಪುಟಾಣಿ—ಪ್ರಪಂಚ





ಅನ್ವಿತಾ ಪ್ರಶಾಂತ್





ವಿದುಲಾ ಕೋಪೆ







ಸಾನ್ವಿ ಕಮಲೇಶ್



# ಕ್ಯಾಮೆರಾ ಕಣ್ಣು



ಸಂಧ್ಯಾ ಮಲ್ಲಿಕ್







ಸಂಧ್ಯಾ ಮಲ್ಲಿಕ್









# ಕ್ಯಾಮೆರಾ ಕಣ್ಣು



ಶ್ರೀವಿದ್ಯಾ ಪ್ರಶಾಂತ್











# ಕ್ಯಾಮೆರಾ ಕಣ್ಣು



ದೀಪ್ತಿ ಗಡ್









# ಬೃಂದಾವನ ವಾಣಿಯ ಈ ೧೨ ಸಂಚಿಕೆಗಳು




ಡಿಸೆಂಬರ್ - ೨೦೨೨





ಅಕ್ಟೋಬರ್ - ೨೦೨೨





ಆಗಸ್ಟ್ ೨೦೨೨




ಜೂನ್ ೨೦೨೨




ಏಪ್ರಿಲ್ ೨೦೨೨





ಫೆಬ್ರವರಿ-2022





ಡಿಸೆಂಬರ್ 2021




ಅಕ್ಟೋಬರ್ - 2021




ಆಗಸ್ಟ್ - 2021




ಜೂನ್ - 2021




ಏಪ್ರಿಲ್ - 2021




ಫೆಬ್ರವರಿ 2021